ಬೆಂಗಳೂರು
ಗುರುವಾರ, 26 ಫೆಬ್ರವರಿ 2026
ಸಂಪುಟ 33, ಸಂಚಿಕೆ 118, ಪುಟಗಳು 14+4
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎಂಎಲ್ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ | ೦೨
ಹುದ್ದೆ ಭರ್ತಿ ಶೀಘ್ರ: ಸಿಎಂ | ೦೨
ಭಾರತ-ಇಸ್ರೇಲ್ ಸಂಬಂಧಕ್ಕೆ ಮತ್ತಷ್ಟು ಬಲ | ೦೨

ಕಿರುಸುದ್ದಿ

ಕುಸುಮ ರೋಗಿಗಳಿಗೆ ಡಿಸಿಎಂ ಡಿಕೆಶಿ ಅಭಯ

• **ಬೆಂಗಳೂರು:** ದೀರ್ಘಕಾಲದ ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಸ್ಥತೆಯಿಂದ ಬಳಲುತ್ತಿರುವ ಹಿಮೋಫಿಲಿಯಾ ರೋಗಿಗಳ ಜತೆಗೆ ಸರ್ಕಾರ ನಿಲ್ಲಲಿದೆ. ರೋಗಿಗಳಿಗೆ ಶಾಶ್ವತ ಪರಿಹಾರ ಮತ್ತು ಘನತೆಯ ಬದುಕು ಒದಗಿಸುವುದು ಕುಸುಮ ಸಂಜೀವಿನಿ ಯೋಜನೆಯ ಧ್ಯೇಯೋದ್ದೇಶವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಧೈರ್ಯ ತುಂಬಿದರು.

• ಪುಟ ೩

ರಾಹುಲ್ ವಿದೇಶಿ ಶಕ್ತಿಗಳ ಕೈಗೊಂಬೆ: ಪಿಯೂಷ್

• **ಹೊಸದಿಲ್ಲಿ:** ಪ್ರಧಾನಿ ಮೋದಿಯವರು ದೇಶಹಿತದ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಳ್ಳುವ ಪ್ರಶ್ನೇ ಇಲ್ಲ, ಆದರೆ ರಾಹುಲ್ ಗಾಂಧಿ,ಅವರ ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್ ವಿದೇಶಿ ಶಕ್ತಿಗಳ ಕೈಗೊಂಬೆಯಾಗಿ ಈಗ ದೇಶದಲ್ಲಿ ಕಾರ್ಯಾಚರಿಸುವ ಮೂಲಕ ದೇಶಹಿತದೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವುದೇ ವಾಸ್ತವ ಸಂಗತಿ ಎಂದು ವಾಣಿಜ್ಯೋದ್ಯಮ ಸಚಿವ ಪಿಯೂಷ್ ಗೋಯಲ್ ತರಾಟೆಗೆತ್ತಿಕೊಂಡಿದ್ದಾರೆ.

• ಪುಟ ೧೦

ಎನ್‌ಸಿಇಆರ್‌ಟಿ ವಿವಾದಿತ ಅಧ್ಯಾಯಕ್ಕೆ ಶೀಘ್ರ ಕತ್ತರಿ?

• ಪುಟ ೧೦

ತುರ್ತು ಪರಿಸ್ಥಿತಿಯಂತೆ ಈ ಬಗ್ಗೆಯೂ ವಿಷಾದ ಖಂಡಿತ

• ಪುಟ ೧೦

ನಟಿ ರನ್ಯಾ ರಾವ್ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ

• ಪುಟ ೨


ಉದ್ಯೋಗ ಭರ್ತಿಗೆ ಕ್ರಮ

• ಪುಟ ೨

ಮೈಕ್ ನಿಷೇಧಗೊಳಿಸುವಂತೆ ಪೊಲೀಸರಿಗೆ ದೂರು

ದೇಗುಲದ ಗಂಟೆ, ಜಾಗಟೆ ಸದ್ದಿಗೆ ಮುಸ್ಲಿಮನ ತಂಟೆ!

• **ಚಿಕ್ಕಮಗಳೂರು:** ದೇವಸ್ಥಾನದಲ್ಲಿ ಪೂಜೆ ವೇಳೆ ಗಂಟೆ, ಜಾಗಟೆ ಬಾರಿಸುವುದಕ್ಕೆ ಮುಸ್ಲಿಂ ವ್ಯಕ್ತಿಯೊಬ್ಬ ಆಕ್ಷೇಪಿಸಿದ್ದು, ಪೊಲೀಸರ ಎದುರೇ ವಾಗ್ವಾದ ನಡೆದ ಘಟನೆ ನಗರದ ಹಳೇ ಉಪ್ಪಳ್ಳಿ ಬಡಾವಣೆಯಲ್ಲಿ ನಡೆದಿದೆ.



ಪುರಾತನ ಕಾಲದ ಈಶ್ವರ ದೇವಾಲಯದ ನವೀಕರಣ ಕಾರ್ಯ ನಡೆಯುತ್ತಿದೆ. ದೇವಸ್ಥಾನದ ಅಕ್ಕಪಕ್ಕದಲ್ಲಿ ಹಿಂದುಗಳು ವಾಸವಿದ್ದಾರೆ. ಸ್ವಲ್ಪ ದೂರದಲ್ಲೇ ಫಾರೂಕ್ ಮನೆಯೂ ಇದೆ. ಈಶ್ವರ ದೇವಸ್ಥಾನದಲ್ಲಿ ಬೆಳಗ್ಗೆ, ಸಂಜೆ ಪೂಜೆ ಮಾಡುವಾಗ ಗಂಟೆ, ಜಾಗಟೆ ಬಾರಿಸುತ್ತಾರೆ, ದೊಡ್ಡದಾಗಿ ಭಜನೆ, ಹಾಡುಗಳನ್ನು ಹಾಕುತ್ತಾರೆ. ಇದರಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಫಾರೂಕ್ ತಕರಾರು ಎತ್ತಿದ್ದಾರೆ.ಬೆಳಗ್ಗೆ 6 ಗಂಟೆಗೆ ಗಂಟೆ, ಜಾಗಟೆ ಬಾರಿಸುವುದರಿಂದ ನಿದ್ದೆ ಹಾಳಾಗುತ್ತಿದೆ. ಮಕ್ಕಳು ಓದಿಕೊಳ್ಳಲು ಆಗುವುದಿಲ್ಲ ಎಂದು ಕ್ಯಾತೆ ತೆಗೆದಿದ್ದು, 112 ಪೊಲೀಸರಿಗೆ ಕರೆಮಾಡಿ ಧ್ವನಿವರ್ಧಕ ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ದೇವಸ್ಥಾನದ ಅರ್ಚಕ ಜಗದೀಶ್ ಭಟ್ ಪ್ರತಿಕ್ರಿಯಿಸಿ, ನಮ್ಮ ಆರಾಧನೆಯಿಂದ ಇನ್ನೊಬ್ಬರಿಗೆ ತೊಂದರೆಯಾಗಲು ನಾವು ಅವಕಾಶ ಕೊಡುವುದಿಲ್ಲ, ಗಂಟೆ, ಜಾಗಟೆಯಿಂದ ಬೇರೆಯವರಿಗೆ ತೊಂದರೆ ಆಗುವಷ್ಟರಮಟ್ಟಿನ ಶಬ್ದ ಬರುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಬಸವನಹಳ್ಳಿ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿದ್ದಾರೆ. ನಾವು ಧ್ವನಿವರ್ಧಕವನ್ನು ನಿಧಾನವಾಗಿ ಬಳಸುತ್ತೇವೆ. ಭಜನೆ ಮತ್ತು ಜಾಗಟೆ ದೇವಾಲಯದ ಭಕ್ತಿಯ ಭಾಗ. ಇದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ಅರ್ಚಕ ಜಗದೀಶ್ ಭಟ್ ಪೊಲೀಸರಿಗೆ ತಿಳಿಸಿದ್ದಾರೆ. ಆದರೆ ಫಾರೂಕ್ ತಮ್ಮ ಮನೆಗೆ ಶಬ್ದ ಬರುತ್ತದೆ. ➡ಪುಟ ೭

ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

• **ಭೋಪಾಲ್:** ಉದ್ಯೋಗ ಆಮಿಷವೊಡ್ಡಿ ಹಿಂದು ಯುವತಿಯರಿಗೆ ಡ್ರಗ್ಸ್ ನೀಡಿ ಅತ್ಯಾಚಾರವೆಸಗಿ ಬಳಿಕ ಮತಾಂತರ ಮಾಡುತ್ತಿದ್ದ ಜಾಲವೊಂದನ್ನು ಮಧ್ಯಪ್ರದೇಶ ಪೊಲೀಸರು ಭೇದಿಸಿದ್ದು, ಈ ಸಂಬಂಧ ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ ಮೂವರನ್ನು ಬಂಧಿಸಿದ್ದಾರೆ. • ವಿವರ ಪುಟ ೩

ಬಸ್ ನಿರ್ವಾಹಕನ ಮೇಲೆ ಮುಸ್ಲಿಮರಿಂದ ತೀವ್ರ ಹಲ್ಲೆ

• **ಕೊಳ್ಳೇಗಾಲ:** ಪಟ್ಟಣದ ಹೊರ ವಲಯದ ಪಾಪನಕೆರೆ ಬಳಿ ಕೆಎಸ್ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಕರಿಬ್ಬರು ಬಸ್ ನಿರ್ವಾಹಕನ ಮೇಲೆ ಗಲಾಟೆ ಮಾಡಿ ಹಲ್ಲೆ



ಮಾಡಿರುವ ಘಟನೆ ಬುಧವಾರ ನಡೆದಿದೆ. ಕನಕಪುರ ತಾಲೂಕಿನ ದೊಡ್ಡಕಬ್ಬಳ್ಳಿ ಗ್ರಾಮದ ಬಸ್ ನಿರ್ವಾಹಕ ಮುನಿ ಮಾದಯ್ಯ (42) ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಯಾಣಿಕರಾದ ಚಾ.ನಗರದ ಫಯಾಜ್ ಅಹಮ್ಮದ್(50), ಮಹಮ್ಮದ್ ಶಾರನ್ (25) ಎಂಬುವರು ಗಲಾಟೆ ಮಾಡಿದ್ದು, ಇವರು ಸಹ ಆಸ್ಪತ್ರೆಗೆ ದಾಖಲಾಗಿದ್ದಾರೆ ಎನ್ನಲಾಗಿದೆ. ➡ಪುಟ ೭

ಮೊಬೈಲ್ ವಿಚಾರ: ಹಿಂದು ಯುವಕನಿಗೆ ಇರಿತ

• **ಚಿತ್ರದುರ್ಗ:** ಕ್ಷುಲ್ಲಕ ಕಾರಣಕ್ಕೆ ಯುವಕನ ಮೇಲೆ ಹಲ್ಲೆ ಮಾಡಿ ಚಾಕು ಇರಿದಿರುವ ಘಟನೆ ಚಿತ್ರದುರ್ಗ ನಗರದ ಸಂತೆಹೊಂಡದ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ. ಗಾಯಗೊಂಡ ಯುವಕನನ್ನು ಮೊಬೈಲ್ ಅಂಗಡಿ ಮಾಲೀಕ ವಿಕ್ರಮ್ ಚೌಧರಿ ಎಂದು ಗುರುತಿಸಲಾಗಿದೆ. ಹಲ್ಲೆ ನಡೆಸಿರುವ ಆರೋಪಿ ಮುಸ್ಲಿಂ ಸಮುದಾಯದವನು ವಿಕ್ರಮ್ ಚೌಧರಿ ಅವರ ಮೊಬೈಲ್ ಅಂಗಡಿಯಲ್ಲಿ ಕಳೆದ ಕೆಲ ದಿನಗಳ ಹಿಂದೆ ತನ್ನ ಮೊಬೈಲ್‌ಗೆ ಸ್ಕ್ರೀನ್ ಗಾರ್ಡ್ ಖರೀದಿಸಿದ್ದ. ಗುರುವಾರ ಮತ್ತೆ ಬಂದು ಬೇರೆ ಬ್ರ್ಯಾಂಡ್ ಮೊಬೈಲ್ ಸ್ಕ್ರೀನ್ ಗಾರ್ಡ್ ಹಾಕಿ ಕೊಡುವಂತೆ ವಿಕ್ರಮ್ ಚೌಧರಿ ಅವರನ್ನು ಕೇಳಿದ್ದ ಎನ್ನಲಾಗಿದೆ. ➡ಪುಟ ೭

ಮೋದಿ ಆಡಳಿತಕ್ಕೆ ಟ್ರಂಪ್ ಪರೋಕ್ಷ ಮೆಚ್ಚುಗೆ

ಯುದ್ಧದಲ್ಲಿ ಪಾಕ್ ಪಿಎಂ ಸಾವಾಗ್ತಿತ್ತು

• **ವಾಷಿಂಗ್ಟನ್:** ಭಾರತ ಮತ್ತು ಪಾಕಿಸ್ತಾನ ಯುದ್ಧ ಸಂಘರ್ಷದಲ್ಲಿ ತಾನು ಮಧ್ಯ ಪ್ರವೇಶಿಸದೆ ಇದ್ದಿದ್ದರೆ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮೃತಪಡುತ್ತಿದ್ದರು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ಭಾರತದ ಆಪರೇಷನ್ ಸಿಂದೂರ ತೀವ್ರತೆ ಬಹಿರಂಗವಾಗಿದೆ.


ಅಲ್ಲದೆ, ಭಾರತೀಯ ಸಶಸ್ತ್ರ ಪಡೆಗಳ ಯುದ್ಧ ಸಾಮರ್ಥ್ಯವನ್ನು ಟ್ರಂಪ್ ಜಗತ್ತಿಗೆ ಸಾರಿದ್ದಾರೆ.

ಅಮೆರಿಕ ಸಂಸತ್ತಿನ ಸ್ಟೇಟ್ ಆಫ್ ದಿ ಯೂನಿಯನ್



ಭಾಷಣದಲ್ಲಿ ಅಧ್ಯಕ್ಷ ಟ್ರಂಪ್, ಜಾಗತಿಕವಾಗಿ ಒಟ್ಟು 8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಇದರಲ್ಲಿ ಭಾರತ ಮತ್ತು ಪಾಕ್ ಸಂಘರ್ಷ ಬಹಳ ಪ್ರಮುಖ ಮತ್ತು ಅತ್ಯಂತ ಅಪಾಯಕಾರಿ ಸಂಘರ್ಷ. ಇವರ ನಡುವಿನ ಪರಮಾಣು ಯುದ್ಧವನ್ನು ತಡೆದಿದ್ದೇನೆ. ಭಾರತ ಮತ್ತು ಪಾಕ್ ನಡುವಿನ ಸಂಘರ್ಷದಲ್ಲಿ ನಾನು ಮಧ್ಯಪ್ರವೇಶಿಸದಿದ್ದರೆ, ಪಾಕ್ ಪ್ರಧಾನಿ ಷರೀಫ್ ಮೃತಪಟ್ಟಿರುತ್ತಿದ್ದರು ಎನ್ನುವ ಮೂಲಕ ಸಿಂದೂರದ ಕಾರ್ಯಾಚರಣೆಯ ತೀವ್ರತೆಯನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ.

11 ಫೈಟರ್ ಜೆಟ್ಸ್ ನಾಶ: 2025ರ ಮೇನಲ್ಲಿ ನಡೆದಿದ್ದ ಸಿಂದೂರ ಕಾರ್ಯಾಚರಣೆ ಕುರಿತು ಕೆಲವು ದಿನಗಳ ಹಿಂದಷ್ಟೇ ಮಾತನಾಡಿದ್ದ ಅಧ್ಯಕ್ಷ ಟ್ರಂಪ್, ಭಾರತ, ಪಾಕ್ ನಡುವಿನ ಸಂಘರ್ಷದಲ್ಲಿ 11 ಯುದ್ಧ ವಿಮಾನಗಳು ಉರುಳಿದ್ದವು. ಬಹಳ ದುಬಾರಿ ಯುದ್ಧ ವಿಮಾನಗಳು ಎಂದಿದ್ದರು. ಭಾರತ ನಡೆಸಿದ ಭಯೋತ್ಪಾದನಾ ವಿರೋಧಿ ಪ್ರತಿದಾಳಿ ವೇಳೆ ಇಷ್ಟೊಂದು ಹಾನಿಯಾಗಿದೆ ಎಂಬರ್ಥದಲ್ಲಿ ದಾಳಿ ತೀವ್ರತೆಯನ್ನು ಉಲ್ಲೇಖಿಸಿದ್ದರು. ಇದೀಗ ಪಾಕ್ ಪ್ರಧಾನಿ, 3.5 ಕೋಟಿ ಜನರ ರಕ್ಷಣೆಗೆ ಯುದ್ಧ ನಿಲ್ಲಿಸಲಾಗಿದೆ ಎಂಬ ಮಾತಿನಿಂದ ಭಾರತದ ದಾಳಿ ಸಾಮರ್ಥ್ಯ ಒಪ್ಪಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಟ್ರಂಪ್ ಪರೋಕ್ಷವಾಗಿ ಮೋದಿ ಆಡಳಿತ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



- ಯುದ್ಧ ನಿಲ್ಲಿಸಿದ್ದು ನಾನೇ ಎಂಬ ಟ್ರಂಪ್ ವರಸೆ ಬದಲು
- ಈಗ ಭಾರತಕ್ಕೆ ಹೊಗಳಿಕೆ
- ನಾನು ಮಧ್ಯ ಪ್ರವೇಶಿಸದಿದ್ದರೆ, ಮೃತಪಡುತ್ತಿದ್ದರು ಪಾಕಿಸ್ತಾನದ ಪ್ರಧಾನಿ
- ಪಾಕ್ ಪ್ರಧಾನಿ ಸ್ವಲ್ಪದರಲ್ಲೇ ಬಚಾವ್ ಆಗಿದ್ದಂತೆ?


ಸಿಂದೂರದ ತೀವ್ರತೆ ಒಪ್ಪಿಕೊಂಡ ಟ್ರಂಪ್



ಕಳೆದ 10 ತಿಂಗಳಲ್ಲಿ 8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಒಂದು ವೇಳೆ ಪಾಕಿಸ್ತಾನ ಮತ್ತು ಭಾರತ ಪರಮಾಣು ಯುದ್ಧ ನಡೆಸಿದ್ದರೆ, ಸುಮಾರು 35 ದಶಲಕ್ಷ (ಮೂರೂವರೆ ಕೋಟಿ) ಜನರು ಮೃತಪಡುತ್ತಿದ್ದರು. ನಾನು ಮಧ್ಯಪ್ರವೇಶಿಸದಿದ್ದರೆ ಪಾಕ್ ಪ್ರಧಾನಿ ಶೆಹಬಾಜ್ ಅವರೇ ಮೃತಪಡುತ್ತಿದ್ದರು ಎಂದು ಟ್ರಂಪ್ ಹೇಳಿದ್ದಾರೆ. ➡ಪುಟ ೭

ಕಬ್ಬು ಪೂರೈಸಿದ ರೈತರಿಗೆ ಆರ್ಥಿಕ ನೆರವು: ಸಚಿವ

• **ಬೆಂಗಳೂರು:** ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ 50 ರೂ.ಗಳ ಆರ್ಥಿಕ ನೆರವಿನ ಮೊತ್ತವಾದ 300 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.



ಕಳೆದ ವರ್ಷ ನ.8ರಂದು ಸಿಎಂ ಕರೆದಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ 100 ರೂ. ಆರ್ಥಿಕ ನೆರವು ನೀಡುವ ನಿರ್ಧಾರ ಪ್ರಕಟಿಸಲಾಗಿತ್ತು. 100 ರೂ. ಆರ್ಥಿಕ ನೆರವಿನಲ್ಲಿ ರಾಜ್ಯ ಸರ್ಕಾರ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳು 50 ರೂ. ನೀಡಬೇಕು ಎಂಬ ತೀರ್ಮಾನವನ್ನು ಕೈಗೊಳ್ಳಲಾಗಿದ್ದು, ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ 300 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಪ್ರಕಟಿಸಿದ್ದಾರೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆ ಆಧರಿಸಿ ಕಬ್ಬು ಅಭಿವೃದ್ಧಿ ಆಯುಕ್ತರು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಿದ್ದಾರೆ. ರಾಜ್ಯದ ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆ ಮಾಡಿದ ಕಬ್ಬಿನ ಪ್ರಮಾಣ ಆಧರಿಸಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರತಿ ಟನ್‌ಗೆ 50 ರೂ.ಗಳಂತೆ ಜಮಾ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ. 2025–26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಿದ್ದು, 29 ಕಾರ್ಖಾನೆಗಳಲ್ಲಿ ಕಬ್ಬು ನುರಿಸುವಿಕೆ ಮುಕ್ತಾಯವಾಗಿದೆ. ಇದುವರೆಗೆ 521 ಲಕ್ಷ ಮೆಟ್ರಿಕ್ ಕಬ್ಬು ನುರಿಸಲಾಗಿದ್ದು, ಈ ಹಂಗಾಮಿನಲ್ಲಿ ಸುಮಾರು 600 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ನಿರೀಕ್ಷೆ ಇದೆ. ಮಾರ್ಚ್ ಮೊದಲ ವಾರದ ವೇಳೆಗೆ ಪ್ರಸಕ್ತ ಹಂಗಾಮಿನ ಕಬ್ಬು ನುರಿಸುವಿಕೆ ಅಂತ್ಯವಾಗಲಿದ್ದು, 600 ಲಕ್ಷ ಮೆಟ್ರಿಕ್ ಟನ್ ನುರಿಸುವ ಅಂದಾಜು ಆಧರಿಸಿ 300 ಕೋಟಿ ರೂ. ಆರ್ಥಿಕ ನೆರವು ಬಿಡುಗಡೆ ಮಾಡಲಾಗಿದೆ ಮಾಹಿತಿ ನೀಡಿದ್ದಾರೆ.


ಮಾರಿಕಾಂಬಾ ರಥೋತ್ಸವ



ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಜಾತ್ರೆ ಅಂಗವಾಗಿ ಬುಧವಾರ ಲಕ್ಷಾಂತರ ಭಕ್ತರ ಹರ್ಷೋದ್ಗಾರ, ಜೈಕಾರದೊಂದಿಗೆ ಅತ್ಯಂತ ಸಡಗರ ಸಂಭ್ರಮದಿಂದ ರಥೋತ್ಸವ ನಡೆಯಿತು.

ಬ್ರಿಕ್ಸ್ ರಾಷ್ಟ್ರಗಳು ಸಹಕರಿಸಲಿ

• **ಬೆಂಗಳೂರು:** ಜಾಗತಿಕ ಅಭಿವೃದ್ಧಿಯನ್ನು ಮುನ್ನಡೆಸುವ ಪ್ರಮುಖ ಒಕ್ಕೂಟವಾಗಿರುವ ಬ್ರಿಕ್ಸ್ ರಾಷ್ಟ್ರಗಳು ಕ್ವಾಂಟಮ್ ತಂತ್ರಜ್ಞಾನದ ಅಭಿವೃದ್ಧಿಗೆ ಪರಸ್ಪರ ಸಹಕಾರಕ್ಕೆ ಮುಂದಾಗಬೇಕು ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಕರೆ ನೀಡಿದರು.



ವಿಧಾನಸೌಧದಲ್ಲಿ ಬ್ರೆಜಿಲ್‌ನ ಸಾರ್ವಜನಿಕ ಸೇವೆಗಳ ನಿರ್ವಹಣೆ ಮತ್ತು ನಾವೀನ್ಯತೆ ಸಚಿವೆ ಎಸ್ತರ್ ಡ್ವೆಕ್ ಅವರ ನೇತೃತ್ವದ ಬ್ರೆಜಿಲ್ ದೇಶದ ಉನ್ನತ ಮಟ್ಟದ ನಿಯೋಗದೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ಆಸಿಯಾನ್ ನಂತಹ ಇತರ ಅಂತಾರಾಷ್ಟ್ರೀಯ ಒಕ್ಕೂಟಗಳು ಈಗಾಗಲೇ ಕ್ವಾಂಟಮ್ ಶೃಂಗಸಭೆಗಳನ್ನು ಆಯೋಜಿಸುತ್ತಿವೆ. ಬ್ರಿಕ್ಸ್ ಸದಸ್ಯರಾಗಿ ನಾವು ಕೃಷಿ, ಔಷಧ ಸಂಶೋಧನೆ ಜಲಸಂಪನ್ಮೂಲ ನಿರ್ವಹಣೆ, ಹವಾಮಾನ ಮುನ್ಸೂಚನೆ ಮತ್ತು ಪ್ರವಾಹ ನಿರ್ವಹಣೆಯನ್ನು ಸುಧಾರಿಸಲು ಕ್ವಾಂಟಮ್ ತಂತ್ರಜ್ಞಾನವನ್ನು ಬಳಸುವ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡಬೇಕು. ಆ ಮೂಲಕ ನಮ್ಮ ಸಮಸ್ಯೆಗಳನ್ನು ಜಂಟಿಯಾಗಿ ಬಗೆಹರಿಸಿಕೊಂಡು ದೇಶದ ಅಭಿವೃದ್ಧಿಗೆ ಮುಂದಾಗಬೇಕಾಗಿದೆ ಎಂದು ಸಚಿವರು ತಿಳಿಸಿದರು.

ರಾಜ್ಯದ ಪ್ರಮುಖ ಸಾಧನೆಗಳನ್ನು ವಿವರಿಸಿದ ಸಚಿವರು, ಕರ್ನಾಟಕ ರಾಜ್ಯ ಈಗಾಗಲೇ ದೇಶದ ಮೊಟ್ಟಮೊದಲ, ಸ್ಥಳೀಯವಾಗಿ ನಿರ್ಮಿಸಲಾದ ವಾಣಿಜ್ಯ ಕ್ವಾಂಟಮ್ ಕಂಪ್ಯೂಟರ್ ಹೊಂದಿದ್ದೇವೆ. ರಾಜ್ಯದ ಮಹತ್ವಾಕಾಂಕ್ಷೆಯ ಗುರಿಗಳನ್ನು ವಿವರಿಸಿದ ಅವರು, 100 ಮಿಲಿಯನ್ ಯುಎಸ್ ಡಾಲರ್ ಮೊತ್ತದ ಕ್ವಾಂಟಮ್ ಇನ್ನೋವೇಶನ್ ಫಂಡ್ ಘೋಷಣೆ ಮತ್ತು ಕ್ವಾಂಟಮ್ ಸಿಟಿ ಅಭಿವೃದ್ಧಿಯೊಂದಿಗೆ ಕರ್ನಾಟಕವು ದೇಶಕ್ಕೇ ಮಾದರಿಯಾಗಿದೆ ಎಂದರು. ಸೋಮವಾರವಷ್ಟೆ ಭೇಟಿಯಾದ ವಿಜ್ಞಾನ ಮತ್ತು ತಂತ್ರಜ್ಞಾನ ಉಪಸಚಿವ ಒಮರ್ ಅಲ್ಫೆಡ್ರೊ, ವೆನಲೋಜಾ ಎಸ್ಕಲೇರಾ ಅವರ ನೇತೃತ್ವದ ನಿಯೋಗವು, ಕಾರ್ಯತಂತ್ರದ ಸಹಕಾರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಸಚಿವ ಎನ್.ಎಸ್.ಭೋಸರಾಜು ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿತು.

ಕಿರುಸುದ್ದಿ

ಸಂಕೇತ್ ಕುಟುಂಬಕ್ಕೆ ಒಂದು ಕೋಟಿ ಪರಿಹಾರ ನೀಡಿ

• **ಶಿವಮೊಗ್ಗ:** ಊರಗಡೂರಿನಲ್ಲಿ ಹತ್ಯೆಯಾದ ಬಾಲಕ ಸಂಕೇತ್ ನಿವಾಸಕ್ಕೆ ಸಂಸದ ಬಿ.ವೈ. ರಾಘವೇಂದ್ರ ಬುಧವಾರ ಭೇಟಿ ನೀಡಿ ಸಾಂತ್ವನ ಹೇಳಿದರು. ಮೃತರ ಕುಟುಂಬಕ್ಕೆ 1 ಲಕ್ಷ ರೂ. ನಗದು ನೀಡಿದರು. ನಂತರ ಮಾಧ್ಯಮದವರ ಜೊತೆ ಮಾತನಾಡಿದ ಸಂಸದ ರಾಘವೇಂದ್ರ, ಮೃತ ಕುಟುಂಬಕ್ಕೆ ಜೀವನಯಾಗಿ ಒಂದು ಕೋಟಿ ರೂ. ನೀಡಬೇಕು. ಕುಟುಂಬ ಮತ್ತು ಜೀವನ ನಿರ್ವಹಣೆಗೂ ಆಧಾರವಾಗಬೇಕು. ಮೃತ ಸಂಕೇತ್ ಅವರ ಏರಿಯಾದಲ್ಲಿ ಭಯದ ವಾತಾವರಣವಿದೆ. ಮನೆ ಮುಂದೆ ರಂಗೋಲಿ ಹಾಕಿ ಹಬ್ಬ ಆಚರಿಸುವ ಸಂದರ್ಭದಲ್ಲಿ ಸ್ಮಶಾನ ಮೌನವಾಗಿದೆ. ಎಲ್ಲೋ ಕುಳಿತುಕೊಂಡು ಸಾಂತ್ವನ ಹೇಳಿದರೆ ಸಾಲದು. ಸರ್ಕಾರ ಜವಾಬ್ದಾರಿತನ ಮೆರೆಯಬೇಕು. ಇಂತಹ ಘಟನೆಯನ್ನು ನಿರ್ಬಂಧಿಸಬೇಕು ಎಂದು ಒತ್ತಾಯಿಸಿದರು. ಮಕ್ಕಳ ನಡುವಿನ ಜಗಳ ಬಿಡಿಸಲು ಹೋದ ಬಾಲಕನ ಹತ್ಯೆಯಾಗಿದೆ. ಇನ್ನೂ ಎಷ್ಟು ಜನರ ಹಿಂದೂಗಳ ಹತ್ಯೆ ನಡೆಯಬೇಕು ಎಂದು ಪ್ರಶ್ನಿಸಿದರು. ಸಣ್ಣ ಹುಡುಗರನ್ನು ಮುಂದಿಟ್ಟುಕೊಂಡು ಹಿಂದು ಸಮಾಜದ ಮೇಲೆ ದಾಳಿ ನಡೆಯುತ್ತಿದೆಯಾ? ಎಂಬ ಅನುಮಾನ ಕಾಡುತ್ತಿದೆ. ಇತ್ತೀಚೆಗೆ ಸೂಳೆಬೈಲು–ಮತ್ತೂರು ರಸ್ತೆಯಲ್ಲಿ ಅಪ್ರಾಪ್ತ ಬಾಲಕರು ಬೈಕ್ ಚಲಾಯಿಸುವಾಗ ಕೋಲು ತೆಗೆದುಕೊಂಡು ಹೊಡೆದುಕೊಂಡು ಹೋಗಿದ್ದಾರೆ. ಈ ಪ್ರಕರಣ ಎಫ್‌ಐಆರ್ ದಾಖಲಾಗಿದೆ. ಶಿರಾಳಕೊಪ್ಪದಲ್ಲಿ ಹಿಂದೂ ಕಾರ್ಯಕರ್ತನ ಮೇಲೆ ಹಲ್ಲೆ ನಡೆದಿದೆ. ಹೀಗೆ ಅಪ್ರಾಪ್ತರನ್ನು ಮುಂದೆ ಇಟ್ಟುಕೊಂಡು ಹತ್ಯೆಗೆ ಧರ್ಮಾಂಧರು ಮುಂದಾಗಿರಬಹುದೇ ಎಂಬ ಅನುಮಾನ ಇದೆ ಎಂದರು.

ಇಂದು ಹಿಂದುಗಳಿಂದ ಪ್ರತಿಭಟನೆ



• **ಬಾಗಲಕೋಟೆ:** ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ನಗರದ ಪಂಕಾ ಮಸೀದಿ ಬಳಿ ನಡೆದ ಕಲ್ಲು ತೂರಾಟ ಘಟನೆಯನ್ನು ಖಂಡಿಸಿ, ಘಟನೆ ನಡೆದ ಸಂದರ್ಭದಲ್ಲಿ ಮಸೀದಿಯಲ್ಲಿದ್ದವರ ಮೇಲೆ ಪ್ರಕರಣ ದಾಖಲಿಸಬೇಕು. ಮಸೀದಿಯ ಮುಖ್ಯಸ್ಥರ ಮೇಲೆ ಪ್ರಕರಣ ದಾಖಲಿಸಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಹಮ್ಮಿಕೊಂಡಿರುವ ಹಿಂದುಗಳ ಹೋರಾಟವನ್ನು ಬಾಗಲಕೋಟೆಯ ಬದಲಾಗಿ ಫೆ.26ರಂದು ನವನಗರದ ಜಿಲ್ಲಾ ಆಡಳಿತ ಭವನದ ಎದುರಿಗೆ ಹಮ್ಮಿಕೊಳ್ಳಲಾಗಿದೆ. ಬಂದೋಬಸ್ತ್‌ಗಾಗಿ ಜಿಲ್ಲಾ ಪೊಲೀಸ್ ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಎಸ್ಪಿ, ಹೆಚ್ಚುವರಿ ಎಸ್ಪಿ ಶ್ರೇಣಿಯ ಅಧಿಕಾರಿಗಳು, 12 ಡಿವೈಎಸ್‌ಪಿಗಳು, 32 ಸಿಪಿಐ, 75 ಪಿಎಸ್‌ಐ ಮತ್ತು 1500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ಹಳೆ ಬಾಗಲಕೋಟೆಯಲ್ಲಿ ಲಾಕ್‌ಡೌನ್ ವಾತಾವರಣ: ಹಿಂದು ಸಮಾಜದವರಿಂದ ಫೆ.26ರಂದು ನಗರದಲ್ಲಿ ಹೋರಾಟ ಹಮ್ಮಿಕೊಂಡಿದ್ದರ ಹಿನ್ನೆಲೆಯಲ್ಲಿ, ಬಾಗಲಕೋಟೆಯಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು, ಕೆಲಸಕ್ಕೆ ವಾಹನಗಳನ್ನು ತೆಗೆದುಕೊಂಡು ಹೋಗುವವರಿಗೆ ಬ್ಯಾರಿಕೇಡ್ ರಸ್ತೆಯಲ್ಲಿ ಹಾಕಿ ಬಂದ್ ಮಾಡಿದ್ದರಿಂದ ತೊಂದರೆಯಾಗುತ್ತಿದ್ದಂತೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಒಂದೊಂದು ಬ್ಯಾರಿಕೇಡ್ ರಸ್ತೆಯ ಬಳಿ ಸರಿಸಿ ಜನರಿಗೆ ರಸ್ತೆ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಯ

ಉದ್ಯೋಗ ಭರ್ತಿಗೆ ಕ್ರಮ

• **ಬೆಂಗಳೂರು:** ನೇಮಕಾತಿಗೆ ಸಂಬಂಧಿಸಿದಂತೆ ಕೆಪಿಎಸ್‌ಸಿ ಸೇರಿದಂತೆ ಬೇರೆ ಸಂಸ್ಥೆಗಳಿಗೆ ಹುದ್ದೆ ಭರ್ತಿಗೆ ಜವಾಬ್ದಾರಿ ನೀಡಿದ್ದೇವೆ. ಶಿಕ್ಷಕರ ಹುದ್ದೆ, ಆರೋಗ್ಯ ಇಲಾಖೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಒಳಮೀಸಲಾತಿ ವಿಚಾರಕ್ಕೆ ಒಂದಷ್ಟು ಅಡಚಣೆಗಳು ಬರುತ್ತಿದೆ.



ನಿರುದ್ಯೋಗಿ ಯುವಕರಿಗೆ ಶಕ್ತಿ ಬರಲಿಎಂದೇಯುವನಿಧಿಯೋಜನೆ ಜಾರಿಗೆ ತಂದಿದ್ದು, ಹುದ್ದೆಗಳನ್ನು ಭರ್ತಿ ಮಾಡಿ ದ್ದೇವೆ, ಮಾಡುತ್ತೇವೆ, ಇದಕ್ಕೆ ಬದ್ಧವಾಗಿದ್ದೇವೆ ಎಂದು ಡಿಸಿಎಂ ಶಿವಕುಮಾರ್ ಅಭಯ ನೀಡಿದರು.

ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಗಲಿಲ್ಲ, ಅವರ ಸಮಯದಲ್ಲಿ ಬಹಳಷ್ಟು ಹಗರಣಗಳಾದವು. ನಮಗೆ ಯುವಕರ ನೋವು ಅರ್ಥವಾಗುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಇದು ನಮ್ಮ ಆದ್ಯತೆ ಎಂದು ಹೇಳಿದರು.

ಮೆಟ್ರೋ ವಿಸ್ತರಣೆ ಸರ್ಕಾರದ ಉದ್ದೇಶಗಳಲ್ಲಿ ಒಂದು

ಮೆಟ್ರೋ ಜಾಲವನ್ನು 2027ರ ಹೊತ್ತಿಗೆ 175 ಕಿಲೋ ಮೀಟರ್‌ಗೆ ವಿಸ್ತರಿಸಲು ಸರ್ವೇ ಮಾಡುತ್ತಿದ್ದೇವೆ. ಮೆಟ್ರೋ ವಿಚಾರವಾಗಿ ನೀಡಿದ ಭರವಸೆಗಳನ್ನು ಈಡೇರಿಸುತ್ತೇವೆ. ಡಬಲ್ ಡೆಕ್ಕರ್ ವಿಚಾರದಲ್ಲಿ ಸಣ್ಣ ಸ್ಪಷ್ಟನೆ ಕೇಳುತ್ತಿರುವ ಕಾರಣಕ್ಕೆ ಸಧ್ಯದಲ್ಲೇ ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೇನೆ. ಮೆಟ್ರೋ ವಿಸ್ತರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಕ್ಕೆ ನಾವು ಬದ್ಧವಾಗಿದ್ದೇವೆ. ಇದು ನಮ್ಮ ಸರ್ಕಾರದ ಉದ್ದೇಶ ಎಂದು ಶಿವಕುಮಾರ್ ಹೇಳಿದರು.

ಗುತ್ತಿಗೆದಾರರ ಜತೆಗೆ ಮಾತುಕತೆ ಮಾಡುತ್ತೇನೆ

ಎಲ್ಲಾ ಇಲಾಖೆಗಳಲ್ಲಿ ಬಿಲ್ ಬಾಕಿ ಇರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯಡಿಯೂರಪ್ಪ ಅವರು ಹಾಗೂ ಬೊಮ್ಮಾಯಿ ಅವರ ಸರ್ಕಾರದಲ್ಲಿ ಯಾವುದೇ ಆರ್ಥಿಕ ಸ್ಥಿತಿಗತಿಯನ್ನು ನೋಡದೆ ಹೆಚ್ಚಿನ ಕಾಮಗಾರಿಗಳಿಗೆ ಅನುಮತಿ ನೀಡಲಾಯಿತು. ಈ ಕಾರಣಕ್ಕೆ ಈಗ ಸಮಸ್ಯೆ ಉಂಟಾಗಿದೆ. ನಾವು ಅನೇಕ ಗುತ್ತಿಗೆದಾರರಿಗೆ ಹಣ ಲಭ್ಯತೆ ಇಲ್ಲದೇ ಇರುವ ಕಾರಣಕ್ಕೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಡಿ ಎಂದು ಸಲಹೆ ನೀಡಿದ್ದರೂ, ಒಂದಷ್ಟು ಜನ ಕಾಮಗಾರಿಗಳನ್ನು ತೆಗೆದುಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು. ಸರ್ಕಾರದ ವಿರುದ್ಧ ಗುತ್ತಿಗೆದಾರರ ಪ್ರತಿಭಟನೆ ಬಗ್ಗೆ ಅವರ ಜತೆಗೆ ಚರ್ಚೆ ಮಾಡುತ್ತೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಟಿ ರನ್ಯಾ ರಾವ್ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ ಇಡಿ

• **ಬೆಂಗಳೂರು:** ಅಕ್ರಮ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ನಟಿ ರನ್ಯಾ ರಾವ್ ಸೇರಿದಂತೆ ಮೂವರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಪಟ್ಟಿ ಸಲ್ಲಿಸಿದ್ದು, 2024ರ ಮಾರ್ಚ್‌ನಿಂದ 2025ರ ಮಾರ್ಚ್ ಅವಧಿಯಲ್ಲಿ ಸುಮಾರು 102.55 ಕೋಟಿ ರೂ. ಮೌಲ್ಯದ 127.28 ಕೆ.ಜಿ ಚಿನ್ನವನ್ನು ಅಕ್ರಮವಾಗಿ ಭಾರತಕ್ಕೆ ಸಾಗಿಸಲಾಗಿದೆ ಎನ್ನುವ ಅಂಶ ತನಿಖೆಯಿಂದ ಬಯಲಾಗಿದೆ.



ಹರ್ಷವರ್ಧಿನಿ ರನ್ಯಾ ಅಲಿಯಾಸ್ ರನ್ಯಾ ರಾವ್, ತರುಣ್ ಕೊಂಡೂರು ಮತ್ತು ಸಾಹಿಲ್ ಸಕರಿಯಾ ಜೈನ್ ವಿರುದ್ಧ ದೊಡ್ಡ ಪ್ರಮಾಣದ ಚಿನ್ನದ ಕಳ್ಳಸಾಗಣೆ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪದಡಿ ಬೆಂಗಳೂರಿನ ಪಿಎಂಎಲ್‌ಎ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದು, ಅಕ್ರಮ ಚಿನ್ನವನ್ನು ದೇಶೀಯ ಮಾರುಕಟ್ಟೆಯಲ್ಲಿ ವ್ಯವಸ್ಥಿತ ಜಾಲದ ಮೂಲಕ ಮಾರಾಟ ಮಾಡಿ, ಇದರಿಂದ ಬಂದ ಹಣವನ್ನು ಹವಾಲಾ ಮಾರ್ಗಗಳ ಮೂಲಕ ವಿದೇಶಕ್ಕೆ ರವಾನಿಸಲಾಗಿದೆ ಎಂದು ಆರೋಪಪಟ್ಟಿಯಲ್ಲಿ ದಾಖಲಿಸಲಾಗಿದೆ.

ಅಲ್ಲದೇ, ಈ ವ್ಯವಹಾರವು ಅತ್ಯಂತ ಸಂಘಟಿತ ರೀತಿಯಲ್ಲಿ ನಡೆದಿದ್ದು, ಅಕ್ರಮ ಹಣವನ್ನು ಕಾನೂನುಬದ್ಧ ವ್ಯಾಪಾರದ ಹಣವೆಂದು ತೋರಿಸಲು ಹತ್ತಾರು ಬ್ಯಾಂಕ್ ಖಾತೆಗಳ ಮೂಲಕ ವರ್ಗಾವಣೆ ಮಾಡಲಾಗಿತ್ತು ಎಂದು ಇ.ಡಿ. ಚಾರ್ಜ್‌ಶೀಟ್‌ನಲ್ಲಿ ಆರೋಪಿಸಿದೆ. ತನಿಖೆಯ ಭಾಗವಾಗಿ ಈಗಾಗಲೇ ರನ್ಯಾ ರಾವ್ ಅವರಿಗೆ ಸೇರಿದ 34 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ದೇಶದ ಹಣಕಾಸು ವ್ಯವಸ್ಥೆಗೆ ಧಕ್ಕೆ ತರುವ ಇಂತಹ ಕೃತ್ಯಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಇ.ಡಿ. ಹೇಳಿದೆ.

2025ರ ಮಾರ್ಚ್ 3 ರಂದು ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಹರ್ಷವರ್ಧಿನಿ ರನ್ಯಾ (ರನ್ಯಾ ರಾವ್) ಅವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದರು. ಈ ವೇಳೆ ಅವರ ಬಳಿಯಿದ್ದ ಸುಮಾರು 12.56 ಕೋಟಿ ರೂ. ಮೌಲ್ಯದ 14.2 ಕೆಜಿ ಚಿನ್ನದ ಬಿಸ್ಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಜೆಡಿಎಸ್ ವಿಪ್ ಉಲ್ಲಂಘನೆ: ನಗರಸಭೆ ಏಳು ಸದಸ್ಯರು ಅನರ್ಹ

• **ನೆಲಮಂಗಲ:** ನಗರಸಭೆ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಮತ ಚಲಾಯಿಸಿದ್ದ ಜೆಡಿಎಸ್‌ನ ಏಳು ಸದಸ್ಯರನ್ನು ವಿಪ್ ಉಲ್ಲಂಘನೆ ದೂರಿನ ಅನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಬಸವರಾಜು ಅವರು ಸದಸ್ಯಸ್ಥಾನದಿಂದ ಅನರ್ಹಗೊಳಿಸಿ ಆದೇಶ ಮಾಡಿದ್ದಾರೆ.

ಆನಂದ್.ಜಿ, ಶಾರದಉಮೇಶ್,ದಾಕ್ಷಾಯಿಣಿ ರವಿಕುಮಾರ್, ಬಿ.ಪದ್ಮನಾಭ, ಭಾರತಿಬಾಯಿ, ನರಸಿಂಹಮೂರ್ತಿ, ಲತಾಹೇಮಂತ್‌ಕುಮಾರ್ ಅನರ್ಹಗೊಂಡ ನಗರಸಭೆ ಸದಸ್ಯರು. ಇವರು ಜೆಡಿಎಸ್ ಬಿ.ಫಾರಂಪಡೆದುಚುನಾವಣೆಗೆದಿದ್ದರು. ಅನಂತರ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. 2025 ಫೆ.13ರಂದು ನಡೆದ ನೆಲಮಂಗಲ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ವಿಪ್ ಜಾರಿಯಾಗಿತ್ತು. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪರ 18 ಮತಗಳು ಚಲಾವಣೆಯಾಗಿ ಗೆಲುವು ಪಡೆದರೆ ಜೆಡಿಎಸ್ ಅಭ್ಯರ್ಥಿ ಹತ್ತು ಮತ ಪಡೆದು ಪರಾಭವಗೊಂಡಿದ್ದರು.

ಕಾಂಗ್ರೆಸ್ ಅಭ್ಯರ್ಥಿಗೆ ಜೆಡಿಎಸ್‌ನಿಂದ ಗೆದ್ದ 7 ಸದಸ್ಯರು ಮತ ಚಲಾವಣೆ ಮಾಡಿದ ಹಿನ್ನೆಲೆಯಲ್ಲಿ

> ಉಪಾಧ್ಯಕ್ಷನಾಗಲು ಕಾಂಗ್ರೆಸ್ ನನಗೆ ಅವಕಾಶ ಮಾಡಿಕೊಟ್ಟಿತ್ತು, ಈಗ ಜಿಲ್ಲಾಧಿಕಾರಿಗಳು ನಮ್ಮ ಏಳು ಸದಸ್ಯರನ್ನು ಅನರ್ಹಗಳಿಸಿದ್ದಾರೆ, ಕಾನೂನಿಗೆ ತಲೆಬಾಗುತ್ತೇವೆ. ಮುಂದಿನ ಕಾನೂನು ಹೋರಾಟ ಮಾಡುತ್ತೇವೆ.
>
> ■ **ಆನಂದ್**, ಅನರ್ಹಗೊಂಡ ನಗರಸಭೆ ಉಪಾಧ್ಯಕ್ಷ

ವಿಪ್ ಉಲ್ಲಂಘನೆಯಾಗಿ ಚುನಾವಣಾ ಅಕ್ರಮ ಮಾಡಿದ್ದಾರೆಂದು ಡಿಸಿಗೆ ಜೆಡಿಎಸ್ ಜಿಲ್ಲಾಧ್ಯಕ್ಷ ಮುನೇಗೌಡ ದೂರು ಸಲ್ಲಿಸಿದ್ದರು. ಈ ಪ್ರಕರಣವನ್ನು ದಾಖಲಿಸಿಕೊಂಡಿದ್ದ ಜಿಲ್ಲಾಧಿಕಾರಿಗಳು ಅರ್ಜಿದಾರರು ಹಾಗೂ ಎದುರುದಾರರನ್ನು ವಿಚಾರಣೆ ಮಾಡಿದ ಬಳಿಕ 7 ಸದಸ್ಯರನ್ನು ಅನರ್ಹಗೊಳಿಸುವ ಮೂಲಕ ಅಂತಿಮ ಆದೇಶ ನೀಡಿದ್ದಾರೆ.

ಸಮಬಲ: ನಗರಸಭೆಯ 7 ಸದಸ್ಯರು ಅನರ್ಹವಾದ ಹಿನ್ನಲೆ ಕಾಂಗ್ರೆಸ್ ಹಾಗೂ ಮೈತ್ರಿ ಪಕ್ಷಗಳ ಸದಸ್ಯ ಬಲ ಸಮಬಲವಾಗಿದೆ. ಮುಂದಿನ ರಾಜಕೀಯ ಲೆಕ್ಕಾಚಾರ ಬೂದಿ ಮುಚ್ಚಿದ ಕೆಂಡದಂತಾಗಿದೆ.

ಗ್ರಾಮಗಳಲ್ಲಿ ಕಾಡಾನೆ ಪ್ರತ್ಯಕ್ಷ: ಆತಂಕ

• **ಚಿಕ್ಕಮಗಳೂರು:** ನಗರ ಸಮೀಪದ ಮೂಗ್ತಿಹಳ್ಳಿ ಮತ್ತು ಶಿರಗುಂದ ಗ್ರಾಮಗಳಲ್ಲಿ ಎರಡು ಆನೆಗಳು ಕಾಣಿಸಿಕೊಂಡು ಭೀತಿ ಮೂಡಿಸಿವೆ. ಅರಣ್ಯ ಇಲಾಖೆಯು ಅವುಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ತಾಲ್ಲೂಕು ದಂಡಾಧಿಕಾರಿಗಳು ತಾಲೂಕಿನ 12 ಗ್ರಾಮಗಳಲ್ಲಿ ಮುಂಜಾಗ್ರತೆಯಾಗಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ತಾಲೂಕಿನ ಹುಣಸೇಹಳ್ಳಿ ಗ್ರಾಮದಲ್ಲಿ ಒಂದೇ ವಾರದ ಅಂತರದಲ್ಲಿ ಇಬ್ಬರನ್ನು ಕಾಡಾನೆ ಬಲಿ ಪಡೆದಿರುವ ಬೆನ್ನಲ್ಲೇ ನಗರ ಸಮೀಪದ ಗ್ರಾಮಗಳಲ್ಲಿ ಆನೆಗಳು ಕಾಣಿಸಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ. ಆನೆಗಳ ಹಾವಳಿಯಿಂದ ಸರಣಿ ಸಾವು–ನೋವು ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಅರಣ್ಯ ಇಲಾಖೆ ಅನಾಹುತ ಸಂಭವಿಸುವಮುನ್ನವೇ ಅವುಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಹಮ್ಮಿಕೊಳ್ಳುತ್ತಿದೆ.

ರೋಸಿ-ಸಿಂಧು ಶ್ವಾನ ಜೋಡಿ ನೆರವು: ಕಾಫಿನಾಡಿನಲ್ಲಿ ಜೀವಭಯ ಮೂಡಿಸಿರುವ ಕಾಡಾನೆಗಳ ಜಾಡು ಪತ್ತೆ ಹಚ್ಚಿ ಅರಣ್ಯ ಇಲಾಖೆಗೆ ನೆರವಾಗಲು ರೋಸಿ ಮತ್ತು ಸಿಂಧು ಹೆಸರಿನ ಶ್ವಾನಗಳು ಸಜ್ಜಾಗಿವೆ.

ವಾರ್ಷಿಕ ಗೌರವ ಪ್ರಶಸ್ತಿ ಪ್ರಕಟ

• **ಬೆಂಗಳೂರು:** ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ತಜ್ಞ ಪ್ರಶಸ್ತಿ ಹಾಗೂ 2024ನೇ ಸಾಲಿನ ಪುಸ್ತಕ ಬಹುಮಾನ ಪಟ್ಟಿ ಪ್ರಕಟಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 30 ಜನ ಕಲಾವಿದರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಯನ್ನು ಮತ್ತು ಇಬ್ಬರು ವಿದ್ವಾಂಸರಿಗೆ ತಜ್ಞ ಪ್ರಶಸ್ತಿಯನ್ನು ಹಾಗೂ ಇಬ್ಬರು ಜಾನಪದ ಲೇಖಕರಿಗೆ 2024ನೇ ಸಾಲಿನ ಪುಸ್ತಕ ಬಹುಮಾನವನ್ನು ಪ್ರದಾನ ಮಾಡಲಾಗುತ್ತಿದೆ. ಚಿಕ್ಕಮಗಳೂರು ರವಿ ಎಚ್.ಎಂ., ಚಾಮರಾಜನಗರದ ಬಸವರಾಜು, ದಕ್ಷಿಣ ಕನ್ನಡ ಜಿಲ್ಲೆ ಸುಮತಿ ಕೊರಗ, ಉಡುಪಿಯ ಗುಲಾಬಿ ಗೌಡ್ತಿ, ಕೊಡಗು ಜಿಲ್ಲೆಯ ಅಮ್ಮಣಿ, ಬೆಳಗಾವಿಯ ಭೀಮಪ್ಪ ಸಿದ್ದಪ್ಪ ಮುತ್ನಾಳ್, ಧಾರವಾಡದ ಪ್ರಕಾಶ ಮಲ್ಲಿಗವಾಡ, ವಿಜಯಪುರದ ಜ್ಯೋತಿರ್ಲಿಂಗ ಹೊನಕಟ್ಟಿ, ಬಾಗಲಕೋಟೆಯ ಚಂದ್ರಲಿಂಗಪ್ಪ ನಿಂಗಪ್ಪ ಬಸರಕೋಡ, ಉತ್ತರ ಕನ್ನಡ ಜಿಲ್ಲೆಯ ಗೌರಿ ನಾಗಪ್ಪ ನಾಯ್ಕ, ಹಾವೇರಿಯ ಭಿಕ್ಷಾಪತಿ ಸುಂಕಪ್ಪ ಮೋತಿ, ಗದಗದ ಕಾಶೀಮಸಾಬ ಹುಸೇನಸಾಬ ಮುಜಾವರ ಅವರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಕಲಬುರ್ಗಿಯ ಭಾಗಪ್ಪ, ಬೀದರದ ಇಂದ್ರಮ್ಮ, ರಾಯಚೂರಿನ ಯಂಕನಗೌಡ, ಕೊಪ್ಪಳದ ರಾಮಣ್ಣ, ವಿಜಯನಗರದ ಕಿಂಡ್ರಿ ಲಕ್ಷ್ಮೀಪತಿ ಹಾಗೂ ಯಾದಗಿರಿಯ ಹಣಮಂತ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ತಜ್ಞ ಪ್ರಶಸ್ತಿ: ತುಮಕೂರು ಜಿಲ್ಲೆ ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಅವರಿಗೆ ಡಾ.ಜೀ.ಶಂ.ಪ ತಜ್ಞ ಪ್ರಶಸ್ತಿ ಕಲಬುರ್ಗಿ ಜಿಲ್ಲೆಯ ಡಾ. ಎಚ್. ಟಿ. ಪೋತೆ ಅವರಿಗೆ ಡಾ.ಬಿ.ಎಸ್.ಗದ್ದಗೀಮಠ ತಜ್ಞ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಫೆ.27ರಂದು ಪ್ರಶಸ್ತಿ ಪ್ರದಾನ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಫೆ.27 ರಂದು ಬೆಳಿಗ್ಗೆ 11.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಸಚಿವ ಶಿವರಾಜ ಎಸ್. ತಂಗಡಗಿ ಕಾರ್ಯಕ್ರಮದ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಾಸಕ ಉದಯ್ ಬಿ.ಗರುಡಾಚಾರ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್, ಡಾ.ಆರ್. ಸುನಂದಮ್ಮ ಭಾಗವಹಿಸಲಿದ್ದಾರೆ.

ಗಡಿನಾಡು ಕನ್ನಡಿಗರ ಸಮಸ್ಯೆಗೆ ಪರಿಹಾರ ನೀಡಿ

• **ಬೆಂಗಳೂರು/ಜತ್ತ:** ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಕನ್ನಡಿಗರ ದಶಕಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಜತ್ ತಾಲೂಕಿನ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ್ ಅವರು ರಾಜ್ಯ ಸರ್ಕಾರದ ಕಾನೂನು ಮತ್ತು ಗಡಿ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.

ನಗರದಲ್ಲಿ ಸಚಿವರನ್ನು ಭೇಟಿ ಮಾಡಿದ ವಿಕ್ರಮಸಿಂಹ ಸಾವಂತ್ ಅವರು, ಮಹಾರಾಷ್ಟ್ರದ ಜತ್, ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ, ಮಂಗಳವೇಢಾ, ಕೊಲ್ಹಾಪುರ ಮತ್ತು ಉಮರ್ಗಾ ಭಾಗದ ಕನ್ನಡಿಗರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು. ಗಡಿಭಾಗದ ಕನ್ನಡಿಗರು ಶಿಕ್ಷಣ, ಕುಡಿಯುವ ನೀರು, ನೀರಾವರಿ, ಆರೋಗ್ಯ, ಉದ್ಯೋಗದಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಇವರಿಗೆ ಸರ್ಕಾರಿ ಯೋಜನೆಗಳು ಸರಿಯಾಗಿ ತಲುಪುತ್ತಿಲ್ಲ. ಹೀಗಾಗಿ ಗಡಿನಾಡು–ಹೊರನಾಡು ಕನ್ನಡಿಗರಿಗೆ ಸಮಾನ ಸ್ಥಾನಮಾನ ನೀಡಬೇಕು ಎಂದು ಸಾವಂತ್ ಒತ್ತಾಯಿಸಿದರು.

ಪ್ರಮುಖ ಬೇಡಿಕೆ

- ಗಡಿಭಾಗದ ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡಲು ಕ್ರಮ ವಹಿಸುವುದು.
- ಗಡಿ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಜಂಟಿ ಕ್ರಿಯಾ ಯೋಜನೆ ರೂಪಿಸುವುದು.

ಪ್ರತ್ಯೇಕ ಪ್ರಕರಣ: ತಹಶೀಲ್ದಾರ್ ರೂಪಗೆ ದಂಡ

• **ಬೆಂಗಳೂರು:** ಸಾರ್ವಜನಿಕರು ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಸಕಾಲದಲ್ಲಿ ಮಾಹಿತಿ ನೀಡದ ಮಾಲೂರು ತಾಲೂಕು ತಹಶೀಲ್ದಾರ್ ರೂಪಾ ಅವರಿಗೆ ಕರ್ನಾಟಕ ಮಾಹಿತಿ ಆಯೋಗದ ಪೀಠ ಸಂಖ್ಯೆ–5ರಲ್ಲಿ ಪ್ರತ್ಯೇಕ ಮೂರು ಪ್ರಕರಣಗಳಿಂದ ಒಟ್ಟು 60 ಸಾವಿರ ರೂ. ದಂಡ ವಿಧಿಸಲಾಗಿದೆ.

ಎರಡು ಪ್ರಕರಣಗಳಲ್ಲಿ ತಲಾ 25 ಸಾವಿರ ರೂ. ಹಾಗೂ ಒಂದು ಪ್ರಕರಣದಲ್ಲಿ 10 ಸಾವಿರ ರೂ.ಗಳ ದಂಡ ವಿಧಿಸಿ ಕರ್ನಾಟಕ ಮಾಹಿತಿ ಆಯೋಗದ ಪೀಠ –5 ರ ರಾಜ್ಯ ಮಾಹಿತಿ ಆಯುಕ್ತರಾದ ರಾಜಶೇಖರ ಎಸ್. ಅವರು ಆದೇಶ ಮಾಡಿದ್ದಾರೆ.

ಮಾಹಿತಿ ಆಯೋಗದ ಆದೇಶ ಇದ್ದರೂ ಸಹ ಮಾಹಿತಿ ನೀಡದೇ ನಿರ್ಲಕ್ಷ್ಯ ತೋರಿಸಿರುವುದು ಹಾಗೂ ವಿಚಾರಣೆಗೆ ಗೈರು ಹಾಜರಾಗಿದ್ದರಿಂದ ದಂಡ ವಿಧಿಸಿದ್ದು, ವೇತನದಲ್ಲಿ ಒಂದೇ ಬಾರಿಗೆ ಕಟಾವು ಮಾಡಿ ಆಯೋಗದ ಖಾತೆಗೆ ತುಂಬುವಂತೆ ಕೋಲಾರ ಸಹಾಯಕ ಆಯುಕ್ತರು ಹಾಗೂ ಕೋಲಾರ ಜಿಲ್ಲಾಧಿಕಾರಿ ಅವರಿಗೆ ನಿರ್ದೇಶನ ನೀಡಿದ್ದಾರೆ.

ರೈಲು ಪ್ರಯಾಣದಲ್ಲಿ ಕಳೆದುಹೋದ ಬ್ಯಾಗ್, ಬೆಲೆಬಾಳುವ ವಸ್ತು ಪತ್ತೆಹಚ್ಚಿ, ಸೂಕ್ತ ಪರಿಶೀಲನೆ ಮಾಡುವ ಕಾಯಕ

ಆರ್‌ಪಿಎಫ್ ಸಿಬ್ಬಂದಿಯಿಂದ ಆಪರೇಷನ್ ಅಮಾನತ್

▸ ಅನುಪಾ ಕೆ.

• **ಬೆಂಗಳೂರು:** ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್, ವಿಶ್ರಾಂತಿ ಕೊಠಡಿ, ರೈಲಿನಲ್ಲಿ ಮುಂತಾದ ಕಡೆಗಳಲ್ಲಿ ಕೆಲ ಪ್ರಯಾಣಿಕರು ತಮ್ಮ ಲಗೇಜು, ಮೊಬೈಲ್, ಪರ್ಸ್ ಸೇರಿದಂತೆ ಹಲವು ಬೆಲೆಬಾಳುವ ವಸ್ತುಗಳನ್ನು ಮರೆತು ಹೋಗುತ್ತಾರೆ. ಅಂತಹ ಲಗೇಜು, ವಸ್ತುಗಳನ್ನು ಹುಡುಕಿ, ಅದನ್ನು ಜೋಪಾನವಾಗಿ ಇಟ್ಟುಕೊಂಡು ಪ್ರಯಾಣಿಕರಿಗೆ ಮರಳಿ ನೀಡುವ ಕಾರ್ಯವನ್ನು ನೈರುತ್ಯ ರೈಲ್ವೆ ಇಲಾಖೆ ಮಾಡುತ್ತಿದೆ.

ಪ್ರಯಾಣಿಕರ ಲಗೇಜುಗಳನ್ನು ಸುರಕ್ಷಿತವಾಗಿ ಮರಳಿ ನೀಡಬೇಕೆನ್ನುವ ನಿಟ್ಟಿನಲ್ಲಿ ನೈರುತ್ಯ ರೈಲ್ವೆ ವತಿಯಿಂದ ಆರ್‌ಪಿಎಫ್ ಸಿಬ್ಬಂದಿಗಳು ಆಪರೇಷನ್ ಅಮಾನತ್ ಎನ್ನುವ ವಿಶೇಷ ಕಾರ್ಯಾಚರಣೆ ನಡೆಸುತ್ತಾರೆ. ಇದರಿಂದ ಪ್ರಯಾಣಿಕರು ರೈಲು ಪ್ರಯಾಣದ ಸಂದರ್ಭದಲ್ಲಿ ಪ್ರಯಾಣಿಕರು ಮರೆತು ಹೋದ ಅಥವಾ ಕಳೆದುಹೋದ ಬ್ಯಾಗ್, ಬೆಲೆಬಾಳುವ ವಸ್ತು ಮತ್ತು ಲಗೇಜ್‌ಗಳನ್ನು ಪತ್ತೆಹಚ್ಚಿ, ಸೂಕ್ತ ಪರಿಶೀಲನೆಯ ನಂತರ ಮರಳಿ ಮಾಲೀಕರಿಗೆ ತಲುಪಿಸುವ ಕಾರ್ಯ ಮಾಡುತ್ತಿದ್ದಾರೆ.

ಅದರಲ್ಲೂ, 2023 ರಿಂದ 2026 ಫೆ.22 ರವರೆಗೆ 2,239 ಪ್ರಯಾಣಿಕರು ರೈಲು ಹಾಗೂ ರೈಲ್ವೆ ನಿಲ್ದಾಣದಲ್ಲಿ ಸುಮಾರು



68,588,794 ಮೌಲ್ಯದ ಸಾಮಗ್ರಿಗಳನ್ನು ಮರೆತು ಹೋಗಿದ್ದರು. ಅವುಗಳನ್ನು ಪ್ರಯಾಣಿಕರಿಗೆ ಹಿಂತಿರುಗಿಸುವಲ್ಲಿ ಆರ್‌ಪಿಎಫ್ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ಪ್ರಯಾಣಿಕರೊಬ್ಬರು ರೈಲಿನಲ್ಲಿನ ಕಳೆದುಕೊಂಡಿದ್ದ 80,000 ರೂ.ಮೌಲ್ಯದ ಚಿನ್ನದ ಉಂಗುರ ಹಾಗೂ ಪ್ರಯಾಣಿಕರೊಬ್ಬರು ಇತ್ತೀಚೆಗೆ ಯಲಹಂಕ ರೈಲ್ವೆ ನಿಲ್ದಾಣದಲ್ಲಿ ಪ್ರಯಾಕರೊಬ್ಬರು ಕಳೆದುಕೊಂಡಿದ್ದ 17 ಲಕ್ಷ ರೂ. ಮೌಲ್ಯದ 100 ಗ್ರಾಂ ಚಿನ್ನಾಭರಣ ಮತ್ತು 2 ಲಕ್ಷ ರೂ.ನಗದು, ಹೀಗೆ ಹಲವು ಪ್ರಯಾಣಿಕರ ಬೆಲೆಬಾಳುವ ಸಾಮಾಗ್ರಿಗಳನ್ನು ಆರ್‌ಪಿಎಫ್ ಸಿಬ್ಬಂದಿ ಮರಳಿಸಿದ್ದಾರೆ.

ಹಿಂತಿರುಗಿಸಲಾದ ಲಗೇಜು, ಮೌಲ್ಯದ(ರೂ.ಗಳಲ್ಲಿ) ವಿವರ

	2023		2024		2025		2026 ಫೆ.22 ರವರೆಗೆ	
ವಿಭಾಗ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ
ಮೈಸೂರು	219	56,26,728	194	50,36,716	266	89,93,732	35	10,62,479
ಬೆಂಗಳೂರು	228	77,42,549	239	84,29,324	256	88,29,605	32	40,32,448
ಹುಬ್ಬಳ್ಳಿ	259	56,39,502	233	61,90,518	233	59,29,594	45	10,75,599
ಒಟ್ಟು ಪ್ರಕರಣ/ಮೊತ್ತ	706	1,90,08,779	666	1,96,56,558	755	2,37,52,931	112	61,70,526

ಕಳೆದುಹೋದ ಲಗೇಜುಗಳನ್ನು ಹೇಗೆ ಪಡೆಯಬಹುದು?

ಪ್ರಯಾಣಿಕರು ರೈಲು ಅಥವಾ ರೈಲ್ವೆ ನಿಲ್ದಾಣದಲ್ಲಿ ಮರೆತು ಹೋದ ತಮ್ಮ ಲಗೇಜುಗಳನ್ನು ಮರಳಿ ಪಡೆಯಲು ಎರಡು ವಿಧಾನವನ್ನು ಹೊಂದಿದೆ. ಅದರಲ್ಲಿ ಮೊದಲನೇಯದಾಗಿ ಪ್ರಯಾಣಿಕರು ಯಾವ ಬೋಗಿಯ ಯಾವ ಬರ್ತ್‌ನಲ್ಲಿ ಲಗೇಜ್ ಬಿಡಲಾಗಿದೆ ಎನ್ನುವ ವಿಚಾರವನ್ನು ರೈಲ್ವೆ ಮದದ್ ದೂರವಾಣಿ ಸಂಖ್ಯೆ 139 ಅಥವಾ ailmadad.indianrailways.gov.in ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಬೇಕು. ಆಗ ಆರ್‌ಪಿಎಫ್ ಸೆಕ್ಯೂರಿಟಿ ಕಂಟ್ರೋಲ್ ರೂಮ್‌ಗೆ ಬರುವ ಮಾಹಿತಿ ಆಧರಿಸಿ ರೈಲಿನ ಮುಂದಿನ ನಿಲ್ದಾಣ ಅಥವಾ ಸನಿಹದ ನಿಲ್ದಾಣಕ್ಕೆ ರವಾನೆ ಆಗುತ್ತದೆ. ತಕ್ಷಣ ಸಿಬ್ಬಂದಿ ಅಲ್ಲಿಗೆ ತೆರಳಿ ಪ್ರಯಾಣಿಕರನ್ನು ಸಂಪರ್ಕಿಸಿ, ವಸ್ತುವಿನ (ಬಣ್ಣ, ವಸ್ತು) ಮಾಹಿತಿ ಪಡೆದು ಸಂಗ್ರಹಿಸುತ್ತಾರೆ. ಠಾಣೆಗೆ ತಂದು ಪ್ರಯಾಣಿಕರನ್ನು ಕರೆಸಿ ಅವರಿಂದ ಸೂಕ್ತ ದಾಖಲೆ ಪಡೆದು ವಸ್ತು ಹಿಂದಿರುಗಿಸುತ್ತಾರೆ.

ಎಚ್‌ಡಿಕೆ ವಿರುದ್ಧ ಭೂ ಒತ್ತುವರಿ ಆರೋಪ

• **ಕಲಬುರಗಿ:** ಕೇತನಗಾನಹಳ್ಳಿ ಗ್ರಾಮದ ಸರ್ಕಾರಿ ಭೂಮಿ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಭೂ ಒತ್ತುವರಿ ಆರೋಪ ಕೇಳಿಬಂದಿದೆ.



ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ದಳ (ಎಸ್‌ಐಟಿ) ರಚನೆ ಮಾಡಿದ್ದು, ತಹಶೀಲ್ದಾರ್ ಮೂಲಕ ನೋಟಿಸ್ ಜಾರಿಗೊಳಿಸಲಾಗಿದೆ. ತಹಶೀಲ್ದಾರರು ನೀಡಿದ ನೋಟಿಸನ್ನು ಪ್ರಶ್ನಿಸಿ ಹಾಗೂ ಅದಕ್ಕೆ ತಡೆ ಕೋರಿ ಕುಮಾರಸ್ವಾಮಿ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಈ ಹಿನ್ನೆಲೆ ಪ್ರಕರಣದ ವಿಚಾರಣೆ ಕಲಬುರಗಿ ವಿಭಾಗೀಯ ಹೈಕೋರ್ಟ್ ಪೀಠದಲ್ಲಿ ನಡೆಯಿತು. ಕಲಬುರಗಿ ವಿಭಾಗೀಯ ಹೈಕೋರ್ಟ್ ಹಾಲ್ ನಂಬರ್ 04ರಲ್ಲಿ ನ್ಯಾಯಮೂರ್ತಿ ಇಂದಿರೇಶ್ ಅವರ ಎದುರು ವಿಚಾರಣೆ ನಡೆದಿದ್ದು, ಪ್ರಕರಣದ ಕುರಿತು ಮುಂದಿನ ವಿಚಾರಣೆ ಮಾರ್ಚ್ 10ಕ್ಕೆ ಮುಂದೂಡಲಾಗಿದೆ.

ಬೆಂಗಳೂರು

ಗುರುವಾರ, 26 ಫೆಬ್ರವರಿ 2026

ಸಂಪುಟ 33, ಸಂಚಿಕೆ 118, ಪುಟಗಳು 14+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಐಇಡಿ ದಾಳಿ ಸಂಚು ವಿಫಲ | ೧೦

ಬಿಎಸ್ಸೆನ್ನೆಲ್: ಬನ್ನಾಲ್‌ಗೆ ಕೇಂದ್ರ ಸರ್ಕಾರದ ನೋಟಿಸ್ | ೧೦

ಸೆಮಿ ನಿರ್ಧರಿಸುವ 2 ಪಂದ್ಯ ಇಂದು | ೧೨

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೃಗಶಿರೆ

ದಿನದ ಮಾತು

ನಿಮ್ಮ ಮಕ್ಕಳು ಏನನ್ನು ಅನುಸರಿಸಬೇಕೆಂದು ಬಯಸುತ್ತೀರೋ ಅದನ್ನು ಆಚರಿಸಿ ತೋರಿಸಿ.

▲ ಲೋಕೋಕ್ತಿ

ಹೆದರಿಕೆಯಿಂದ ಜಗತ್ತು ಗೆಲ್ಲಲು ಸಾಧ್ಯವೇ ಇಲ್ಲ

ಗುರುತರ

• ಸೋಮಶೇಖರ ಸಿ.ಜಿ.

• ಪುಟ ೬

ಕಿರುಸುದ್ದಿ

ಮಾರ್ಚ್ 14ರಂದು ನೌಕಾಪಡೆಗೆ ತಾರಾಗಿರಿ



• **ಹೊಸದಿಲ್ಲಿ:** ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿಯನ್ನು ಸಾಗಿಸುವ ಸಾಮರ್ಥ್ಯವಿರುವ ಸ್ಟೆಲ್ತ್ ಫ್ರಿಗೇಟ್ ತಾರಾಗಿರಿಯನ್ನು ಮಾ.14 ರಂದು ಭಾರತೀಯ ನೌಕಾಪಡೆಗೆ ನಿಯೋಜಿಸಲಾಗುತ್ತಿದೆ. ಇದು ದೇಶದ ಕಡಲ ದಾಳಿ ಸಾಮರ್ಥ್ಯ ಮತ್ತು ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುವ ನಿರೀಕ್ಷೆಯಿದೆ.

• ಪುಟ ೧೦

ಯುದ್ಧಕ್ಕೆ ಕೊಟ್ಟ ಸಾಲ ವಾಪಸ್ ಕೊಡಿ!

• **ಭೋಪಾಲ್:** 'ಸೂರ್ಯ ಅಸ್ತಮಿಸದ ಸಾಮ್ರಾಜ್ಯ' ವೆಂದು ಹೆಮ್ಮೆಪಟ್ಟುಕೊಂಡಿದ್ದ ಬ್ರಿಟಿಷ್ ಸಾಮ್ರಾಜ್ಯಕ್ಕೂ ಒಮ್ಮೆ ಸ್ಥಳೀಯ ವ್ಯಾಪಾರಿಯ ನೆರವು ಬೇಕಾಗಿತ್ತು ಎಂಬ ಕುತೂಹಲಕಾರಿ ಸಂಗತಿ ಮಧ್ಯಪ್ರದೇಶದ ಸಿಹೋರ್ ಪಟ್ಟಣದಲ್ಲಿ ಮತ್ತೆ ಬೆಳಕಿಗೆ ಬಂದಿದೆ. 1917ರಲ್ಲಿ ಬ್ರಿಟಿಷ್ ಸರ್ಕಾರವು ಸೇಠ್ ಜುಮ್ಮಾಲಾಲ್ ರುಥಿಯಾ ಅವರಿಂದ 35,000 ರೂ. ಸಾಲ ಪಡೆದಿದ್ದು, ಇಂದಿಗೂ ಅದನ್ನು ವಾಪಸು ನೀಡಿಲ್ಲವೆಂದು ಅವರ ಕುಟುಂಬ ಆರೋಪಿಸಿದೆ.

• ಪುಟ ೧೦

ಏ.1ರಿಂದ ಆರ್‌ಒಎನ್ 95 ಇ20 ಪೆಟ್ರೋಲ್ ಕಡ್ಡಾಯ

• ಪುಟ ೧೦

ನೀರಿನ ಗುಣಮಟ್ಟಕ್ಕೆ ಆದ್ಯತೆ: ಪ್ರಿಯಾಂಕ್ ಖರ್ಗೆ

• ಪುಟ ೭

ಬೆಳಗಾವಿ ಪಾಲಿಕೆ: ನೀರಿಗಿಂತ ನಾಯಿ ವೆಚ್ಚವೇ ಹೆಚ್ಚು!

• ಪುಟ ೭



ಸ್ವಸ್ಥ ನಾರಿ ಅಭಿಯಾನ

• ಪುಟ ೧೦

ಸುದ್ದಿ ಸಮಗ್ರ

ಇಸ್ರೇಲ್‌ಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಪರಿಣಾಮ

ಭಾರತ-ಇಸ್ರೇಲ್ ಬಂಧ





ಮೋದಿಗೆ ನೆಸೆಟ್ ಅತ್ಯುನ್ನತ ಪದಕ

ಇಸ್ರೇಲ್ ಸಂಸತ್ತು ನೆಸೆಟ್‌ನಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರಿಗೆ ಇಸ್ರೇಲ್ ಸಂಸತ್ತಿನ ಅತ್ಯುನ್ನತ ಗೌರವವಾದ ಸ್ಪೀಕರ್ ಆಫ್ ದಿ ನೆಸೆಟ್ ಪದಕವನ್ನು ನೀಡಿ ಗೌರವಿಸಲಾಯಿತು. ಭಾರತ ಮತ್ತು ಇಸ್ರೇಲ್ ನಡುವಿನ ಸ್ನೇಹ, ಪಾಲುದಾರಿಕೆ ಬಲವರ್ಧನೆಯಲ್ಲಿ ಮೋದಿಯವರ ವೈಯಕ್ತಿಕ ಕೊಡುಗೆಗಾಗಿ ಈ ಗೌರವ ಸಂದಿದೆ. ಮೋದಿ, ನೆಸೆಟ್ ಅತ್ಯುನ್ನತ ಪದಕ ಸ್ವೀಕರಿಸಿದ ಭಾರತದ ಮೊದಲ ಪ್ರಧಾನಿಯಾಗಿದ್ದಾರೆ.

• **ಜೆರುಸಲೇಂ:** ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತವು ಇಸ್ರೇಲ್‌ನೊಂದಿಗೆ ಸದಾ ನಿಲ್ಲುತ್ತದೆ. ಅಕ್ಟೋಬರ್ 7ರಂದು ಹಮಾಸ್ ನಡೆಸಿದ ಅನಾಗರಿಕ ಭಯೋತ್ಪಾದಕ ದಾಳಿಯಲ್ಲಿ ಪ್ರಾಣ ಕಳೆದುಕೊಂಡ ಪ್ರತಿಯೊಬ್ಬರಿಗೂ ಭಾರತದ ಪ್ರತಿ ನಾಗರಿಕನ ಪರವಾಗಿ ನಾನು ಸಂತಾಪ ಸೂಚಿಸುತ್ತೇನೆ. ನಿಮ್ಮ ನೋವನ್ನು ನಾವು ಅನುಭವಿಸುತ್ತಿದ್ದೇವೆ. ನಿಮ್ಮ ದುಃಖವನ್ನು ನಾವು ಹಂಚಿಕೊಳ್ಳುತ್ತೇವೆ. ಭಾರತವು ಈ ಕ್ಷಣದಲ್ಲಿ ಮತ್ತು ಅದರಾಚೆಗೂ ದೃಢ ನಿಶ್ಚಯದಿಂದ ಇಸ್ರೇಲ್‌ನೊಂದಿಗೆ



ನಿಲ್ಲುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.

ನೆಸೆಟ್ (ಇಸ್ರೇಲಿ ಸಂಸತ್ತು) ಉದ್ದೇಶಿಸಿ ಭಾಷಣ ಮಾಡಿದ ಮೋದಿ ಅವರು, ನಾಗರಿಕರ ಹತ್ಯೆಯನ್ನು ಯಾವುದೇ ಕಾರಣಕ್ಕೂ ಸಮರ್ಥಿಸಲು ಸಾಧ್ಯವಿಲ್ಲ, ಯಾವುದೂ ಭಯೋತ್ಪಾದನೆಯನ್ನು ಸಮರ್ಥಿಸಲು ಸಾಧ್ಯವಿಲ್ಲ, ಭಾರತವು ಭಯೋತ್ಪಾದನೆಯ ನೋವನ್ನು ದೀರ್ಘಕಾಲದಿಂದ ಸಹಿಸಿಕೊಂಡಿದೆ. ನಾವು ಮುಂಬೈ ದಾಳಿ ಮತ್ತು ಇಸ್ರೇಲಿ ನಾಗರಿಕರು ಸೇರಿದಂತೆ ಪ್ರಾಣ ಕಳೆದುಕೊಂಡ ಅಮಾಯಕ ಜೀವಗಳನ್ನು ನೆನಪಿಸಿಕೊಳ್ಳುತ್ತೇವೆ ಎಂದು ಮೋದಿ ಹೇಳಿದರು.

ಸದಾ ಭಾರತದ ಬೆಂಬಲ: ಇಸ್ರೇಲ್‌ನಂತೆಯೇ, ಭಾರತವೂ ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ಸ್ಥಿರ ಮತ್ತು ರಾಜಿಯಾಗದ ನೀತಿಯನ್ನು ಹೊಂದಿದ್ದು, ಯಾವುದೇ ದ್ವಂದ್ವ ಮಾನದಂಡಗಳಿಲ್ಲ ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು.

➡ ಪುಟ ೭

ಮೋದಿಗೆ ಅದ್ದೂರಿ ಸ್ವಾಗತ

ನೆಸೆಟ್‌ನಲ್ಲಿ ಪ್ರಧಾನಿ ಮೋದಿಯವರನ್ನು ಇಸ್ರೇಲಿ ಸಂಸದರು ಅದ್ದೂರಿಯಾಗಿ ಸ್ವಾಗತಿಸಿದ್ದಾರೆ. ಅಲ್ಲದೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಸಹೋದರ ಎಂದು ಕರೆದು, ಅವರ ನಡುವಿನ ವಿಶೇಷ ಸಂಬಂಧವನ್ನು ಶ್ಲಾಘಿಸಿದರು. ಇಸ್ರೇಲ್‌ನ ಶ್ರೇಷ್ಠ ಸ್ನೇಹಿತ, ಭಾರತ-ಇಸ್ರೇಲಿ ಮೈತ್ರಿಯ ಶ್ರೇಷ್ಠ ಚಾಂಪಿಯನ್ ಮತ್ತು ವಿಶ್ವ ವೇದಿಕೆಯ ಶ್ರೇಷ್ಠ ನಾಯಕನಾಗಿ ನೀವು ನಮ್ಮೊಂದಿಗೆ ಇಲ್ಲಿಗೆ ಭೇಟಿ ನೀಡಿದ್ದಕ್ಕಿಂತ ಹೆಚ್ಚು ನಾನು ಎಂದಿಗೂ ಪ್ರಭಾವಿತನಾಗಲಿಲ್ಲ ಎಂದು ನೆತನ್ಯಾಹು ಮೋದಿಗೆ ಹೇಳಿದರು. ಇಂದು ಎರಡೂ ದೇಶಗಳು ಹಿಂದೆಂದಿಗಿಂತಲೂ ಬಲಶಾಲಿಯಾಗಿವೆ. ಹಮಾಸ್ ದಾಳಿ ಬಳಿಕ ಕುಗ್ಗಿ ಹೋಗಿದ್ದ ಇಸ್ರೇಲ್‌ಗೆ ಭಾರತ ನೀಡಿದ ಬೆಂಬಲಕ್ಕಾಗಿ ಮೋದಿಗೆ ಧನ್ಯವಾದ ಅರ್ಪಿಸಿದರು.

ಕೇಸರಿ ಬಟ್ಟೆ ಧರಿಸಿ ಮೋದಿ ಸ್ವಾಗತಿಸಿದ ನೆತನ್ಯಾಹು ಪತ್ನಿ

ಪ್ರಧಾನಿ ಮೋದಿ ಟೆಲ್ ಅವೀವ್‌ನಲ್ಲಿ ಬುಧವಾರ ಬಂದಿಳಿದಂತೆ ಅದ್ದೂರಿ ಕೆಂಪು ಹಾಸಿನ ಸ್ವಾಗತ ಪಡೆದರು. ಮೋದಿ ವಿಮಾನದಿಂದ ಇಳಿಯುತ್ತಲೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಅವರ ಪತ್ನಿ ಸಾರಾ ನೆತನ್ಯಾಹು ಎರಡೂ ಕೈಗಳನ್ನು ಜೋಡಿಸಿ ನಮಿಸುತ್ತಲೇ ಆತ್ಮೀಯವಾಗಿ ಸ್ವಾಗತಿಸಿದರು. ಮೋದಿ ಯವರ ಜಾಕೆಟ್‌ನ ಪಾಕೆಟ್ ಸ್ಕ್ವೇರ್ ಮತ್ತು ಸಾರಾ ಧರಿಸಿದ್ದ ಪ್ಯಾಂಟ್‌ಸೂಟ್ ಎರಡೂ ಒಂದೇ ಬಣ್ಣವೆಂದು ನೆತನ್ಯಾಹು ಹೇಳಿದರು.

➡ ಪುಟ ೭



ಕಿಸಾನ್ ಸಭಾ ಟ್ರಸ್ಟ್ ವತಿಯಿಂದ ಕಾರ್ಕಳದ ಬಂಡಿಮಠದ ಬಳಿ ನಿರ್ಮಿಸಲಾದ ಕಿಸಾನ್ ಸಭಾ ಸಭಾಂಗಣವನ್ನು ಸಿಎಂ ಸಿದ್ದರಾಮಯ್ಯ ಅವರು ಬುಧವಾರ ಉದ್ಘಾಟಿಸಿದರು. ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಮಧು ಬಂಗಾರಪ್ಪ, ವಿಧಾನಪರಿಷತ್ ಸದಸ್ಯರಾದ ಐವಾನ್ ಡಿಸೋಜ, ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ. ರಾಜೇಂದ್ರ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಹುದ್ದೆ ಭರ್ತಿ ಶೀಘ್ರ

• **ಮೈಸೂರು:** ಒಳಮೀಸಲಾತಿ ಗೊಂದಲದಿಂದ ಸರಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದ್ದರೂ, ಈಗ ಸಮಸ್ಯೆ ಇತ್ಯರ್ಥಗೊಂಡಿದ್ದು ಶೀಘ್ರದಲ್ಲೇ ನೇಮಕಾತಿ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಉದ್ಯೋಗ ನೇಮಕಾತಿ ಕುರಿತಾಗಿ ಬಜೆಟ್‌ನಲ್ಲಿ ಮಹತ್ವದ ಘೋಷಣೆ ಮಾಡುವ ಸುಳಿವು ನೀಡಿದರು. ಕಾಂಗ್ರೆಸ್ ಕೊಟ್ಟ ಮಾತಿಗೆ ತಪ್ಪಲ್ಲ, ಸರಕಾರಿ ಉದ್ಯೋಗ ನೇಮಕಾತಿ ಮಾಡೇ ಮಾಡ್ತೇವೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿಯವರು ಅಧಿಕಾರದಲ್ಲಿದ್ದ 4 ವರ್ಷಗಳಲ್ಲಿ ಒಂದೇ ಒಂದು ನೇಮಕಾತಿಯನ್ನೂ ಮಾಡಲಿಲ್ಲ, ಅಧಿಕಾರ ಕಳೆದುಕೊಂಡ ನಂತರ ಆಡಳಿತ ಪಕ್ಷದ ವಿರುದ್ಧ ಪ್ರತಿಭಟನೆ ನಡೆಸುವುದು ಬಿಜೆಪಿಗೆ ಚಾಳಿ ಆಗಿದೆ ಎಂದು ವ್ಯಂಗ್ಯವಾಡಿದರು. ಧಾರವಾಡದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಬಿಜೆಪಿ ನಾಯಕರನ್ನು ಸ್ಥಳದಿಂದ ಹೊರಹಾಕಿದ ಘಟನೆಗೆ ಇದೇ ಕಾರಣ ಎಂದರು.

➡ ಪುಟ ೭

ಕಾಡಂಚಿನಲ್ಲಿ ಬೃಹತ್ ಬ್ಯಾರಿಕೇಡ್ ಅಳವಡಿಕೆ

• **ಕಾರ್ಕಳ(ದಕ್ಷಿಣ ಕನ್ನಡ):** ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ- ವನ್ಯಜೀವಿ ಸಂಘರ್ಷ ತಡೆಗೆ ಕಾಡಂಚಿನಲ್ಲಿ ಬೃಹತ್ ಪ್ರಮಾಣದ ಬ್ಯಾರಿಕೇಡ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯದಲ್ಲಿ ಆನೆ, ಹುಲಿ, ಚಿರತೆಗಳು ಜನವಸತಿ ಪ್ರದೇಶಗಳಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಜೀವಹಾನಿಗೂ ಕಾರಣವಾಗಿದೆ. ಈ ವನ್ಯಜೀವಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಜನವಸತಿ ಪ್ರದೇಶಗಳಲ್ಲೂ ಅವು ಸಂಚರಿಸುತ್ತಿವೆ. ಇದರಿಂದ ಮಾನವ ವನ್ಯಜೀವಿ ಸಂಘರ್ಷಗಳು ಹೆಚ್ಚುತ್ತಿವೆ.

➡ ಪುಟ ೭

ಹಿಮೋಫಿಲಿಯಾ ರೋಗ ನಿರೋಧಕ, ಆಂಬುಲೆನ್ಸ್‌ಗೆ ಚಾಲನೆ

ಕುಸುಮ ರೋಗಿಗಳಿಗೆ ಡಿಕೆಶಿ ಅಭಯ

• **ಬೆಂಗಳೂರು:** ದೀರ್ಘಕಾಲದ ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಸ್ಥತೆಯಿಂದ ಬಳಲುತ್ತಿರುವ ಹಿಮೋಫಿಲಿಯಾ ರೋಗಿಗಳ ಜತೆಗೆ ಸರ್ಕಾರ ನಿಲ್ಲಲಿದೆ. ರೋಗಿಗಳಿಗೆ ಶಾಶ್ವತ ಪರಿಹಾರ ಮತ್ತು ಘನತೆಯ ಬದುಕು ಒದಗಿಸುವುದು ಕುಸುಮ ಸಂಜೀವಿನಿ ಯೋಜನೆಯ ಧ್ಯೇಯೋದ್ದೇಶವಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಧೈರ್ಯ ತುಂಬಿದರು.

ಬುಧವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೆಹರೂ ತಾರಾಲಯದಲ್ಲಿ ಆಯೋಜಿಸಿದ್ದ ಕುಸುಮ ಸಂಜೀವಿನಿ ಹಿಮೋಫಿಲಿಯಾ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆ, 108 ಆಂಬುಲೆನ್ಸ್ ಸೇವೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಣ್ಣ ಏಟುಗಳಾದರೂ ಜೀವಭಯದ ಪರಿಸ್ಥಿತಿ ಉಂಟಾಗುವ ಸ್ಥಿತಿ ಬದಲಾಗಬೇಕು. ಹೊಸ ರೋಗನಿರೋಧಕ ಚಿಕಿತ್ಸೆಯಿಂದ ರೋಗಿಗಳು ಸಾಮಾನ್ಯರಂತೆ ಸಕ್ರಿಯ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


➡ ಪುಟ ೭



ಗ್ಯಾರಂಟಿಗಳಿಂದ ಉಂಟಾದ ಹಣದ ಕೊರತೆ ಕಾರಣ

ಕೈಗೆ ಹುದ್ದೆ ಭರ್ತಿ ಮನಸಿಲ್ಲ: ಬಿವೈವಿ

• **ಬೆಂಗಳೂರು:** ಪಂಚ ಗ್ಯಾರಂಟಿಗಳನ್ನು ನಿರ್ವಹಣೆ ಮಾಡಲು ಹಣಕಾಸಿನ ಸಮಸ್ಯೆ ಕಾಡುತ್ತಿರುವುದರಿಂದ ಯಾವುದೇ ನೇಮಕಾತಿ ಮಾಡಲು ಕಾಂಗ್ರೆಸ್ಸಿನವರಿಗೆ ಮನಸ್ಸು ಬರುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು. ಬಿಜೆಪಿ



ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ನೇಮಕಾತಿ ವಿಚಾರದಲ್ಲಿ ವಾಸ್ತವಿಕ ಸತ್ಯವನ್ನು ಬಿಚ್ಚಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನರ ಕ್ಷಮೆ ಕೇಳಬೇಕು ಮತ್ತು ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿಗಳೇ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷವಾಗುತ್ತಿದ್ದರೂ, ಇನ್ನೂ ಬಿಜೆಪಿ ಸರ್ಕಾರವನ್ನು ದೂರುವುದನ್ನು ಮುಂದುವರಿಸಿದ್ದೀರಾ? ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ 1 ವರ್ಷದಲ್ಲಿ ನೇಮಕಾತಿ ಭರವಸೆ ಕೊಟ್ಟಿದ್ದಿರಿ. ಈ ರೀತಿ ಸುಳ್ಳು ಹೇಳುವುದು, ಆರೋಪ ಬಿಟ್ಟು ಕೇವಲ ಪತ್ರಿಕಾ ಹೇಳಿಕೆಗೆ ಸೀಮಿತವಾಗದೆ ನೇಮಕಾತಿ ಕೂಡಲೇ ಪ್ರಾರಂಭಿಸಬೇಕು. ನೇಮಕಾತಿ ಪ್ರಕ್ರಿಯೆ ತಕ್ಷಣ ಪ್ರಾರಂಭಿಸದಿದ್ದರೆ ಬಿಜೆಪಿ ಹೋರಾಟಕ್ಕೆ ಇಳಿಯಲಿದೆ ಎಂದು ಎಚ್ಚರಿಸಿದರು.


➡ ಪುಟ ೭

ಪರಿಗಣಿಸಲು ಎರಡು ವರ್ಷ ಬೇಕಾಯಿತೇ?

ಮುಖ್ಯಮಂತ್ರಿಗಳೇ, ಯುವಜನರ ಪ್ರತಿಭಟನೆ ಪ್ರಾರಂಭವಾಗಿ ಒಂದೂವರೆ, ಎರಡು ವರ್ಷವಾಗಿದೆ. ಪ್ರತಿಭಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎನ್ನಲು ಮುಖ್ಯಮಂತ್ರಿಗಳಿಗೆ 2 ವರ್ಷ ಬೇಕಾಯಿತೇ? ಯಾಕಿಷ್ಟು ದಿನ ನೀವು ಇದರ ಬಗ್ಗೆ ಚಕಾರ ಎತ್ತಿಲ್ಲ? ನಿರುದ್ಯೋಗಿಗಳ ಸಂಕಷ್ಟ ಅರ್ಥ ಮಾಡಿಕೊಳ್ಳಲು ನಿಮಗೆ ಇಷ್ಟು ದಿನ ಬೇಕಾಯಿತೇ ಎಂದು ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

ಕಬ್ಬು ಪೂರೈಸಿದ ರೈತರಿಗೆ ಆರ್ಥಿಕ ನೆರವು

• **ಬೆಂಗಳೂರು:** ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ 50 ರೂ.ಗಳ ಆರ್ಥಿಕ ನೆರವಿನ ಮೊತ್ತವಾದ 300 ಕೋಟಿ ರೂ.



ಬಿಡುಗಡೆ ಮಾಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಕಳೆದ ವರ್ಷ ನ.8 ರಂದು ಮುಖ್ಯಮಂತ್ರಿಗಳು ಕರೆದಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ 100 ರೂ. ಆರ್ಥಿಕ ನೆರವು ನೀಡುವ ನಿರ್ಧಾರ ಪ್ರಕಟಿಸಿದ್ದರು. 100 ರೂ. ಆರ್ಥಿಕ ನೆರವಿನಲ್ಲಿ ರಾಜ್ಯ ಸರ್ಕಾರ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳು 50 ರೂ. ನೀಡಬೇಕು ಎಂಬ ತೀರ್ಮಾನವನ್ನು ಕೈಗೊಳ್ಳಲಾಗಿದ್ದು, ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ 300 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಪ್ರಕಟಿಸಿದ್ದಾರೆ.

• ವಿವರ ಪುಟ ೩

ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ 3 ಸೆರೆ

ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

• **ಭೋಪಾಲ್:** ಉದ್ಯೋಗ ಆಮಿಷವೊಡ್ಡಿ ಹಿಂದು ಯುವತಿಯರಿಗೆ ಡ್ರಗ್ಸ್ ನೀಡಿ ಅತ್ಯಾಚಾರವೆಸಗಿ ಬಳಿಕ ಮತಾಂತರ ಮಾಡುತ್ತಿದ್ದ ಜಾಲವೊಂದನ್ನು ಮಧ್ಯಪ್ರದೇಶ ಪೊಲೀಸರು ಭೇದಿಸಿದ್ದು, ಈ ಸಂಬಂಧ ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ ಮೂವರನ್ನು ಬಂಧಿಸಿದ್ದಾರೆ.

ಮುಸ್ಲಿಂ ಸಹೋದರಿಯರೇ ಈ ಜಾಲದ ಪ್ರಮುಖ ಸೂತ್ರಧಾರರಾಗಿದ್ದು, ಆರ್ಥಿಕವಾಗಿ ಹಿಂದುಳಿದ ಹಿಂದು ಯುವತಿಯರಿಗೆ ನೌಕರಿ ಆಮಿಷವೊಡ್ಡಿ ಬಲವಂತದ ಮತಾಂತರ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಉದ್ಯೋಗ ಆಮಿಷ, ಲೈಂಗಿಕ ಮತಾಂತರ ಜಾಲ(ಸೆಕ್ಸ್ ಟ್ರಾಫಿಕಿಂಗ್) ಡ್ರಗ್ಸ್ ಮತ್ತು ಬಲವಂತದ ಮತಾಂತರ ಜಾಲದ ಮಾಸ್ಟರ್ ಮೈಂಡ್ ಅಮ್ರೀನ್ ಖಾನ್, ಅಫ್ರೀನ್ ಖಾನ್ ಮತ್ತು ಚಂದನ್ ಯಾದವ್ ಬಂಧಿತ ಆರೋಪಿಗಳು. ಚಂದನ್ ಯಾದವ್ ಅಮ್ರೀನ್‌ಳ ಪ್ರಿಯಕರನೆಂಬುದು ಪೊಲೀಸ್ ವಿಚಾರಣೆ ವೇಳೆ ಗೊತ್ತಾಗಿದೆ.

➡ ಪುಟ ೭

ಹಿಂದು ಯುವತಿಯರೇ ಟಾರ್ಗೆಟ್



ಬುರ್ಖಾ ಧರಿಸಲು, ಮುಸ್ಲಿಂ ವ್ಯಕ್ತಿ ವರಿಸಲು ಒತ್ತಾಯ

ಸಂತ್ರಸ್ತೆಗೆ ಬುರ್ಖಾ ಧರಿಸಲು, ಇಸ್ಲಾಂ ಗ್ರಂಥಗಳನ್ನು ಪಠಿಸಲು ಹಾಗೂ ಮತಾಂತರ ಜಾಲದ ಸಂಪರ್ಕದಲ್ಲಿರುವ ಮುಸ್ಲಿಂ ವ್ಯಕ್ತಿಗಳೊಂದಿಗೆ ವಿವಾಹ ಆಗಬೇಕೆಂದೂ, ಮತಾಂತರ ಆಗಬೇಕೆಂದೂ ಒತ್ತಡ ಹಾಕುತ್ತಿದ್ದರು. ಜಾಲದ ಪ್ರಮುಖ ಉದ್ದೇಶ ಮತಾಂತರವೆಂಬುದು ಸ್ಪಷ್ಟವಾಗಿದೆ.

ಎಂಎಲ್‌ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ

• **ಬೆಂಗಳೂರು:** ಸಚಿವ ಸ್ಥಾನಕ್ಕೆ ಒತ್ತಾಯಿಸಿ ಮೊದಲ ಬಾರಿ ಆಯ್ಕೆಯಾಗಿರುವ ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದ ಬೆನ್ನಲ್ಲೇ ವಿಧಾನ ಪರಿಷತ್‌ನ ಸದಸ್ಯರು ಸಹ ಸಚಿವ ಸ್ಥಾನ ಬೇಡಿಕೆಯಿಟ್ಟು ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ನಾಗರಾಜ್ ಯಾದವ್, ಬಲ್ಕಿಸ್ ಬಾನು, ಎಸ್.ಎಫ್. ಜಕ್ಕಪ್ಪನವರ್, ಶಿವಕುಮಾರ್ ಸೇರಿದಂತೆ



ಹಲವು ಸದಸ್ಯರ ನಿಯೋಗವು ಗುರುವಾರ ದಿಲ್ಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರನ್ನು ಭೇಟಿ ಮಾಡಿ ಸಚಿವ ಸ್ಥಾನಕ್ಕೆ ಮನವಿ ಸಲ್ಲಿಸಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕದಿಂದ ಒಂದಲ್ಲ ಒಂದು ಮನವಿ ಬರುತ್ತಿರುವುದರ ನಡುವೆಯೇ ಹೊಸ ಸಮಸ್ಯೆ ತಂದೊಡ್ಡಿದೆ. ವಿಧಾನಪರಿಷತ್‌ನ 24 ಸದಸ್ಯರು ಈ ಪತ್ರಕ್ಕೆ ಸಹಿ ಹಾಕಿದ್ದು, ಕನಿಷ್ಠ 5 ಸಚಿವ ಸ್ಥಾನಗಳನ್ನು ನೀಡಬೇಕು, ಇದರಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಪದವೀಧರ ಕ್ಷೇತ್ರ ಅಥವಾ ಶಿಕ್ಷಕರ ಕ್ಷೇತ್ರ, ವಿಧಾನಸಭೆಯಿಂದ ನಾಮನಿರ್ದೇಶನಗೊಂಡ ತಲಾ ಒಬ್ಬರನ್ನು ಆಯ್ಕೆ ಮಾಡಬೇಕೆಂದು ಮನವಿ ಮಾಡಲಾಗಿದೆ.

➡ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,85,000 (2,85,000)	ಅಪರಂಜಿ ಚಿನ್ನ: 1,61,890 (1,61,780)	ಆಭರಣ ಚಿನ್ನ: 1,48,400 (1,48,300)	ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	ಷೇರು ಸೂಚ್ಯಂಕ	ಬಿಎಸ್‌ಇ 82,276 (50↑)	ಎನ್‌ಎಸ್‌ಇ 25,482 (57↑)	$1 = ₹90.95

IN THE COURT OF XVI ADDL. CITY CIVIL & SESSIONS JUDGE, AT BANGALORE

P & SC NO. 72/2026 (CCH-12)

BETWEEN: Sri. Chandrappa, S/o Dodda Hagadoorappa, aged about 71 years, R/at No. 308, Chandrappa Building, 12th Cross, Bagalagunte, Bengaluru-560073. ... **PETITIONER**

AND: Dynamatic Hydraulics, (A Division of Dynamatic Technologies Limited), No.1A/1, 1st Main Road, 1st Stage, 2nd Phase, Peenya Industrial Area, Bengaluru- 560058. Represented by its Manager/Authorized Signatory.... **RESPONDENT**

PUBLIC NOTICE

Whereas the above named filed this petition under Section 372 of Indian Succession Act for the grant a succession Certificate in favor of the Petitioner, Sri. Chandrappa, in respect of the service benefits and debts held by Respondent No. 1 (Dynamatic Hydraulics) belonging to the deceased Sri. Srinivas C. who was expired on 23-11-2025, Petitioner is the father of late Sri. Srinivas C.

Interested parties are hereby called upon to appear before this court in person or by pleader duly instructed on **17-03-2026** at **11:00 A.M.** inform to show cause against the petitioners failing wherein the appearance will be heard and declared as Ex-parte.

SCHEDULE

Sl.No.	Description of Debt/Security	Name of Entity	Approximate Amount (Rs)
1.	Provident Fund, Gratuity Bonus, and Service Benefits	Dynamatic Hydraulics (Respondent No. 1)	
2.	Unpaid Salary for Nov 2025	Dynamatic Hydraulics (Respondent No. 1)	

Given under my hand & seal of the court, this 17-02-2026.
By order of the Court, Senior Sheristedar, City Civil Court, Bengaluru.

Address for Service
No. 70, 1st floor, Behind Mahaleshwri Temple, Nagasandra post, Bagalagunte, Bengaluru-73. Mob: 9632687583/9743436025

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೊರಟಗೆರೆ

ಪಿ ಅಂಡ್ ಎಸ್.ಸಿ. 01/2026

[illegible]

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೊರಟಗೆರೆ
ಅರ್ಜಿದಾರರ ಪರ ವಕೀಲರು: ದಯಾನಂದ ಎನ್.
ದಾಖಲಾತಿ, ಕೆ.ಎ.ಆರ್. 1885/2008
ಸ್ಥಳ: ಕೊರಟಗೆರೆ ದಿನಾಂಕ: 25.02.2026

ಸಿ.ಮಿಸ್. ಸಂಖ್ಯೆ: 218/2026

[illegible]

By Order of the Court, Sheristedar,
Civil Judge (Jr.Dv.) and JMFC Court, Anekal

PUBLIC NOTICE

Notice is hereby given that the original Sale Deeds pertaining to the immovable property bearing Site No.16, BBMP B-Katha Sl.No. 1869, Property No.109/1, Katha No.109/1/16, situated at Horamavu Agara Village, K.R. Puram Hobli, Bangalore East Taluk, Bangalore, admeasuring 1500 Sq.Ft, standing in the name of Sri. C. Somashekar, have been lost/ misplaced. A detailed lost report has been duly registered under Acknowledgement / Lost Report No. 2080271/2026 dated 24.02.2026

Details of the documents:

1. Sale Deed dated 26.07.1997, Doc. No. 4167/1997-98
2. Sale Deed dated 24.06.2006, Doc. No. 9954/2006-07
3. Sale Deed dated 25.05.2011, Doc. No. 1349/2011-12

If any person finds the above documents or has any claim, right, title, interest, or objection over the said property, they are hereby called upon to notify the undersigned within 7 days from the date of publication of this notice, failing which it shall be presumed that no objections exist.

MANJU .K, Advocate
OFF: No.195/B, KCR TOWER,
2nd Floor, 1st 'N' Block, Rajajinagar,
Bangalore - 560 010.
Place : Bangalore Date : 25.02.2026

ಸಿ.ಮಿಸ್. ಸಂಖ್ಯೆ: 309/2026

[illegible]

By Order of the Court, Sheristedar,
Civil Judge (Jr.Dv.) and JMFC Court, Anekal

CHANGE OF NAME

I, CHINMAYA S KUDARI (CHINMAYA SATYANARAYAN KUDARI), aged about 35 years, S/o. Satyanarayan Sankkappa Kudari, No. 181/E/26, Ward, No. 1 Joshigalli Ilkal, Bagalkot-587125, do hereby declare that I have changed my name from **CHINMAYA SATYANARAN KUDARI** to **CHINMAYA S KUDARI (CHINMAYA SATYANARAYAN KUDARI)**, vide affidavit dated 25.02.2026, sworn to before K.V. Mani, Advocate & Notary, Govt. of India, Bengaluru.

CHANGE OF NAME

I, KAVYASHREE H P W/o. Tejas A P, residing at No.39, A Block, Jalapuri, VTC Mysore Udayagiri, Mysore, Karnataka-570019, do hereby declare that I have changed my name from **Kavyashree Halale Pandurang** to **Kavyashree Austakar Tejas**, vide affidavit dated 24.12.2025, sworn to before Rajkumar, Notary Public, Govt. of India, Bengaluru.

CHANGE OF NAME

I, ANANYA RAKESHA, aged about 18 years, D/o. Rakesha Mankale Shivananda, FF 102, Vasupradha Apartments 7th B Main Road, Narayana Nagar 3rd Block, Doddakallasandra, Bengaluru-560062, do hereby declare that I have changed my name from **ANANYA RAKESHA** to **ANANYA MANKALE RAKESHA** vide affidavit dated 25.02.2026, sworn to before K.V. Mani, Advocate & Notary, Govt. of India, Bengaluru.

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಕುಣಿಗಲ್

ಸಿ.ಮಿಸ್. ಸಂಖ್ಯೆ: 488/2026

[illegible]

ಸಾರ್ವಜನಿಕ ಪ್ರಕಟಣೆ

[illegible]

ಶಿರಸ್ತೇದಾರರು, ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್
ಕೆ.ಎಂ.ತಿಮ್ಮಯ್ಯ, ವಕೀಲರು ಮತ್ತು ಮಧ್ಯಸ್ಥಿಕೆದಾರರು, ಕುಣಿಗಲ್-572130

ಕ್ರಿಮಿನಲ್ ಮಿಸ್. ನಂ. 1650/2025

[illegible]

IN THE COURT OF THE (21st SCCH) ADDITIONAL JUDGE OF SMALL CAUSE JUDGES AT BANGALORE (MAYO HALL UNIT)

C.C. No. 55514/2018

COMPLAINANT : SRI. NARAYANA REDDY, S/o Hanumanth Reddy, Aged about 44 years, Residing at near Jayalakshmi high school, subbaianapalya, M.S. Nagar post, Bangalore-560033. Mobile 8310293592

-V/s-

ACCUSED: SRI. SHIVAKUMAR .H, S/o K.R.Hanumantha Reddy, Aged about 38 years, Residing at Kenkere Village & post, Hosur Hobli, Gowribidnur Taluk, Chikkaballapur District, PIN 561210. MObile 9739912139.

PROCLAMATION

Whereas complaint has been filed before me against SRI. SHIVAKUMAR.H, S/o K.R.Hanumantha Reddy, Aged about 38 years, Residing at Kenkere Village & post, Hosur Hobli, Gowribidnur Taluk, Chikkaballapur District, PIN 561210. Mobile 9739912139. And warrant of arrest thereupon issued has returned that the said accused cannot be found and whereas it has been shown to my satisfaction that there is not chance of securing the said accused.

Proclamation is hereby made that Accused is required to appear before this court to answer the said complain on **15-04-2026.**

Given under my hand and the seal of this court on 21-02-2026

By order of the court, Sheristedar, Court of Small Causes, Mayo Hall Unit, Bangalore.

IN THE COURT OF CITY CIVIL COURT AT BENGALURU

S.C No.250/2022

Between: Union Bank of India, Rajarajeshwarinagara Branch, Office at No. 148, Gururaghavendra Complex, Basaveshwara Circle, BEML 3rd Stage, Rajarajeshwarinagara, Bangalore- 560 098. Represented by its Manager. Mr. Manjunata Virbhadra Teli, S/o. Virbhadra Teli, aged about 35 Years ...**Plaintiff**

And: Mr. Indradev Yadav ...Defendant

SUMMONS TO DEFENDANT UNDER ORDER V RULE 20 OF CPC

Mr. Indradev Yadav, S/o. Sukar Yadav, aged about Major, R/at. No.1, 2nd Cross, New Behul Church, Ambedkar Nagar, Okali Puram, Bangalore- 560 021.

Whereas the above named Plaintiff has instituted the above suit against the Defendant for recovery of sum of Rs. 1,22,131.89/- (Rupees One Lakh Twenty Two Thousand One Hundred and Thirty one Rupees and Eighty Nine Paisa Only) with future interest @10.35% per annum outstanding as on 17/06/2021 along with interest from 18/06/2021 till the date of repayment and other reliefs.

You are here by summoned to appear before Small Causes Court Judge at Bangalore (SCCH-4) in person or by a pleader on **27/03/2026** at **11:00 A.M.** to answer the same, failing which the suit will be heard and determined ex-parte.

Given under my hand and the seal of the court on this 20/02/2026

By order of the Court, Assistant Registrar, Court of Small Causes, Bengaluru

PRAVEEN M.R. Advocate
No.188, 3rd Floor, 2nd Cross Road,
5th Phase, Sachidanandha Nagar,
R.R. Nagara, Bangalore-98.
E-Mail: praveensharma.adv@gmail.com.
Mob: 94491 04230.

IN THE COURT OF CITY CIVIL COURT AT BENGALURU

S.C No.671/2021

Between: Union Bank of India, Rajarajeshwarinagara Branch, Office at No. 148, Gururaghavendra Complex, Basaveshwara Circle, BEML 3rd Stage, Rajarajeshwarinagara, Bangalore- 560 098. Represented by its Manager. Mr. Manjunata Virbhadra Teli, S/o. Virbhadra Teli, aged about 35 Years ...**Plaintiff**

And: Mr. Venkatesh M.S ...Defendant

SUMMONS TO DEFENDANT UNDER ORDER V RULE 20 OF CPC

Mr. Venkatesh M.S, S/o. K.R. Sathyanarayana Shetty, aged about 44 years, R/at No.443, 18th Cross, Poorna Pragna Layout, BTS Bus Stop, Uttarahalli, Bangaluru-560 060.

Whereas the above named Plaintiff has instituted the above suit against the Defendant for recovery of sum of Rs. 1,21,551.92/- (Rupees One Lakh Twenty One Thousand Five Hundred and Fifty one Rupees and Ninety Two Paisa Only) with future interest @11.10% per annum outstanding as on 07/07/2021 along with interest from 08/07/2021 till the date of repayment and other reliefs.

You are here by summoned to appear before Small Causes Court Judge at Bangalore (SCCH-4) in person or by a pleader on **27/03/2026** at **11:00 A.M.** to answer the same, failing which the suit will be heard and determined ex-parte.

Given under my hand and the seal of the court on this 20/02/2026

By order of the Court, Assistant Registrar, Court of Small Causes, Bengaluru.

PRAVEEN M.R. Advocate
No.188, 3rd Floor, 2nd Cross Road,
5th Phase, Sachidanandha Nagar,
R.R. Nagara, Bangalore-98.
E-Mail: praveensharma.adv@gmail.com.
Mob: 94491 04230.

IN THE COURT OF THE 2nd ADDL. SENIOR CIVIL JUDGE BENGALURU RURAL, AT BENGALURU

G & WC No. 28/2026

BETWEEN: Sri. SANTOSH KUMAR, Aged about 49 years, S/o. Late Sri. Gulabchand Gupta, Residing at No. 14103, Prestige Lake Side Habitat, Varthur, Varthur Hobli, Bengaluru-560087.....**PETITIONER**

AND: Smt. MEENAKSHI GUPTA, Aged about 49 years, W/o Sri. Santosh Kumar, Residing at No. 2026, Prestige Lake Side Habitat, Varthur, Varthur Hobli, Bengaluru-560087 ... **RESPONDENT**

PUBLIC NOTICE

Whereas, the Petitioner above named has filed the above Petition under section 6(A) of Hindu Minority and Guardianship Act, and Section 7 of Guardians and Wards Act 1980 praying to declare the Petitioner as Natural guardian of the minor child 'Aditya Gupta' who is born on 09-03-2011 until he attains majority and to restrain the Respondent or anyone on her behalf from disturbing the peaceful custody of the Petitioner over the minor child.

The Hon'ble Court has fixed the date on **27-03-2026** at 11:00 AM for hearing the above said petition, hence, any interested person/s are hereby called upon to appear to before the Hon'ble Court on the said day and file their objection if any, in person or through pleader duly instructed, failing which the matter will be heard and determined as Ex-parte.

Given under my hand and seal of this court on 25-02-2026.

By order of the court, Chief Ministerial officer, Senior Civil Judge Court, Bangalore Rural District, Bangalore.

B.N. NAGARAJA, Advocate
#760, 16th Main, B.S.K. 2nd Stage,
Bengaluru-560070.

IN THE COURT OF HON'BLE PRL CIVIL JUDGE AT MALUR

CMC. NO. 347/2025

1. **Krishnappa.** C. S/o,Late Chinnappa, Aged about 48 years, R/at. No. 301, "B'1 Block, Vemgal Village and Hobli, Kolar Taluk, 2. **Narasamma** D/o,Late Chinnappa, W/o, Nagaraj Aged about 47 years, R/at, Madamangala Village, Bangarapet Taluk. 3. **Narasimha** S/o,Late Chinnappa, Aged about 45 years, R/at, Ramanayakanahalli Village, Bangarapet Taluk. 4. **Bhagyamma,** D/o,Late Chinnappa, W/o Nagaraj, Aged about 40 years, R/at, Kundana Village, Devanahalli Taluk. 5. **Shanthamma,** D/o,Late Chinnappa, W/o Rajanna. J, Aged about 38 years, R/at, Kundana Village, Devanahalli Taluk. Petitioners

V/S

The Tahasildar, Malur Respondent

PUBLIC NOTICE

The petitioners have filed a petition against the respondent for the relief of death Certificate of the Mother of Petitioner No. 1 to 5, by namely Hanumakka W/o. Late Chinnappa, was died on 22/07/2009 in his residence at Hijuvanahalli Village, Kasaba Hobli, Malur Taluk, Kolar District. Before this Hon'ble court and person who are interested or having objection has to appear before this Hon'ble court in through counsel on 09.04.2026 at 11.AM.

Dated this day 25.02.2026

By order of the court
SHERISTEDAR, PRL Civil Judge and JMFC Court, at MALUR
D.N. Prakash, Advocate, Office: M.M. Complex Malur Town, Malur.

IN THE COURT OF THE CIVIL JUDGE & J.M.F.C AT BAGEPALLI

O.S.No.83/2014

Plaintiffs:- Sri. B.S Venkatesh,

-VS-

Defendants:- Sri. T.C Raghavendra Reddy and another.

SUMMONS TO THE PROPOSED DEFENDANT NO.4

Sri. SEGU SAI HARISH S/o Shankar Rao, Aged about 29 years, Residing at 307, 1st Cross, Bhuvaneshawari Nagar, Hebbal, Bengaluru-560024.

Whereas the plaintiff have filed the above suit against you for Specific performance of contract in respect of suit properties land bearing Sy.No.25, 2nd Block as per survey sketch measuring 1-21 guntas and land bearing Sy.No.33/2, 2nd Block are situated at per survey sketch measuring 1-00 acre Pathabagepalli Village, Kasaba Hobli Bagepalli Taluk, Chikkaballapur Dist.

You are hereby summoned to appear in this court in person or through Advocate duly appointed by you in that behalf on 17.03.2026 at 11 'o' clock to answer the claim and as the day fixed for your appearance is appointed for the final disposal of the suit.

Take notice that, in default of your appearance on the day before mentioned, the suit will be heard and determined in your absence.

Given under my hand and the seal of court, This 24.02.2026

BY ORDER OF THE COURT
Shestedar, Court of Civil Judge & J.M.F.C, Bagepalli
G.Babu, Advocate for plaintiff, Bagepalli
Mob:8095264127
Place: Bagepalli. Dated: 16/02/2026

IN THE COURT OF THE I ADDL CITY CIVIL JUDGE AT BENGALURU (CCH-02)

O.S. No. 6902/2024

BETWEEN:

1. **Smt. LAKSHMI,** Aged about 29 years, W/o Sri. Murali.R
2. **Master VISHAAK,** Aged about 10 years S/o Sri.Murali.R
3. **Kum. SUPRITA. M,** Aged about 05 years, D/o Sri. Murali.R

All are residing at: No.28/2/53/18, 1st Main Road, 2nd Cross, Lakshmi Layout, Garvebhavi Palya, Bengaluru South, Bengaluru 560 068. ...**Plaintiffs**

AND:

Smt.VIJAYA.G & Ors ...Defendants

SUMMONS TO DEFENDANT NO-2 & 3 UNDER ORDER V RULE 20 OF C.P.C, BY WAY OF PAPER PUBLICATION

Address of the Defendant No. 2 & 3.

Smt. DIVYA, D/o late Rajendran.C Aged about 34 years,
Smt. BHUVANA, D/o late Rajendran.C Aged about 31 years,
Both are residing at No.28/2, 1st Main, 2nd Cross, Lakhsmi Layout, Garvebhavi Palya, Bengaluru South, Bengaluru-560 068.

Whereas, the above named plaintiffs have instituted the suit for Partition and Separate Possession.

Notice is hereby given to you to appear in this court in person or through an advocate duly instructed or through some person able to answer all material question at **11:00 clock on 26th day of March 2026.** If you fail to appear on the said day or any subsequent date to which the matter may be posted as directed by the court, without any further notice, the matter will be dealt with, heard and decided on merits in your absence.

Issued under my hand and the seal of the court on 11th day of February 2026.

SCHEDULE

All that piece and parcel of the Residential house property bearing No.28/2, Katha No.53/18, measuring East to West 15 Feet and North to South 30 Feet, situated at Hongasandra Dhakle, Garvebhavipalya, Begur Hobli, Bangalore South Taluk, bounded on the:
East by: Eastern portion of Site No.28
West by: Site No.29
North by: Road
South by: Private Property.

By Order of the Court
Sd/- Assistant Registrar
City Civil Court, Bengaluru

Advocate for Plaintiff:
Sri. RAGHAVENDRA.V,
1st Cross, Maruthi Layout, Bommanahalli Road, Devarachikkanahalli, Bengaluru-560 076.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ – 580 030.

ಟೆಂಡರ್ ಪ್ರಕಟಣೆ ಸಂಖ್ಯೆ : 13/2025–26 ದಿನಾಂಕ : 25–02–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆ.ಪಿ.ಪಿ.ಪಿ.) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಅಥವಾ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರಣೆ	ಅಂದಾಜು ಮೌಲ್ಯ
01	NWKRTC/2025-26/IND0179	ವಾಹನಗಳಿಗಾಗಿ ಸ್ಪ್ರಿಂಗ್ ಪಟ್ಟಿಗಳು.	ರೂ. 655.00 ಲಕ್ಷ
02	NWKRTC/2025-26/IND0185	ಆಟೋಮೋಟಿವ್ ಲ್ಯೂಬ್ರಿಕಂಟ್ಸ್, ಗ್ರೀಸ್ & ಕೂಲಂಟ್.	ರೂ. 525.00 ಲಕ್ಷ
03	NWKRTC/2025-26/SE2641	ಹೊರಗುತ್ತಿಗೆ ಆಧಾರದ ಮೇಲೆ 250 ತಾಂತ್ರಿಕ ಸಿಬ್ಬಂದಿಗಳನ್ನು ಒದಗಿಸುವುದು.	ರೂ. 427.00 ಲಕ್ಷ
04	NWKRTC/2025-26/IND0176	ಬಾಲ್ ಮತ್ತು ರೋಲರ್ ಬೇರಿಂಗ್‌ಗಳು.	ರೂ. 398.00 ಲಕ್ಷ
05	NWKRTC/2025-26/IND0183	ಏರ್ ಕಾಂಪ್ರೆಸರ್‌ಗಳು.	ರೂ. 215.00 ಲಕ್ಷ
06	NWKRTC/2025-26/IND0178	ವಾಟರ್ ಪಂಪ್ ಮತ್ತು ಬಿಡಿ ಭಾಗಗಳು.	ರೂ. 164.00 ಲಕ್ಷ
07	NWKRTC/2025-26/IND0188	235/75ಆರ್, 17.5" ರೇಡಿಯಲ್ ಟ್ಯೂಬ್‌ಲೆಸ್ ಟೈರ್‌ಗಳು.	ರೂ. 107.00 ಲಕ್ಷ
08	NWKRTC/2025-26/IND0177	ಫ್ಯಾನ್ ಬೆಲ್ಟ್‌ಗಳು.	ರೂ. 100.00 ಲಕ್ಷ
09	NWKRTC/2025-26/IND0182	ಸೆಲ್ಫ್ ಅಡೇಸಿವ್ ಪ್ಲಾಸ್ಟಿಕ್ ಫಿಲ್ಮ್	ರೂ. 59.42 ಲಕ್ಷ
10	NWKRTC/2025-26/IND0173/Call-2	ಬಸ್ ಪಾಸ್‌ಗಳ ಮುದ್ರಣ ಮತ್ತು ಸರಬರಾಜು.	ರೂ. 44.00 ಲಕ್ಷ
11	NWKRTC/2025-26/IND0181	ಅಲ್ಯೂಮಿನಿಯಂ ಪಾಪ್ ರಿವಿಟ್‌ಗಳು.	ರೂ. 43.33 ಲಕ್ಷ
12	NWKRTC/2025-26/IND0136/Call-2	ಇಂಜಿನ್ ರೀಕಂಡಿಷನ್‌ಗಾಗಿ ಬೇಕಾಗುವ ಯಂತ್ರಗಳು.	ರೂ. 40.00 ಲಕ್ಷ
13	NWKRTC/2025-26/IND0189	ಸ್ಮಾರ್ಟ್ ಕಾರ್ಡ್‌ಗಳು.	ರೂ. 27.50 ಲಕ್ಷ
14	NWKRTC/2025-26/IND0184	ಇಂಡಸ್ಟ್ರೀಯಲ್ ಗ್ಯಾಸ್‌ಗಳು.	ರೂ. 13.96 ಲಕ್ಷ
15	NWKRTC/2025-26/SE2605	ಕಂದಾಯ & ಭೂ ಸಮೀಕ್ಷೆ ವಿಷಯಗಳಲ್ಲಿ ತಜ್ಞರ ಸೇವೆ.	ರೂ. 10.00 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : ಟೆಂಡರ್ ಕ್ರ. ಸಂ. 1 ರಿಂದ 5 ರಲ್ಲಿನ ಟೆಂಡರ್‌ಗಳಿಗೆ 30–03–2026, ಕ್ರ. ಸಂ. 6 ರಿಂದ 15 ರಲ್ಲಿರುವ ಟೆಂಡರ್‌ಗಳಿಗೆ ದಿನಾಂಕ : 14–03–2026 ರ ಸಂಜೆ 5.30 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ : http://kppp.karnataka.gov.in ಅಥವಾ ಮೊಬೈಲ್ ಫೋನ್ ಸಂಖ್ಯೆ : 70220 09113 ಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ).

ಡಿಐಪಿಆರ್/ಧಾರವಾಡ/1279/ಮಾಹಿತಿ/2025–26

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್ ಬಂಡ ರಸ್ತೆ, ಬಿನ್ನಿಪೇಟೆ, ಬೆಂಗಳೂರು–560023
ಜಿಲ್ಲೆ : ಬೆಂಗಳೂರು, ರಾಜ್ಯ : ಕರ್ನಾಟಕ

ಕ್ರ.ಸಂ: ಹಹೂಮತ(ವಿ)ಕೃಉಮಾಸ(ಬೆಂ)3396/2025–26 ದಿನಾಂಕ: 24.02.2026

ಟೆಂಡರ್–ಕಂ–ಹರಾಜು ಪ್ರಕಟಣೆ

ಸಮಿತಿಯ ಸಿಂಗೇನ ಅಗ್ರಹಾರ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಐ.ಡಿ.ಎಫ್–28 ಯೋಜನೆಯಡಿ ಹೊಸದಾಗಿ ನಿರ್ಮಿಸಿರುವ ಶೌಚಾಲಯವನ್ನು ಲೀವ್–ಅಂಡ್–ಲೈಸೆನ್ಸ್ ಆಧಾರದ ಮೇಲೆ ಗರಿಷ್ಠ 55 ತಿಂಗಳ ಅವಧಿಗೆ ನಿರ್ವಹಣೆ ಮಾಡಲು ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಲು ಉದ್ದೇಶಿಸಿದ್ದು, ಅನುಭವ ಹೊಂದಿರುವ ನೊಂದಾಯಿತ ಸಾರ್ವಜನಿಕ ಸಂಸ್ಥೆಗಳಿಂದ/ ಅರ್ಹ ವ್ಯಕ್ತಿಗಳಿಂದ/ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಶೌಚಾಲಯದ ವಿವರ: ಆರ್.ಐ.ಡಿ.ಎಫ್–28 ಯೋಜನೆಯಡಿ ಹೊಸದಾಗಿ ನಿರ್ಮಿಸಿರುವ ಶೌಚಾಲಯ, ನಿಗಧಿಪಡಿಸಿರುವ ಲೀವ್–ಅಂಡ್–ಲೈಸೆನ್ಸ್ ಶುಲ್ಕ ರೂ.ಗಳಲ್ಲಿ: **ರೂ.31,313/–,** ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): **ರೂ. 62,626/–,** ಅರ್ಜಿ ಶುಲ್ಕ ಜಿ.ಎಸ್.ಟಿ. ಒಳಗೊಂಡಂತೆ (ರೂ.ಗಳಲ್ಲಿ): **ರೂ.1,180/–**

ಸೂಚನೆಗಳು: (1) ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ 10.03.2026 ಸಂಜೆ 4.00 ಗಂಟೆಯವರೆಗೆ.** (2) ಖಾಲಿ ಟೆಂಡರ್ ಫಾರಂನ್ನು **ರೂ. 1,180–00** ಗಳನ್ನು ಡಿ.ಡಿ.ಮೂಲಕ ಪಾವತಿಸಿ **ದಿನಾಂಕ: 16.03.2026 ರ ಸಂಜೆ 4.00 ಗಂಟೆಯೊಳಗೆ** ಪಡೆಯತಕ್ಕದ್ದು. (3) ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು ಇ.ಎಂ.ಡಿ. ಮೊತ್ತದ ಡಿ.ಡಿ.ಯೊಂದಿಗೆ ಸಲ್ಲಿಸಲು ಕೊನೆಯ **ದಿನಾಂಕ 23.03.2026 ಮಧ್ಯಾಹ್ನ 12.00 ಗಂಟೆಯವರೆಗೆ,** ಸಾಧ್ಯವಾದಲ್ಲಿ ಅದೇ ದಿನ **ಮಧ್ಯಾಹ್ನ 12.30 ಗಂಟೆಗೆ ಬಿನ್ನಿಪೇಟೆ ಆಡಳಿತ ಕಛೇರಿಯಲ್ಲಿ** ಬಹಿರಂಗ ಹರಾಜು ನಡೆಸಲಾಗುವುದು. ನಂತರ ಹಾಜರಿದ್ದ ಗುತ್ತಿಗೆದಾರರ ಸಮಕ್ಷಮದಲ್ಲಿ ಟೆಂಡರನ್ನು ತೆರೆಯಲಾಗುವುದು. ಅರ್ಜಿ ಸಲ್ಲಿಸಿರುವವರೇ ಹರಾಜಿನಲ್ಲಿ ಭಾಗವಹಿಸುವುದು. (4) ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯನ್ನು ಡಿ.ಡಿ.ಮೂಲಕ ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆಯತಕ್ಕದ್ದು. (5) ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಪರಿಗಣಿಸುವ/ರದ್ದುಗೊಳಿಸುವ/ ಅಥವಾ ತಿರಸ್ಕರಿಸುವ ಮತ್ತು ಟೆಂಡರ್ ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಈ ಸಮಿತಿ ಕಾಯ್ದಿರಿಸಿಕೊಂಡಿದೆ. (6) ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯದರ್ಶಿ | ಸಹಿ/– ಆಡಳಿತಾಧಿಕಾರಿಗಳು

ವಾಸಾಸಂಇ/ವಾ.ಪ್ರ/ಎಎಎ/5875/2025–26

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2025–26/7606 ದಿನಾಂಕ: 24/02/2026

ಇ–ಟೆಂಡರ್ ಹಾಗೂ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 1 ಕಾಮಗಾರಿ ಮತ್ತು 4059–ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 1 ಕಾಮಗಾರಿ, ಹೀಗೆ ಒಟ್ಟು 2 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ಕ್ರಮವಾಗಿ ರೂ. 394.33 ಲಕ್ಷ ಹಾಗೂ ಮೊತ್ತ ರೂ. 150.29 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:09–03–2026 ರಂದು (11.00 ಗಂಟೆಗೆ), 2)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:11–03–2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 13–03–2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):16–03–2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 4 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1943/KSMCA/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮಿತ್ವದಲ್ಲಿ)

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ–4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ

ಸಂಖ್ಯೆ:ಕೃಭಾಜನಿನಿ/ನಾಬದಂಕಾ/ವಿ–4/ತಾಶಾ/Maintenance/2025-26/844 ದಿನಾಂಕ:23.02.2026

ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂ ಕಾಲುವೆ ವಿಭಾಗ ಸಂ.–4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ, ಜಿಲ್ಲೆ: ರಾಯಚೂರು ಇವರು ಈ ಕೆಳಗಿನ ಕಾಮಗಾರಿಯ ನೋಂದಾಯಿತ ಕೆ.ಪಿ.ಡಬ್ಲ್ಯೂ.ಡಿ. Iನೇ ದರ್ಜೆ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಕೆ ಟಿ ಟಿ ಪಿ ನಿಯಮದನ್ವಯ ಗುತ್ತಿಗೆದಾರರು ಅಗತ್ಯ ಇ.ಎಂ.ಡಿ ಠೇವಣಿ ಮೊತ್ತವನ್ನು ಇ–ಕ್ಯಾಷ್‌ನಲ್ಲಿ ಪಡೆದು ದ್ವಿ ಲಕೋಟೆಯಲ್ಲಿ ಟೆಂಡರನ್ನು ಸಲ್ಲಿಸುವುದು. ಇ.ಎಂ.ಡಿ ಠೇವಣಿ ಮತ್ತು ಇತರೆ ಅವಶ್ಯಕ ಬಿಡ್ ದಾಖಲೆಗಳನ್ನೊಳಗೊಂಡಿರುವ ಬಿಡ್‌ದಾರರ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

ಕಾಮಗಾರಿಯ ಹೆಸರು: Maintenance work. ಒಟ್ಟು ಕಾಮಗಾರಿಗಳ ಸಂಖ್ಯೆ: 1. "ಇಎಂಡಿ ಮೊತ್ತ (ಪ್ರತಿ ಕಾಮಗಾರಿಗೆ)": As mentioned in e-portal. ಟೆಂಡರ್ ಪ್ರೋಸೆಸಿಂಗ್ ಶುಲ್ಕ: As mentioned in e-portal. ಕೆಲಸ ಮುಗಿಸಲು ಕಾಲಮಿತಿ :9 months including monsoon.

1) ಗುತ್ತಿಗೆದಾರರು ಇ–ಟೆಂಡರ್ ಪುಸ್ತಕಕ್ಕಾಗಿ ದಿನಾಂಕ: 24.02.2026 ರಿಂದ 04.03.2026 ರವರೆಗೆ ಕೆ.ಬಿ.ಜೆ.ಎನ್.ಎಲ್. ವೆಬ್ ಸೈಟ್ http://kppp.karnataka.gov.in ಕ್ಲಿಕ್ ಮಾಡಿ ಇ–ಪೋರ್ಟಲ್ ನಲ್ಲಿ ಇರುವಂತೆ ಟೆಂಡರ್ ಶುಲ್ಕ (ಮರಳಿಸಲಾಗದ)/ಇ.ಎಂ.ಡಿ. ಮೊತ್ತವನ್ನು ಭರಿಸಿ ಇ–ಟೆಂಡರ್ ಪುಸ್ತಕವನ್ನು ಕೋರಿಕೊಳ್ಳುವುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಈ ಕೆಳಗಿನ ಪೇಮೆಂಟ ಮೋಡ್‌ಗಳನ್ನು ಬಳಸಿಕೊಂಡು ದಿನಾಂಕ:04.03.2026 ರ ಸಾಯಂಕಾಲ 5.00 ಘಂಟೆಯೊಳಗಾಗಿ ಭರಿಸುವದು. Credit card / Direct debit / National electronic fund transfer (NEFT) / over the counter (OTC) 2) ಗುತ್ತಿಗೆದಾರರು ದಿನಾಂಕ: 24.02.2026 ರಿಂದ 04.03.2026 ರ ಸಾಯಂಕಾಲ 5.00 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು. 3) ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 24.02.2026 ರಿಂದ 04.03.2026 ರ ಸಾಯಂಕಾಲ 5.00 ಘಂಟೆಯವರೆಗೆ ಸಲ್ಲಿಸುವದು. 4) ಟೆಂಡರ್‌ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಸಂದೇಹಗಳಿಗಾಗಿ Pre-Bid meeting ಅನ್ನು 27.02.2026 ರಂದು ಬೆಳಗ್ಗೆ 11.00 AMಕ್ಕೆ ಸಹಿ ಮಾಡುವವರ ಕಚೇರಿಯಲ್ಲಿ ನಡೆಸಲಾಗುವುದು. Cover-I (Technical Bid) ಮತ್ತು Cover-II (Financial Bid)ಗಳನ್ನು Executive Engineer, KBJNL, NRBC, Division No.4, Chikkahonnakuni ಅವರ ಕಚೇರಿಯಲ್ಲಿ ವಿದ್ಯುನ್ಮಾನವಾಗಿ ಕ್ರಮವಾಗಿ 06.03.2026 ರಂದು ಬೆಳಗ್ಗೆ 11.00 AMಕ್ಕೆ ಮತ್ತು 07.03.2026 ರಂದು ಸಂಜೆ 05.00 PMಕ್ಕೆ ತೆರೆಯಲಾಗುವುದು. 5) ಟೆಂಡರಿಗೆ ಸಂಬಂಧಪಟ್ಟಂತೆ ಉಳಿದ ಯಾವುದೇ ವಿವರಗಳನ್ನು, ಈ ಕೆಳಗೆ ಸಹಿ ಮಾಡಿರುವ ಕಾರ್ಯಪಾಲಕ ಅಭಿಯಂತರರವರ ಕಛೇರಿಯಿಂದ (ಕಛೇರಿಯ ವೇಳೆಯಲ್ಲಿ) ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಲು ಸೂಚನೆ ನೀಡಲಾಗಿದೆ ಮತ್ತು ಟೆಂಡರ್‌ನಲ್ಲಿ ಯಾವುದಾದರೂ ತಿದ್ದುಪಡಿಗಳಿದ್ದಲ್ಲಿ ಅದನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ–4,
ಚಿಕ್ಕಹೊನ್ನಕುಣಿ, ತಾ:ದೇವದುರ್ಗ.

DIP/RCR/720/KSMC&A/723/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಅ/ಲೋಇ/ಬವಿ/ಟಿ.ಎಸ್–6/ಕೆಕೆಆರ್‌ಡಿಬಿ/2025–26/6137 ದಿನಾಂಕ:21.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಂಡಿಸಿದ ಕಾಮಗಾರಿಗಳಿಗೆ ದ್ವಿ/ಏಕ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/RD/WORK_INDENT33414	130.00
2)	PWD/2025-26/RD/WORK_INDENT33859	63.00
3)	PWD/2025-26/RD/WORK_INDENT33861 (Reserved CAT-2A Category)	15.00
4)	PWD/2025-26/BR/WORK_INDENT33809	30.00
5)	PWD/2025-26/RD/WORK_INDENT33854	63.00
6)	PWD/2025-26/RD/WORK_INDENT33857	63.00
7)	PWD/2025-26/RD/WORK_INDENT33855 (Reserved CAT-2A Category)	65.00
8)	PWD/2025-26/RD/WORK_INDENT33856 (Reserved CAT-2A Category)	72.65
9)	PWD/2025-26/BR/WORK_INDENT33868 (Reserved SC Category)	25.00
10)	PWD/2025-26/BR/WORK_INDENT33869 (Reserved ST Category)	90.00
11)	PWD/2025-26/RD/WORK_INDENT33852	50.00
12)	PWD/2025-26/BR/WORK_INDENT33860	35.00
13)	PWD/2025-26/RD/WORK_INDENT33469	70.00
14)	PWD/2025-26/RD/WORK_INDENT33652 (Reserved SC Category)	100.00
15)	PWD/2025-26/RD/WORK_INDENT33632	100.00
16)	PWD/2025-26/RD/WORK_INDENT33634	66.99
17)	PWD/2025-26/RD/WORK_INDENT33473	80.00
18)	PWD/2025-26/IND0223	49.20

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗದಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **27.02.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **02.03.2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **04.03.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **05.03.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ,** ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1047/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No: 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗ:ಲೋಇ:ಪಿಡಿ–1,3:ವಿವಿಧ:2025–26/5352
ದಿನಾಂಕ : 25–02–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **135.25** ಲಕ್ಷ ಮೊತ್ತದಲ್ಲಿ ಒಟ್ಟು **09** ಕಾಮಗಾರಿಗೆ (ಕನಿಷ್ಟ ಮೊತ್ತ ರೂ: **1.15** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: **64.10** ಲಕ್ಷ) ಕೆಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆಡಬ್ಲ್ಯೂ–1 ಹಾಗೂ 3, ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 - 33839

ಮೇಲಿನ ಕಾಮಗಾರಿಯ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **05–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **06–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **07–03–2026**

Work Indent No: Part-2 - 33406, 29553/Call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **03–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **05–03–2026.**

Work Indent No: Part-3 - 32865, 22570

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **12–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **13–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **16–03–2026.**

Work Indent No: Part-4 - 33905, 33411-ST, 32888, 31331

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **16–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17–03–2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **18–03–2026** ಆರ್ಥಿಕ ಬಿಡ್ ತೆರೆಯುವ ದಿನಾಂಕ : **19–03–2026**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/680/2025–26

ಜಿಗಣಿ ಪುರಸಭೆಯಿಂದ ಬಟ್ಟೆ ಬ್ಯಾಗ್ ವಿತರಣೆ
ಸ್ವಚ್ಛತೆಗಾಗಿ ಜಾಗೃತಿ ಜಾಥಾ



• **ಆನೇಕಲ್:** ಜಿಗಣಿ ಪುರಸಭಾ ವ್ಯಾಪ್ತಿಯ ಎಲ್ಲಾ ಅಂಗಡಿಯ ಮಾಲೀಕರು ಪ್ಲಾಸ್ಟಿಕ್ ಗಳನ್ನು ಬಳಸದೇ ಬಟ್ಟೆ ಬ್ಯಾಗ್ ಗಳನ್ನು ಬಳಸುವ ಮೂಲಕ ಪರಿಸರ ಸ್ವಚ್ಛತೆಗೆ ಹೆಚ್ಚು ಒತ್ತು ನೀಡಬೇಕು ಎಂದು ಜಿಗಣಿ ಪುರಸಭಾ ಮುಖ್ಯಾಧಿಕಾರಿ ನವೀನ್ ಕುಮಾರ್ ತಿಳಿಸಿದರು.

ಜಿಗಣಿ ಪುರಸಭಾ ಯಿಂದ ಸ್ವಚ್ಛ ಭಾರತ ಅಭಿಯಾನ ಮತ್ತು ರಾಷ್ಟ್ರೀಯ ಸ್ವಚ್ಛ ಸರ್ವೇಕ್ಷಣೆ ಅಂಗವಾಗಿ ಪ್ಲಾಸ್ಟಿಕ್ ನಿಷೇಧ ಜಾರಿಗೊಳಿಸುವ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿ, ಜಿಗಣಿ ಪ್ರಮುಖ ರಸ್ತೆಗಳಲ್ಲಿ ಮತ್ತು ಮಾರುಕಟ್ಟೆ ಪ್ರದೇಶಗಳ ಅಂಗಡಿಗಳಿಗೆ ಪರಿಸರ ಸಂರಕ್ಷಣೆ ಮತ್ತು ಪ್ಲಾಸ್ಟಿಕ್ ನಿಷೇಧ ಕುರಿತು ಜಾಗೃತಿ ಮೂಡಿಸಿ ಕರ ಪತ್ರವನ್ನು ವಿತರಿಸಿದ ಬಳಿಕ ಮಾತನಾಡಿ, ಇನ್ನು ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಹಾಳಾಗಿ ಅನೇಕ ರೋಗಗಳು ಸಂಭವಿಸುತ್ತವೆ. ಹಾಗಾಗಿ ಯಾರು ಕೂಡ ಪ್ಲಾಸ್ಟಿಕ್ ಬಳಕೆ ಮಾಡದೆ ಬಟ್ಟೆ ಬ್ಯಾಗ್ ಗಳನ್ನು ಉಪಯೋಗಿಸಬೇಕು. ಒಂದು ವೇಳೆ ಪ್ಲಾಸ್ಟಿಕ್ ಬಳಕೆ ಮಾಡಿದರೆ ಪುರಸಭಾ ಕಾಯ್ದೆಯಂತೆ ದಂಡ ಹಾಕಿ ಕ್ರಮವಹಿಸಲಾಗುವುದು ಎಂದು ತಿಳಿಸಿದರು, ಪುರಸಭಾ ಸದಸ್ಯರಾದ ಪ್ರಹ್ಲಾದ್ ರೆಡ್ಡಿ ಮಾತನಾಡಿ, ಜಿಗಣಿ ವ್ಯಾಪ್ತಿಯ ವಾಣಿಜ್ಯ ಅಂಗಡಿಗಳು ಹೆಚ್ಚು ಪ್ಲಾಸ್ಟಿಕ್ ಬಳಕೆ ಮಾಡುವುದರಿಂದ ಅನೇಕ ರೀತಿಯ ಸಮಸ್ಯೆಗಳು ಬರುತ್ತದೆ. ಬಹಳ ಮುಖ್ಯವಾಗಿ ಪರಿಸರ ಹಾನಿ ಹಾಗೂ ಆರೋಗ್ಯದ ಸಮಸ್ಯೆಗಳು ಉಂಟಾಗಿ ತೊಂದರೆಯಾಗುತ್ತದೆಂದರು. ಹಾಗಾಗಿ ಸ್ಥಳೀಯ ವ್ಯಾಪಾರಸ್ಥರು ಮತ್ತು ಜನರಲ್ಲಿ ಪ್ಲಾಸ್ಟಿಕ್‌ನ ಹಾನಿಕಾರಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿ, ಪರಿಸರ ಸ್ನೇಹಿ ಉತ್ಪನ್ನವನ್ನು ಉಪಯೋಗಿಸಲು ಉತ್ತೇಜಿಸುವ ಸಲುವಾಗಿ ಬಟ್ಟೆ ಬ್ಯಾಗ್‌ಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಯಿತು. ಜಾಥ ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ಚಂದ್ರಶೇಖರ್, ಅಮುದಾಮಂಜುನಾಥ್, ಪ್ರವೀಣ್, ಗಣೇಶ್, ಪರಿಸರ ಆರೋಗ್ಯ ಅಭಿಯಂತರರು ರಾಜೇಶ್ವರಿ, ಪರಿಸರ ಆರೋಗ್ಯ ನಿರೀಕ್ಷಕರಾದ ವಿರೂಪಾಕ್ಷಿ, ಆರ್.ಸಿ ಮುನಿರಾಜು , ಸ್ವಚ್ಛತಾ ಕಾರ್ಮಿಕರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

ಪಿಎಂ ವಿಶ್ವಕರ್ಮ ಕರಕುಶಲ ವಸ್ತುಪ್ರದರ್ಶನ
ದೇಶಿ ಉತ್ಪನ್ನಗಳಿಗೆ ಉತ್ತೇಜಿಸಿ

• **ದೇವನಹಳ್ಳಿ:** ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೆರವಿನಿಂದ ಸಾಂಪ್ರದಾಯಿಕ ಕರಕುಶಲ ವಸ್ತುಗಳು ಸ್ವದೇಶಿಯಾಗಿ ತಯಾರಿಕೆಗೆ ಆದ್ಯತೆ ನೀಡಬೇಕೆಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು. ಟೌನ್ ನಲ್ಲಿರುವ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಎಂಎಸ್‌ಎಂಇ ಆಯೋಜಿಸಿದ್ದ ಪ್ರಧಾನ ಮಂತ್ರಿ, ವಿಶ್ವಕರ್ಮ ವಸ್ತು ಪ್ರದರ್ಶನ ಹಾಗೂ ವ್ಯಾಪಾರ ಮೇಳ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿ, ಸ್ವದೇಶಿಯವಾಗಿ ತಯಾರಿಸಿದ ಕರಕುಶಲ ವಸ್ತುಗಳ ಮಾರಾಟಕ್ಕೆ ಉತ್ತಮ ಮಾರುಕಟ್ಟೆ ಕಲ್ಪಿಸುವ ಮೂಲಕ ಇದರ ಸದುಪಯೋಗ ಎಲ್ಲ ವರ್ಗದ ಕರಕುಶಲ ಜನರು ಪಡೆದುಕೊಳ್ಳುವಂತಾಗಬೇಕು ಎಂದರು. ಗುಡಿ ಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಲಿ, ದೇಶದ ಆರ್ಥಿಕ ಅಭಿವೃದ್ಧಿಗೆ ಉತ್ತೇಜಿಸಬೇಕಿದೆ., ನಾವು ಸ್ವದೇಶಿ ವಸ್ತುಗಳನ್ನು ಹೆಚ್ಚಾಗಿ ಬಳಸುವ ಜತೆಗೆ ವಿದೇಶಗಳಿಗೆ ರಫ್ತು ಮಾಡುವಂತಾಗಬೇಕು ಎಂದರು. ಕರಕುಶಲ ಕರ್ಮಿಗಳು ಕಚ್ಚಾವಸ್ತು ಖರೀದಿಸಲು ಬ್ಯಾಂಕಿನಿಂದ ಸಬ್ಸಿಡಿ ಸಾಲ ಪಡೆದು ಗುಡಿ ಕೈಗಾರಿಕೆ ನಿರ್ಮಿಸಿಕೊಂಡು ಸಕಾಲದಲ್ಲಿ ಸಾಲ ಮರು ಪಾವತಿಸಲು ಗಮನ ವಹಿಸಬೇಕು ಎಂದು ಸಲಹೆ ನೀಡಿದರು. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪಿಸಲು ಕೇವಲ ಶೇ. 20 ರಷ್ಟು ಅವಕಾಶ ಆದರೆ ಗುಡಿ ಕೈಗಾರಿಕೆಗಳು ಸ್ಥಾಪಿಸಲು ಶೇ. 80ರಷ್ಟು ಅವಕಾಶವಿದೆ. ಇದರ ಸದುಪಯೋಗವನ್ನು ಯುವಕರು ಪಡೆದು



ನೂರಾರು ಜನರಿಗೆ ಉದ್ಯೋಗ ಕೊಡುವಂತೆ ಉದ್ಯಮಿಗಳಾಗಿ ಬೆಳೆಯಬೇಕು ಎಂದರು. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿ (ಎಂಎಸ್‌ಎಂಇ) ವ್ಯಾಪ್ತಿಗೆ ಬರುವ 50ಕ್ಕೂ ಹೆಚ್ಚು ಕುಶಲಕರ್ಮಿಗಳ ಮಳಿಗೆಯಲ್ಲಿ ಸಾಮಗ್ರಿಗಳು ಸಾರ್ವಜನಿಕರನ್ನು ತಮ್ಮತ್ತ ಸೆಳೆದವು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ.ರಾಜಣ್ಣ, ದೇವನಹಳ್ಳಿ ತಾಲೂಕು ಸಿ.ಜಗನ್ನಾಥ, ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ ನರೇಂದ್ರ, ಬಾಬು, ಜಿಲ್ಲಾ ಕೌಶಲಾಭಿವೃದ್ಧಿ ಇಲಾಖೆ ಅಧಿಕಾರಿಯಾದ ಜಗನ್ನಾಥ ಸೇರಿದಂತೆ ಅನೇಕರಿದ್ದರು.



ಕಿರುಸುದ್ದಿ

ಎಫ್‌ಆರ್‌ಎ ಜತೆಗೆ ಒಪ್ಪಂದಕ್ಕೆ ಸಹಿ

• **ಬೆಂಗಳೂರು:** ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರನ್ನು ನಿರ್ವಹಿಸುವ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತವು (ಬಿಐಎಎಲ್) ದಕ್ಷಿಣ ಭಾರತ ಮತ್ತು ಯುರೋಪ್ ನಡುವಿನ ಸರಕು ಸಾಗಣೆ ಸಂಪರ್ಕವನ್ನು ಬಲಪಡಿಸುವ ಉದ್ದೇಶದಿಂದ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣ(ಎಫ್ ಆರ್‌ಎ)ದ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಏರ್ ಕಾರ್ಗೋ ಇಂಡಿಯಾ ಸಮಾವೇಶದ ಸಂದರ್ಭದಲ್ಲಿ ಈ ಮಹತ್ವದ ಒಪ್ಪಂದ ಏರ್ಪಟ್ಟಿದ್ದು, ಈ ಸಹಭಾಗಿತ್ವವು ಪ್ರಮುಖ ಸರಕು ಸಾಗಣೆ ಹೆಬ್ಬಾಗಿಲುಗಳಾದ ಭಾರತದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಉತ್ಪಾದನಾ ಮತ್ತು ರಫ್ತು ವಲಯದ ಕೇಂದ್ರವಾಗಿರುವ ನಗರದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಯುರೋಪ್ ನ ಅತ್ಯಂತ ಸಕ್ರಿಯ ಕಾರ್ಗೋ ಹಬ್‌ಗಳಲ್ಲಿ ಒಂದಾದ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣಗಳನ್ನು ಒಂದುಗೂಡಿಸಿದೆ. ಈ ಕುರಿತು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಗಿರೀಶ್ ನಾಯರ್ ಮಾತನಾಡಿ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಗೋ ಮೂಲಸೌಕರ್ಯ, ತಂತ್ರಜ್ಞಾನ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ನಿರಂತರವಾಗಿ ಹೂಡಿಕೆ ಮಾಡುತ್ತಿದೆ. ಇಂತಹ ಸಹಭಾಗಿತ್ವಗಳು ಆ ಹೂಡಿಕೆಯನ್ನು ಅತ್ಯಂತ ದಕ್ಷ ಹಾಗೂ ವಿಸ್ತರಿಸಬಹುದಾದ ವಾಣಿಜ್ಯ ಮಾರ್ಗವನ್ನಾಗಿ ಪರಿವರ್ತಿಸಲು ಸಹಕಾರಿಯಾಗಲಿವೆಂದರು. ಪ್ರಮುಖವಾಗಿ ಹೆಚ್ಚಿನ ಮೌಲ್ಯದ ಮತ್ತು ಸಮಯದ ಮಿತಿಯಿರುವ ಸರಕುಗಳ ಸಾಗಣೆಗೆ ಬೆಂಬಲ ನೀಡಲಿವೆ. ಬದಲಾಗುತ್ತಿರುವ ವ್ಯಾಪಾರ ಚಲನಶೀಲತೆ ಮತ್ತು ನಿಯಂತ್ರಕ ಮಾನದಂಡಗಳಿಗೆ ಹೊಂದಿಕೊಳ್ಳುವಂತಹ, ಭವಿಷ್ಯಕ್ಕೆ ಸನ್ನದ್ಧವಾದ ಹಾಗೂ ಸ್ಥಿತಿಸ್ಥಾಪಕತ್ವವುಳ್ಳ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು ನಮ್ಮ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದರು.

ಬಜೆಟ್‌ನಲ್ಲಿ ದಲಿತರಿಗೆ ಆದ್ಯತೆ ನೀಡಲಿ

• **ಸೂಲಿಬೆಲೆ:** ಮಾರ್ಚ್ ತಿಂಗಳಿನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಮಂಡಿಸಲಿರುವ ರಾಜ್ಯದ ಬಜೆಟ್ ನಲ್ಲಿ ದಲಿತ ಸಮುದಾಯದ ಅಭ್ಯುದಯಕ್ಕೆ ವಿಶೇಷ ಯೋಜನೆಗಳಿಗೆ ಆದ್ಯತೆ ನೀಡಬೇಕೆಂದುದಲಿತ ಸಂಘರ್ಷ ಸಮಿತಿ ಕರ್ನಾಟಕ'ರಾಜ್ಯ ಸಂಚಾಲಕ ಅಣ್ಣಯ್ಯ ನೇತೃತ್ವದಲ್ಲಿ ಹಕ್ಕೊತ್ತಾಯವನ್ನು ಸಲ್ಲಿಸಿದೆ. ಕಳೆದ 15 ವರ್ಷದಿಂದ ಸಾಂಸ್ಕೃತಿಕ, ಶೈಕ್ಷಣಿಕ ತರಬೇತಿ, ಕೌಶಲ ತರಬೇತಿ, ಅಧ್ಯಯನ ಶಿಬಿರ ಇನ್ನು ಮುಂತಾದ ಹಲವಾರು ಸಂವಿಧಾನ ಬದ್ಧವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿರುವ ಅಂಬೇಡ್ಕರ್ ಕಲ್ಚರಲ್ ಎಜುಕೇಷನ್ ಟ್ರಸ್ಟ್‌ಗೆ ಎರಡು ಎಕರೆ ಜಮೀನು ಮಂಜೂರು ಮಾಡಬೇಕೆಂದು ಸಮಿತಿ ಒತ್ತಾಯಿಸಿದೆ.

ಅಪರಿಚಿತ ಮಹಿಳೆ ಶವ ಪತ್ತೆ

• **ದೇವನಹಳ್ಳಿ:** ಪಟ್ಟಣದ ಬೈಪಾಸ್ ಸಮೀಪ ಚರಂಡಿಯಲ್ಲಿ ಮಹಿಳೆ ಶವ ಪತ್ತೆಯಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಪಟ್ಟಣದ ಸ್ವರ್ಣಾದ್ರಿ ಹೋಟೆಲ್ ಮುಂಭಾಗದಲ್ಲಿರುವ ಚರಂಡಿಯಲ್ಲಿ ಪತ್ತೆಯಾದ ಅರ್ಧಬೆಂದ ಶವ ಚರಂಡಿ ನೀರು ಹರಿದು ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮಹಿಳೆ ತಲೆ ಭಾಗದಲ್ಲಿ ದಾರ ಕಾಣಿಸುತ್ತಿರುವುದರಿಂದ ಕೊಲೆ ನಡೆದಿರುವುದಾಗಿ ಅನುಮಾನ ವ್ಯಕ್ತವಾಗಿದೆ ದೇವನಹಳ್ಳಿ ಎಸಿಪಿ ಹರ್ಷ ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೊಕದ್ದಮೆ ದಾಖಲಿಸಿಕೊಂಡಿದ್ದಾರೆ, ದೇವನಹಳ್ಳಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಶವವನ್ನು ಪೊಲೀಸರು ಸಾಗಿಸಿದ್ದಾರೆ.

ಸಂಕೇತ್ ಕೊಲೆ ಪ್ರಕರಣ: ತನಿಖೆಗೆ ಆಗ್ರಹ

• **ವಿಜಯಪುರ:** ಶಿವಮೊಗ್ಗ ಹೊರವಲಯದ ಊರುಗಡೂರಿನಲ್ಲಿ 10 ನೇ ತರಗತಿಯ ವಿದ್ಯಾರ್ಥಿ ಸಂಕೇತ್ (16) ಎಂಬಾತನನ್ನು ಕೊಲೆ ಮಾಡಿರುವ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಬಜರಂಗದಳ ಒತ್ತಾಯಿಸಿದೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು ,ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದ ಸಂಕೇತ್ ಸೋಮವಾರ ಸ್ಪೆಷಲ್ ಕ್ಲಾಸ್ ಮುಗಿಸಿ ಬರುತ್ತಿದ್ದಂತೆ ಈ ಸಂಕೇತ್ ಮೇಲೆ ಮುಸ್ಲಿಮರ ವಿದ್ಯಾರ್ಥಿಗಳು ಗುಂಪು ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ಈ ಅಮಾನವೀಯ ಕೃತ್ಯವನ್ನು ಬಲವಾಗಿ ಖಂಡಿಸುತ್ತೇವೆಂದಿದ್ದಾರೆ. ಅಪ್ರಾಪ್ತ ಮಕ್ಕಳು ಡ್ರಗ್ಸ್ ಸೇವಿಸಿ ಹಿಂದು ವಿದ್ಯಾರ್ಥಿಯನ್ನು ಕೊಲೆ ಮಾಡಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮತ್ತು ಮಾಧ್ಯಮದಲ್ಲಿ ಚರ್ಚೆ ನಡೆಯುತ್ತಿದೆಂದು ಕೃಷ್ಣಮೂರ್ತಿ ತಿಳಿಸಿದ್ದಾರೆ.

ಪಾಂಡವಪುರದಲ್ಲಿ ಖಾಸಗಿ ಕಟ್ಟಡಗಳಲ್ಲಿ ಕಾರ್ಯನಿರ್ವಹಣೆ | ಸ್ಥಳೀಯ ಕಟ್ಟಡ ಮಾಲೀಕರಿಗೆ ಲಕ್ಷಾಂತರ ಲಾಭ
ಸರಕಾರಿ ಕಚೇರಿಗಳಿಗೆ ಸ್ವಂತ ನೆಲೆಯೇ ಇಲ್ಲ

▶ ಎನ್.ಕೃಷ್ಣೇಗೌಡ ಪಾಂಡವಪುರ

• **ಪಾಡವಪುರ:** ಪಾಂಡವಪುರ ಉಪವಿಭಾಗ ಕೇಂದ್ರವಾಗಿದೆ. ಇಲ್ಲಿನ ಬಹುತೇಕ ಸರ್ಕಾರಿ ಕಚೇರಿಗಳಿಗೆ ಸ್ವತಃ ಕಚೇರಿಗಳಿಲ್ಲದೆ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದರ ಪರಿಣಾಮ ಖಾಸಗಿ ವ್ಯಕ್ತಿಗಳು ಲಕ್ಷ ಲಕ್ಷ ರೂ ಜೇಬಿಗಿಳಿಸಿಕೊಳ್ಳುವ ಮೂಲಕ ಲಾಭ ಮಾಡಿಕೊಳ್ಳುತ್ತಿದ್ದಾರೆ.

ಉಪ ನೋಂದಾಣಾಧಿಕಾರಿಗಳ ಕಚೇರಿ, ಕೃಷಿ ಉಪನಿರ್ದೇಶಕರು, ಕೃಷಿ ಸಹಾಯಕ ನಿರ್ದೇಶಕರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಅಬಕಾರಿ, ರೇಷ್ಮೆ, ಕೈಗಾರಿಕೆ ಸಹಾಯಕ ನಿರ್ದೇಶಕರು ಮತ್ತು ಕೈಗಾರಿಕೆ ವಿಸ್ತರಣಾಧಿಕಾರಿಗಳ ಕಚೇರಿ, ಕೆಆರ್‌ಐಡಿಎಲ್, ದೇವರಾಜ ಅರಸು ಹಿಂದುಳಿದ ವರ್ಗಗಳ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಕಚೇರಿಗಳು ಹಲವಾರು ವರ್ಷದಿಂದಲೂ ಖಾಸಗಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಇದರ ಪರಿಣಾಮ ಸರ್ಕಾರದ ವಿವಿಧ ಇಲಾಖೆಗಳು ಮಾಸಿಕವಾಗಿ ಲಕ್ಷಾಂತರ ಬಾಡಿಗೆಯನ್ನು ಖಾಸಗಿ ವ್ಯಕ್ತಿಗಳಿಗೆ ತೆರಬೇಕಿದೆ. ಈ ಇಲಾಖೆಗಳಿಗೆ ಈವರೆಗೂ ಸ್ವತಃ ಕಟ್ಟಡ ನಿರ್ಮಿಸಿಕೊಳ್ಳಲು ಸಾಧ್ಯವಾಗಿಲ್ಲ, ಜಾಗದ ಕೊರತೆ, ಅನುದಾನ, ಅಧಿಕಾರಿಗಳ ಇಚ್ಛಾಸಕ್ತಿ ಕೊರತೆ ಹಾಗೂ ರಾಜಕಾರಣಿಗಳ ಬೇಜವಾಬ್ದಾರಿತನದಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ಹೊರೆಯಾಗುತ್ತಿದೆ.

ಮಾಸಿಕ ಲಕ್ಷಾಂತರ ಖರ್ಚು: ಹತ್ತಾರು ಇಲಾಖೆ ಕಚೇರಿಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿವೆ. ಈ ಇಲಾಖೆಗಳಿಂದ ಮಾಸಿಕವಾಗಿ ಲಕ್ಷಾಂತರ ರೂ.ಗಳ ಬಾಡಿಗೆ ಖಾಸಗಿ ವ್ಯಕ್ತಿಗಳ ಪಾಲಾಗುತ್ತಿದೆಮು ಕೆಲ ಪ್ರಭಾವಿ ವ್ಯಕ್ತಿಗಳು ರಾಜಕಾರಣಿಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿ ತಮಗೆ ಸೇರಿದ ಕಟ್ಟಡಗಳನ್ನು ಸರ್ಕಾರಿ ಕಚೇರಿಗಳಿಗೆ ಬಾಡಿಗೆಗೆ ನೀಡಿದ್ದಾರೆ.

ಈ ಕಟ್ಟಡಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕವಾಗಿ ಬಾಡಿಗೆ ಕೂಡ ನಿಗಧಿಯಾಗಿದೆ. ಮನೆ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ನಿರ್ಮಾಣ ಮಾಡಿರುವ ಕಟ್ಟಡಗಳನ್ನು ಮಾಸಿಕ ಇಂತಿಷ್ಟು ಎಂದು ಬಾಡಿಗೆ ನಿಗಧಿಪಡಿಸಿ ಅದಕ್ಕೆ ಕರಾರು ಮಾಡಿಕೊಂಡು ಸರ್ಕಾರಿ ಕಚೇರಿಗಳಿಗೆ ಬಾಡಿಗೆಗೆ ನೀಡಲಾಗಿದೆ. ಇದರಿಂದ ಪ್ರತಿ ತಿಂಗಳು ಲಕ್ಷದ ಸಾವಿರಾರು ಲೆಕ್ಕದಲ್ಲಿ ಇಲಾಖೆಗಳು ಬಾಡಿಗೆ ಪಾವತಿಸಬೇಕಿದೆ.



ಜಾಗ ಬಿಟ್ಟುಕೊಡಲು ಸಿದ್ಧ

ಕೃಷಿ ಇಲಾಖೆಗೆ ಸೇರಿದ ಜಾಗವನ್ನು ನ್ಯಾಯಾಲಯಕ್ಕೆ ವರ್ಗಾಯಿಸುವ ಸಂಬಂಧ ವ್ಯಾಜ್ಯ ನಡೆಯುತ್ತಿದೆ. ಈ ಸ್ಥಳಕ್ಕೆ ಪರ್ಯಾಯವಾಗಿ ಬೇರೆ ಜಾಗ ಪಡೆದುಕೊಳ್ಳುವಂತೆ ಹೇಳಲಾಗುತ್ತಿದೆ. ಆದರೆ ಕೃಷಿ ಇಲಾಖೆ ಮೊದಲು ಜಾಗ ನೀಡಿದ ನಂತರ ನಾವು ಈ ಜಾಗವನ್ನು ಬಿಟ್ಟುಕೊಡುವುದಾಗಿ ವಾದಿಸುತ್ತಿದ್ದೇವೆ. ಈ ಸಂಬಂಧ ಕೃಷಿ ಸಮಾಜ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ. ಇಲಾಖೆಯ ಕಚೇರಿ ಕಟ್ಟಡ ನಿರ್ಮಾಣಕ್ಕೆ ಸೂಕ್ತ ಜಾಗ ಮಂಜೂರು ಮಾಡಿದರೆ ಈ ಜಾಗವನ್ನು ಬಿಟ್ಟುಕೊಡಲು ನಾವು ಸಿದ್ಧರಿದ್ದೇವೆಂದು ಕೃಷಿಕ ಸಮಾಜದ ತಾಲೂಕು ಮಾಜಿ ಅಧ್ಯಕ್ಷ ಆರ್.ಚನ್ನಕೇಶವ ತಿಳಿಸಿದರು.

ದಿಗಂತ ವಿಶೇಷ

ದುಪ್ಪಟ್ಟು ಬಾಡಿಗೆ ನಿಗದಿ: ಪಾಂಡವಪುರ ಪಟ್ಟಣ ವ್ಯಾಪ್ತಿಯಲ್ಲಿ ದೊಡ್ಡ ಮನೆಯಾದರೂ 10ರಿಂದ 12 ಸಾವಿರ ರೂ.ಗಳವರೆಗೆ ಬಾಡಿಗೆ ಇದೆ. ಇದೇ ಕಟ್ಟಡವನ್ನು ಸರ್ಕಾರಿ ಕಚೇರಿಗಳಿಗೆ ಬಾಡಿಗೆ ನೀಡಿ ದುಪ್ಪಟ್ಟು ಬಾಡಿಗೆಯನ್ನು ಇಲಾಖೆಗಳಿಂದ ಪಡೆದುಕೊಳ್ಳಲಾಗುತ್ತಿದೆ. ರಾಜ್ಯದ ಅಭಿವೃದ್ಧಿ, ಮೂಲಸೌಕರ್ಯಕ್ಕಾಗಿ ಸಾರ್ವಜನಿಕರು ತೆರಿಗೆ ರೂಪದಲ್ಲಿ ನೀಡುವ ಹಣ ಬಾಡಿಗೆ ರೂಪದಲ್ಲಿ ಖಾಸಗಿಯವರ ಪಾಲಾಗುತ್ತಿರುವುದಕ್ಕೆ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಈ ಮೊದಲು ಕೃಷಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಸ್ವತಃ ಕಟ್ಟಡದಲ್ಲಿ ಇತ್ತಾದರೂ ಕಟ್ಟಡ ಮರು ನಿರ್ಮಾಣಕ್ಕಾಗಿ ಹಳೇ ಕಟ್ಟಡವನ್ನು ತೆರವು ಮಾಡಿ ತಾಲೂಕು ಕಚೇರಿ ಮುಂಭಾಗದ ಖಾಸಗಿ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗಿದೆ. ಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುಂಭಾಗದಲ್ಲಿದ್ದ ಇಲಾಖೆಯ ಕಟ್ಟಡವನ್ನು ನೆಲಸಮ ಮಾಡಲಾಗಿದೆ.

ಸ್ವಂತ ಕಟ್ಟಡ ನಿರ್ಮಾಣಕ್ಕೆ ಕೋರ್ಟ್ ಅಡ್ಡಿ: ಕೃಷಿ ಇಲಾಖೆಗೆ ಸೇರಿದ ಜಾಗ ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಮುಂಭಾಗವಿದೆ. ನ್ಯಾಯಾಲಯಕ್ಕೆ ಆಗಮಿಸುವ ಕಕ್ಷಿದಾರರ ವಾಹನಗಳ ಪಾರ್ಕಿಂಗ್ ವ್ಯವಸ್ಥೆಗೆ ಈ ಜಾಗವನ್ನು ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಹಾಗೂ ಈ ಜಾಗದಲ್ಲಿ ಯಾವುದೇ ಕಟ್ಟಡ ನಿರ್ಮಿಸದಂತೆ ನ್ಯಾಯಾಲಯ ತಡೆಯಾಜ್ಞೆ ತಂದ ಪರಿಣಾಮ ಕೃಷಿ ಇಲಾಖೆಯ ನೂತನ ಕಟ್ಟಡ ನಿರ್ಮಾಣಕ್ಕೆ ಅನುದಾನವಿದ್ದರೂ ಕಟ್ಟಡ ನಿರ್ಮಿಸಲು ಕಾನೂನು ತೊಡಕು ಎದುರಾಗಿದೆ.

ಒಂದೇ ಸೂರಿನಲ್ಲಿ ಕಚೇರಿಗಳಿಗೆ ಚಿಂತನೆ

ಬಹುತೇಕ ಕಚೇರಿಗಳು ಖಾಸಗಿ ಕಟ್ಟಡದಲ್ಲಿ ಇರುವುದು ಗಮನಕ್ಕೆ ಬಂದಿದೆ. ಈ ಎಲ್ಲಾ ಇಲಾಖೆಗಳ ಜತೆಗೆ ಅಗತ್ಯವಿರುವ ಮತ್ತಷ್ಟು ಇಲಾಖೆಗಳನ್ನು ಒಂದೇ ಸೂರಿನಲ್ಲಿ ತರಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಪಾಪಾಗೆ ಸೇರಿದ ಜಾಗದಲ್ಲಿ ಮಿನಿ ವಿಧಾನಸೌಧ ನಿರ್ಮಿಸಿ ಅಲ್ಲಿ ಎಲ್ಲಾ ಇಲಾಖೆಗಳು ಒಟ್ಟಿಗೆ ಕೆಲಸ ನಿರ್ವಹಿಸುವಂತೆ ಮಾಡಲಾಗುವುದು. ಇದಕ್ಕಾಗಿ ಪತ್ರ ಬರೆದು ಸರ್ಕಾರದ ಗಮನ ಸೆಳೆಯಲಾಗಿದೆ. ಆದಷ್ಟು ಬೇಗ ಯೋಜನೆ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುವುದು. ಇದರಿಂದ ಜನರು ಕಚೇರಿಗಳಿಗೆ ಅಲೆಯುವುದು ತಪ್ಪುತ್ತದೆಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ತಾಲೂಕಿಗೊಂದು ರಂಗಮಂದಿರ ನಿರ್ಮಿಸಿ



• **ತಾವರೆಕೆರೆ:** ಪ್ರತಿತಾಲೂಕಿಗೊಂದುರಂಗಮಂದಿರ ನಿರ್ಮಿಸಿ ಎಂದುಕಲಾವಿದರ ಸಂಘದಉಪಾಧ್ಯಕ್ಷ ನಟ ರಾಜ್‌ಎಂಎನ್‌ಆರ್ ಒತ್ತಾಯಿಸಿದರು. ತಾಲೂಕಿನ ಅತ್ತಿಪಟ್ಟ ಗ್ರಾಮದಲ್ಲಿ ಪಟಾಲಮ್ಮದೇವಿ ಮಹಿಳಾ ನಾಟಕತಂಡದಿಂದ ನಡೆದಕುರುಕ್ಷೇತ್ರ ನಾಟಕ ಪ್ರದರ್ಶನದಲ್ಲಿ ಮಾತನಾಡಿ, ಇತ್ತೀಚಿನ ದಿನದಲ್ಲಿ ಬಯಲಿನಲ್ಲಿ ವೇದಿಕೆ ಸಿದ್ದಪಡಿಸಿ ರಂಗಭೂಮಿ ನಾಟಕ ಪ್ರದರ್ಶನ ಮಾಡುವುದು ದುಬಾರಿಯಾಗುತ್ತಿರುವುದು. ಮಳೆ ಚಳಿಗಾಲದಿಂದಾಗಿ ಪ್ರದರ್ಶನ ನಿಂತು ಕಲಾವಿದರಿಗೆ ನಷ್ಟ ಮತ್ತು ನಿರಾಸೆ ಹಾಗೂ ಪ್ರೇಕ್ಷಕರಿಗೂ ತೊಂದರೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿ ತಾಲೂಕು ಗೊಂದರಂತೆ ರಂಗಮಂದಿರ ನಿರ್ಮಿಸಿದರೆ ರಂಗಭೂಮಿ ಕಲೆ ಉಳಿಯಲು ಸಹಕಾರಿಯಾಗುತ್ತದೆಂದರು. ಕುರುಬರ ಸಂಘದ ಮಾಜಿ ನಿರ್ದೇಶಕ ಅತ್ತಿಪಟ್ಟ ಕೆ .ನಾಗೇಶ್ ಮಾತನಾಡಿ, ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇದ್ದರೆ ಒಬ್ಬ ಯಶಸ್ವಿ ಮಹಿಳೆಯಿಂದ ಒಂದುಕುಟುಂಬ, ಒಂದು ಊರು ಅಭಿವೃದ್ಧಿ ಕಾಣುತ್ತದೆ. ಅದಕ್ಕೆ ನಮ್ಮ ಗ್ರಾಮದ ಮಹಿಳೆಯರು ಸಾಕ್ಷಿಯಾಗಿದ್ದಾರೆ. ರಂಗಭೂಮಿ ಕಲೆ ಉಳಿಸಿದ್ದಾರೆಂದರು.

ಅನಿಟ್ಟನಲ್ಲಿ ಎರಡನೇ ಬಾರಿಗೆ ಕುರುಕ್ಷೇತ್ರ ನಾಟಕ ಪ್ರದರ್ಶನ ಮಾಡಿ ನೆರೆದಿದ್ದ ಸಾವಿರಾರು ಜನರ ಮೆಚ್ಚುಗೆಗಳಿಸಿದ್ದಾರೆ. ಅವರಿಗೆ ಮತ್ತಷ್ಟು ಪ್ರೋತ್ಸಾಹದ ಅಗತ್ಯವಿದೆಂದು ತಿಳಿಸಿದರು. ಸಹ ನಿರ್ದೇಶಕರಾದ ಮುನಿರಾಜು ಭಾಗವತರು, ಕಲಾವಿದರ ಸಂಘದ ಕಾರ್ಯದರ್ಶಿ ಡಿ ಮಂಜುನಾಥ್, ಈ ತಬಲ ವಾದಕರಾದ ಮುರಳಿ, ಸೋಲೆಕ್ಸ್ ವಾದಕರಾದ ಮಧುಪೊಲೀಸ್, ಗ್ರಾಪಂ ಸದಸ್ಯರಮೇಶ್, ಹಿರಿಯ ಕಲಾವಿದ ಲಿಂಗೇಗೌಡ ಹಾಗೂ ಇತರರಿದ್ದರು.

ಸೈನ್ಯದ ವಿರುದ್ಧ ಅವಹೇಳನಕಾರಿ ಕಾರ್ಯಕ್ರಮ: ಎಬಿವಿಪಿ ಕಾರ್ಯಕರ್ತರ ಸೆರೆ
ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯಕ್ಕೆ ಮುತ್ತಿಗೆ


• **ಆನೇಕಲ್:** ಕಾಶ್ಮೀರ ಮತ್ತು ಭಾರತವನ್ನು ಪ್ರತ್ಯೇಕಿಸುವ ಕಾರ್ಯಕ್ರಮ ಮಾಡ್ತಾರೆ ಎಂಬ ಆರೋಪದ ಮೇರೆಗೆ ಎಬಿವಿಪಿ ಸಂಘಟನೆ ಸರ್ಜಾಪುರ ಸಮೀಪದ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಅಜೀಂ ಪ್ರೇಮ್ ಜಿ ಯೂನಿವರ್ಸಿಟಿ ಮುಂಭಾಗ ಪ್ರತಿಭಟನೆ ವಿಚಾರ ಸ್ಪಾರ್ಕ್ ಎಂಬ ಸಂಘಟನೆ ಈ ಹಿಂದೆ ದೇಶ ವಿರೋಧಿ ಕಾರ್ಯಕ್ರಮ ಆಯೋಜನೆ ದೇಶದ ಸೈನಿಕರಿಗೆ ಅಪಮಾನ ಆಗುವ ರೀತಿ ಕಾಶ್ಮೀರ ಪ್ರತ್ಯೇಕವಾದದ ಬಗ್ಗೆ ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದು ಆರೋಪಿಸಿದರು.

ದೇಶ ವಿರೋಧಿ ಚಟುವಟಿಕೆ ಮಾಡಲಾಗುತ್ತಿದೆ. ಇನ್ನು ಇದೇ ತಿಂಗಳು 25,26,27ನೇ ದಿನಾಂಕ ನಡೆಯುವ ಯೂನಿವರ್ಸಿಟಿ ಫೆಸ್ಟ್‌ನಲ್ಲಿ ಸ್ಪಾರ್ಕ್ ಸಂಘಟನೆ ಕಾರ್ಯಕ್ರಮ ಆಯೋಜನೆಗೆ ಮುಂದಾಗಿತ್ತು. ಆದರೆ, ಇವರ ಕಾರ್ಯ ಚಟುವಟಿಕೆ ಬಗ್ಗೆ ಯೂನಿವರ್ಸಿಟಿ ರಿಜಿಸ್ಟ್ರಾರ್ ಗೆ ಮಾಹಿತಿ ಇಲ್ಲ ಎನ್ನುತ್ತಿದ್ದಾರೆಂದು ದೂರಿದರು. ಅಜೀಂ ಪ್ರೇಮ್ ಜಿ ಸಮಾಜಸೇವೆ ಮೂಲಕ ಗುರುತಿಸಿಕೊಂಡಿದ್ದಾರೆ .ಆದರೆ, ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯಲ್ಲಿ ದೇಶ ವಿರೋಧಿಚಟುವಟಿಕೆ ನಡೆಯುತ್ತಿದೆ. ಈ ಕೂಡಲೇ ಸ್ಪಾರ್ಕ್ ಸಂಘಟನೆ ಬ್ಯಾನ್ ಮಾಡಬೇಕು. ಅಜೀಂ ಪ್ರೇಮ್ ಜಿ ಯೂನಿವರ್ಸಿಟಿ ಕ್ಷಮೆ ಕೇಳಬೇಕು ಎಂದು ಆಗ್ರಹಎಬಿವಿಪಿ ಸಂಘಟನೆಕಾರ್ಯಕರ್ತರಿಂದ ಆಗ್ರಹ ಮಾಡಿದರು.ಅಜೀಂ ಪ್ರೇಮ್ ಜಿ ಯೂನಿವರ್ಸಿಟಿ ಮುಂಭಾಗ ಪ್ರತಿಭಟನೆ ವಿಚಾರಪ್ರತಿಭಟನೆ ವಿಕೋಪಕ್ಕೆ ಹೋಗುತ್ತಿದ್ದಂತೆ ಪೊಲೀಸರ ಸ್ಥಳಕ್ಕೆ ಭೇಟಿ ನೀಡಿ ಎಬಿವಿಪಿಯ ಕಾರ್ಯಕರ್ತರನ್ನು 20ಕ್ಕೂ ಹೆಚ್ಚು ಮಂದಿಯನ್ನು ಸರ್ಜಾಪುರ ಪೊಲೀಸರು ವಶಕ್ಕೆ ಪಡೆದರು. ಎಬಿವಿಪಿ ಕಾರ್ಯಕರ್ತರು ಅಜೀಂ ಪ್ರೇಮ್ ಜಿ ವಿಶ್ವ ವಿದ್ಯಾಲಯಕ್ಕೆ ಅನಧಿಕೃತವಾಗಿ ನುಗ್ಗಿ ನಾಮಫಲಕಕ್ಕೆ ಮಸಿ ಬಳಿದು ದಂದಲೆ ಮಾಡಲು ಮುಂದಾದ ಸಂದರ್ಭದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಎಬಿವಿಪಿ ಕಾರ್ಯಕರ್ತರ ವಿರುದ್ಧ ಧಿಕ್ಕಾರ ಕೂಗಿ ನಮಗೆ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿ ಪ್ರತಿಭಟಿಸಿದರು.



ಹೊಸಕೋಟೆ ಪಿಎಲ್‌ಡಿ ಬ್ಯಾಂಕಿಗೆ ಆಯ್ಕೆ



• **ಹೊಸಕೋಟೆ:** ಹೊಸಕೋಟೆ ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ಪಿಎಲ್‌ಡಿ ಬ್ಯಾಂಕ್)ನ ಅಧ್ಯಕ್ಷ ಸ್ಥಾನಕ್ಕೆ ಎಚ್ ಕೆ ದೊರೆಸ್ವಾಮಿ ಗೌಡ (ಗಣೇಶ್) ರನ್ನು ಅವಿರೋಧವಾಗಿ ನೇಮಕ ಮಾಡಲಾಯಿತು ಹಾಗೂ ನೂತನ ಆಡಳಿತ ಮಂಡಳಿಯ ನಿರ್ದೇಶಕರನ್ನು ಅವಿರೋಧವಾಗಿ ನೇಮಕ ಮಾಡಲಾಯಿತು. ನಗರದ ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ಪಿಎಲ್‌ಡಿ ಬ್ಯಾಂಕ್)ನ ಸಭಾಂಗಣದಲ್ಲಿ ನೂತನವಾಗಿ ನೇಮಕಗೊಂಡ ಅಧ್ಯಕ್ಷ ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನೂತನ ಅಧ್ಯಕ್ಷ ಎಚ್.ಕೆ.ದೊರೆಸ್ವಾಮಿಗೌಡ ಮಾತನಾಡಿ, ಹೊಸಕೋಟೆ ಪಿಎಲ್‌ಡಿ ಬ್ಯಾಂಕ್ ಜಿಲ್ಲೆಯಲ್ಲಿ ಮೊದಲ ಸ್ಥಾನದಲಿದ್ದು ರಾಜ್ಯದಲ್ಲಿ ಐದನೇ ಸ್ಥಾನದಲ್ಲಿದೆ. ಈ ಬಾರಿ ನಮ್ಮ ಪಿಎಲ್‌ಡಿ ಬ್ಯಾಂಕ್ ರಾಜ್ಯದಲ್ಲಿ ಮೊದಲ ಸ್ಥಾನಕ್ಕೆ ತರುವ ಎಲ್ಲಾ ಪ್ರಯತ್ನ ಮಾಡಲಾಗುವುದು ಹಾಗೂ ಕೃಷಿಯನ್ನೇ ಅವಲಂಬಿತರಾಗಿರುವ ರೈತರ ಶ್ರೇಯೋಭಿವೃದ್ಧಿಗೆ ಸದಾ ಬದ್ಧನಾಗಿರುತ್ತೇನೆಂದರು. ಪಿಎಲ್‌ಡಿ ಬ್ಯಾಂಕಿನ ಉಪಾಧ್ಯಕ್ಷೆ ಎಸ್.ಆಶಾರಾಣಿ, ಮಾಜಿ ಅಧ್ಯಕ್ಷ ಎನ್. ಮಂಜುನಾಥ್, ನಿರ್ದೇಶಕರಾದ ಸಿ.ಮುನಿಯಪ್ಪ, ಎಲ್ ಗಂಗರಾಜು, ಎಚ್. ಎನ್. ಹಿರೇಗೌಡ, ಎಚ್ ಎಸ್ ಶಂಕರಪ್ಪ, ಆರ್.ಶ್ರೀಧರ್, ಎಸ್ .ಆರ್. ಮಂಜುಳಾ, ಎಚ್.ಶಾಂತಮ್ಮ, ಕೆ .ಎಂ .ಶ್ರೀನಿವಾಸ್, ಚಿನ್ನಪ್ಪಯ್ಯ, ಪಿ.ಮಂಜುನಾಥ್, ಎಂ.ಮುನಿರಾಜ್, ಬ್ಯಾಂಕಿನ ವ್ಯವಸ್ಥಾಪಕ ನಿರಂಜನ್ ಇತರರಿದ್ದರು.

ಮಾ.6ರಂದು ಗುತ್ತಿಗೆದಾರರ ಬೃಹತ್ ಪ್ರತಿಭಟನೆ

• **ದೊಡ್ಡಬಳ್ಳಾಪುರ:** ಗುತ್ತಿಗೆದಾರ ಬಾಕಿ 38 ಸಾವಿರ ಕೋಟಿ ರೂ. ಹಣ ಬಿಡುಗಡೆಗೆ ಒತ್ತಾಯಿಸಿ ರಾಜ್ಯ ಗುತ್ತಿಗೆದಾರರ ಸಂಘ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಗುತ್ತಿಗೆದಾರ ಸಂಘದ ವತಿಯಿಂದ ನಗರದ ಟಿ ಬಿ ವೃತ್ತದಲ್ಲಿ ಮಾರ್ಚ್ 6ರಂದು ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್ ಮಂಜುನಾಥ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಎಂಡಿಪಿ ಮತ್ತು ಇತರೇ ಸಮಸ್ಯೆಗಳನ್ನು ಬಗೆಹರಿಸಲು ಸಚಿವರು ಮತ್ತು ಸರ್ಕಾರದ ಕಾರ್ಯದರ್ಶಿ ಮಟ್ಟದಲ್ಲಿ ಹಲವಾರು ಸಭೆಗಳನ್ನು ನಡೆಸಲಾಗಿರುತ್ತದೆ. ಆದರೂ ಸಹ ಸಮಸ್ಯೆ ಬಗೆಹರಿದಿರುವುದಿಲ್ಲ ಎಂದರು. ಕಳೆದ ಎರಡು ವರ್ಷದಿಂದ ಅನೇಕ ಭಾರಿ ಭೇಟಿ ಮಾಡಿ ಮನವಿ ಮಾಡಿದ್ದರೂ ಯಾವುದು ಪ್ರಯೋಜನವಾಗಲಿಲ್ಲ, ಹತ್ತು ಮಹಾನಗರ ಪಾಲಿಕೆಯಲ್ಲಿ ಪ್ಯಾಕೇಜ್ ಟೆಂಡರ್ ಕರೆದಿರುವುದರಿಂದ, ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರಿಗೆ ತುಂಬಾ ಅನ್ಯಾಯವಾಗಿರುತ್ತದೆ. ಸದರಿ ವಿಚಾರವಾಗಿ ಮಾನ್ಯ ಸಚಿವರನ್ನು ಭೇಟಿ ಮಾಡಿ ಚರ್ಚಿಸಿದರು ಯಾವುದೇ ಪ್ರಯೋಜನವಾಗಿರುವುದಿಲ್ಲ ಎಂದು ದೂರಿದರು. ನಗಾರಭಿವೃದ್ಧಿ ಇಲಾಖೆಯಲ್ಲಿ ಮಧ್ಯವರ್ತಿಗಳೇ ಇಲಾಖೆಯ ಚಟುವಟಿಕೆ ಯನ್ನು ಅವರ ಖಾಸಗಿ ಕಚೇರಿಯಿಂದ ನಡೆಸುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಾರದೆ, ಟೆಂಡರ್ ಅನುಮೋದನೆಗೆ ಹಾಗೂ ಹಣ ಬಿಡುಗಡೆ ವ್ಯವಸ್ಥೆಯಲ್ಲಿ ಹಿಂದಿನ ಸರ್ಕಾರಕ್ಕಿಂತ ಅಸ್ತವ್ಯಸ್ತವಾಗಿರುತ್ತದೆಂದರು.

ಮೇಲ್ಕಂಡ ಸಮಸ್ಯೆಗಳನ್ನು ಚರ್ಚಿಸಲು ಸಿಎಂ ತುರ್ತಾಗಿ ರಾಜ್ಯ ಸಂಘದ ಪದಾಧಿಕಾರಿಗಳ ಸಭೆ ಕರೆಯಬೇಕು. ಮಾರ್ಚ್ 6ರಂದು ಫ್ರೀಡಂ ಪಾರ್ಕ್ ನಲ್ಲಿ ಸಾಂಕೇತಿಕವಾಗಿ ಪ್ರತಿಭಟನೆ ಮಾಡಿ ಎಚ್ಚರಿಕೆ ನೀಡಲಾಗುತ್ತದೆ.



ಸಂಪಾದಕೀಯ

ಭಯೋತ್ಪಾದನೆಗೆ 'ಪ್ರಹಾರ'

ಭಾರತವು ಕೆಲವು ದಶಕಗಳಿಂದ ಭಯೋತ್ಪಾದನೆಗೆ ತುತ್ತಾಗುತ್ತಲೇ ಬಂದಿದೆ. ಒಂದೆಡೆಯಿಂದ ನೆರೆ ರಾಷ್ಟ್ರಗಳು ಭಾರತದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿದ್ದರೆ, ಇನ್ನೊಂದೆಡೆಯಿಂದ ದೇಶದಲ್ಲಿರುವ ಆಂತರಿಕ ದುಷ್ಟಶಕ್ತಿಗಳು ಕೂಡಾ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿವೆ. ನಕ್ಸಲೀಯರ ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಸರಕಾರವು ಬಹಳಷ್ಟು ಸಫಲತೆ ಸಾಧಿಸಿದೆಯಾದರೂ, ಇಸ್ಲಾಮಿಕ್ ಭಯೋತ್ಪಾದನೆ ಇನ್ನೂ ವ್ರಣವಾಗಿ ಕಾಡುತ್ತಲೇ ಇದೆ. ಈಗಂತೂ ಭಯೋತ್ಪಾದಕರ ಕೈಗೆ ಆಧುನಿಕ ತಂತ್ರಜ್ಞಾನವೂ ಸಿಕ್ಕಿರುವುದರಿಂದ ಮತ್ತು ಭಯೋತ್ಪಾದನೆಯ ಆಯಾಮವೂ ವಿಸ್ತರಿಸಿರುವುದರಿಂದ ಅವರ ವಿರುದ್ಧ ಹೋರಾಡುವುದಕ್ಕೆ ಇನ್ನಷ್ಟು ಸುಸಜ್ಜಿತ ವ್ಯವಸ್ಥೆ ಹೊಂದುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರವು ಭಯೋತ್ಪಾದನೆ ವಿರುದ್ಧ ಹೋರಾಡುವುದಕ್ಕೆ ನೂತನ



ನೀತಿಯೊಂದನ್ನು ರೂಪಿಸಿರುವುದು ಸಕಾಲಿಕವಾಗಿದೆ. 'ಪ್ರಹಾರ್' ಹೆಸರಿನ ಈ ಭಯೋತ್ಪಾದನಾ ನಿಗ್ರಹ ನೀತಿಯು ಈ ಪಿಡುಗಿನ ವಿರುದ್ಧ ವಿವಿಧ ಆಯಾಮಗಳಲ್ಲಿ ಹೋರಾಡುವ ಮತ್ತು ಭಯೋತ್ಪಾದನೆಯನ್ನು ಸಂಪೂರ್ಣ ನಿಗ್ರಹಿಸುವ ಗುರಿ ಹೊಂದಿದೆ.

ಈವರೆಗೆ ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟವು ಪ್ರತಿಕ್ರಿಯಾತ್ಮಕವಾಗಿದ್ದರೆ ಇನ್ನು ಮುಂದೆ ಭಯೋತ್ಪಾದನೆಯು ತಲೆ ಎತ್ತದಂತೆ ಮಾಡುವಂತಹ ಉಪಕ್ರಮಗಳನ್ನು ತೆಗೆದುಕೊಳ್ಳುವ ಕುರಿತಂತೆ ಕೂಡಾ ಆದ್ಯತೆ ವಹಿಸಿದೆ. ಭಾರತವನ್ನು ಕಾಡುತ್ತಿರುವ ಎಲ್ಲಾ ಬಗೆಯ ಭಯೋತ್ಪಾದನೆಗಳನ್ನು- ಗಡಿಯಾಚೆಗಿನ ಭಯೋತ್ಪಾದನೆ, ಡ್ರೋನ್ ಅತಿಕ್ರಮಣ, ಉಗ್ರವಾದಿ ಮನಸ್ಥಿತಿ, ಭಯೋತ್ಪಾದನೆಗೆ ಹಣಕಾಸು ನೆರವು, ವಿವಿಧ ಸ್ವರೂಪದಲ್ಲಿ (ರಾಸಾಯನಿಕ, ಜೈವಿಕ, ವಿಕಿರಣಕಾರಿ, ಪರಮಾಣು ಅಸ್ತ್ರ) ನಡೆಯಬಹುದಾದ ಭಯೋತ್ಪಾದನೆ- ಮುಂತಾದವನ್ನೆಲ್ಲ ನಿಗ್ರಹಿಸಲು ಸೂಕ್ತ ಕಾರ್ಯಸೂಚಿಯನ್ನು ಹೊಂದಿದೆ.

ಭಯೋತ್ಪಾದಕರನ್ನು ದಮನಿಸುವ ಜತೆಗೇ ಭಯೋತ್ಪಾದನೆಯ ಮೊಗ್ಗನ್ನೆ ಚಿವುಟಿ ಹಾಕುವುದಕ್ಕೂ ಹೊಸ ನೀತಿಯು ಆದ್ಯತೆ ನೀಡಿದೆ. ಜನರು ಭಯೋತ್ಪಾದನೆಯತ್ತ ಆಕರ್ಷಿತರಾಗದಂತೆ ತಡೆಯುವುದು, ಅವರಿಗೆ ಸೂಕ್ತ ಅರಿವು ಮೂಡಿಸುವುದು ಕೂಡಾ ಇದರಲ್ಲಿ ಸೇರಿದೆ. ಆಧುನಿಕ ತಂತ್ರಜ್ಞಾನದ ಮೂಲಕ ಭಯೋತ್ಪಾದಕರು ತಮ್ಮ ಜಾಲ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಹಾರ್ ನೀತಿಯು ಅದನ್ನು ತಡೆಯಲು ತನ್ನ ಡಿಜಿಟಲ್ ಸಾಮರ್ಥ್ಯವನ್ನು ಬಳಸಿಕೊಳ್ಳಲು ಯೋಜಿಸಿದೆ. ಬಂಧಿತ ಭಯೋತ್ಪಾದಕರು ಕಾನೂನಿನ ಬಲೆಯಿಂದ ತಪ್ಪಿಸಿಕೊಳ್ಳದಂತೆ ಮಾಡಲು ಎಫ್‌ಐಆರ್ ಸಲ್ಲಿಸುವುದರಿಂದ ಹಿಡಿದು ಕೋರ್ಟಿನಲ್ಲಿ ವಿಚಾರಣೆ ನಡೆಯುವ ತನಕ ಪರಿಣತ ಕಾನೂನು ತಜ್ಞರನ್ನು ಬಳಸಿಕೊಳ್ಳಲೂ ಯೋಜಿಸಲಾಗಿದೆ. ಒಟ್ಟಿನಲ್ಲಿ ನೂತನ ನೀತಿಯು ಭಯೋತ್ಪಾದನೆಗೆ ಮಾರಕ 'ಪ್ರಹಾರ' ನೀಡುವುದೆಂದು ಆಶಿಸಲಾಗಿದೆ.

ಹೆದರಿಕೆಯಿಂದ ಜಗತ್ತು ಗೆಲ್ಲಲು ಸಾಧ್ಯವೇ ಇಲ್ಲ

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಇತ್ತೀಚೆಗೆ ಇಡೀ ಜಗತ್ತೇ ಸಂಭ್ರಮಿಸಬಹುದಾದ ಅಥವಾ ಸಮಾಧಾನ ಮಾಡಿಕೊಳ್ಳಬಹುದಾದ ಘಟನೆಯೊಂದು ನಡೆಯಿತು. ಅದು ಬಲಿಷ್ಠ ಸಂವಿಧಾನ ಹೊಂದಿರುವ ಅಮೆರಿಕದ ಸುಪ್ರೀಂಕೋರ್ಟ್, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತನಗೆ ಇಷ್ಟ ಬಂದಂತೆ ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ವಿಧಿಸಿದ್ದ ಸುಂಕವನ್ನು ರದ್ದು ಮಾಡಿಬಿಟ್ಟಿತು. ಒಂದು ರೀತಿಯಲ್ಲಿ ಅಮೆರಿಕ ಸುಪ್ರೀಂಕೋರ್ಟ್‌ನ ಈ ತೀರ್ಪು ಟ್ರಂಪ್‌ಗೆ ತೀರಾ ಅವಮಾನಕರವಾದದ್ದು. ದುರಂತವೆಂದರೆ, ಈ ತೀರ್ಪಿನ ನಂತರದಲ್ಲಿ ಕಾಣಿಸಿದ ಟ್ರಂಪ್ ವರ್ತನೆ, ಮೊದಲನೇ ಮತ್ತು ಎರಡನೇ ಮಹಾಯುದ್ಧದಲ್ಲಿ ಕಾಣಿಸಿದ ಸರ್ವಾಧಿಕಾರಿಗಳ ಅಥವಾ ಭಾರತ ಈ ಹಿಂದೆ ನೋಡಿದ ಮೊಹಮ್ಮದ್ ಬಿನ್ ತುಘಲಕ್‌ರ ಆಡಳಿತಕ್ಕಿಂತ ಬೇರೆಯಾಗಿ ಏನೂ ಕಾಣಿಸಲಿಲ್ಲ.

ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ಟ್ರಂಪ್ ಮತ್ತೆ ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ಶೇ.10 ಸುಂಕ ಹಾಕಿದ್ದಲ್ಲದೇ, ಮಾರನೇ ದಿನ ಇದನ್ನು ಶೇ.5 ಏರಿಸಿ, ಇದನ್ನು ಶೇ.15ರಷ್ಟಕ್ಕೆ ಮಾಡಿದರು. ಅವರ ಈ ನಡೆ ಸುಪ್ರೀಂಕೋರ್ಟ್ ತನ್ನ ಅಹಂಗೆ ನೀಡಿದ ಎಲ್ಲ ಪೆಟ್ಟುಗಳನ್ನೂ ಸಾಬೀತು ಮಾಡುತ್ತಿತ್ತು. ಹಾಗೆಯೇ, ಮುಂದೆಯೂ ಮಾತನಾಡಿ ಒಂದು ವೇಳೆ ಸುಪ್ರೀಂ ತೀರ್ಪನ್ನು ತಮಗೆ ಬೇಕಾದಂತೆ ಅರ್ಥ ಮಾಡಿಕೊಂಡು ಆಟವಾಡಿದರೆ, ತಕ್ಕ ಪಾಠವನ್ನೇ ಕಲಿಸುವುದಾಗಿ ಘೋಷಿಸಿಬಿಟ್ಟರು.

ನೋಡಿ, ಅಮೆರಿಕದ ಇಂದಿನ ಜಿಯೋಪಾಲಿಟಿಕಲ್ ನಾಟಕದಲ್ಲಿ ಒಂದೇ ವ್ಯಕ್ತಿ ಅತಿಯಾಗಿ ಬಣ್ಣ ಹಚ್ಚಿಕೊಂಡಿದ್ದಾನೆ ಅಂತ ಅನ್ನಿಸದೇ ಇರದು. ತಾನು ಭಯಪಡಿಸಿಯೇ ಜಗತ್ತು ಗೆಲ್ಲಬಹುದು, ಮಣಿಸಬಹುದು, ಕಟ್ಟಿ ಹಾಕಬಹುದು ಎಂಬ ಭ್ರಮಾಲೋಕದಲ್ಲಿ ನಡೆದಾಡುತ್ತಿರುವ ಡೊನಾಲ್ಡ್ ಟ್ರಂಪ್. ಯುದ್ಧದ ಗುಂಡು ಹಾರಿಸದೇ, ಅಣುಬಾಂಬ್ ಬಿಚ್ಚದೇ, ಕೇವಲ ಸುಂಕದ ಬೆದರಿಕೆ, ಕಠಿಣ ಪೋಸ್ಟ್‌ಗಳು, ಮಾರುಕಟ್ಟೆಗಳಿಗೆ ಸಂದೇಶ ಬಿಟ್ಟರೆ ಸಾಕು ಇಡೀ ಲೋಕವೂ ನಡುಗಿ ''ಹೌದು ಸಾರ್'' ಎನ್ನುತ್ತದೆ ಎಂಬ ಮನೋಭಾವ ಹೊಂದಿದ್ದಾರೆ.

ಟ್ರಂಪ್ ರಾಜಕಾರಣದ ಗರ್ಭದಲ್ಲಿ 'ಭಯ' ಮಾತ್ರವಲ್ಲ, 'ಅಪಮಾನಗೊಂಡ ಅಮೆರಿಕ' ಎಂಬ ಮಿಥ್ಯಾ ಕಥೆಯೂ ಇದೆ. ಜಗತ್ತು ಹಲವು ದಶಕಗಳಿಂದ ಅಮೆರಿಕವನ್ನು 'ಕದ್ದಿದೆ, ದುರುಪಯೋಗ ಮಾಡಿಕೊಂಡಿದೆ, ಮೋಸ ಮಾಡಿದೆ, ಸಮತೋಲನ ಕಳೆದುಹೋಗಿದೆ' ಎಂದು ಜನತೆಗೆ ನಿರಂತರವಾಗಿ ಬೋಧಿಸುವ ಮೂಲಕ, ಅವರು ತಮ್ಮನ್ನು ಪ್ರತೀಕಾರದ ವೀರನಾಗಿ ಕಟ್ಟಿಕೊಂಡಿದ್ದಾರೆ. ಆ ಪ್ರತೀಕಾರಕ್ಕೆ ಆಯ್ಕೆಯಾದ ಮುಖ್ಯ ಆಯುಧವೇ 'ಟ್ಯಾರಿಫ್'. ಯಾವ ದೇಶ ತಮಗೆ ಇಷ್ಟವಾದಂತೆ ವರ್ತಿಸದಿದ್ದರೂ, ಒಪ್ಪಂದದಲ್ಲಿ ಕಿರುಕುಳ ನೀಡಿದರಂತೆ ಭಾಸವಾದರೂ, ರಾಜತಾಂತ್ರಿಕ ಮಾತುಕತೆಯ, ಜಾಗತಿಕ ಒಪ್ಪಂದಗಳ, ಬಹುಪಕ್ಷೀಯ ವೇದಿಕೆಗಳ ದೀರ್ಘ ಪಥವನ್ನು ತಿರಸ್ಕರಿಸಿ, 'ನಾಳೆಯಿಂದ ನಿಮ್ಮ ವಸ್ತುಗಳಿಗೆ ಶೇ.15 ಹೆಚ್ಚುವರಿ ಸುಂಕ' ಎಂಬ ಒಂದು ಸಾಲಿನ ಘೋಷಣೆಯಿಂದಲೇ ಕಾರ್ಯಭಾರ ಮುಗಿಸಲು ಅವರು ಇಷ್ಟಪಡುವರು. ಇದು ಅವರ ಕಣ್ಣಿನಲ್ಲಿ ಆಡಳಿತ, ಇತರರ ಕಣ್ಣಿನಲ್ಲಿ ಅಸ್ಥಿರತೆ.

ಸುಪ್ರೀಂ ತೀರ್ಪು, ಅಮೆರಿಕ ಸಂವಿಧಾನದ ಮೂಲ ತತ್ವವನ್ನೇ ನೆನಪಿಸಿತು ಅಂದರೆ ತಪ್ಪಾಗಲಾರದು. ತೆರಿಗೆ ವಿಧಿಸುವ, ಸುಂಕ ಹಾಕುವ ಮೂಲ ಅಧಿಕಾರ ಕಾಂಗ್ರೆಸ್‌ಗೇ, ಅಧ್ಯಕ್ಷನ ವೈಯಕ್ತಿಕ ಆಸೆ ಆಕ್ರೋಶಗಳಿಗೆ ಅಲ್ಲ. ಅಂತಹ ನಿರ್ಣಯ ಬಂದ ಕೂಡಲೇ, 'ಸರಿ, ನಾವೂ ಸಂಸತ್ತಿನ ಜೊತೆ ಮಾತಾಡಿ, ನಿಯಮಬದ್ಧ ಮಾರ್ಗ ಹುಡುಕೋಣ' ಎನ್ನುವ ಜನತಾಂತ್ರಿಕ ಮನಸ್ಸು ಟ್ರಂಪ್ ಒಳಗೆ ಬೆಳೆಯಬೇಕಿತ್ತು. ಬದಲಿಗೆ, 'ಗರಿಷ್ಠ ಶೇ.10 ಹಾಕಿದ್ದೇನೆ, ಈಗ ಅದನ್ನು ಶೇ.15 ಮಾಡ್ತೀನಿ, ತೀರ್ಪನ್ನು ನೆಪ ಮಾಡಿಕೊಂಡು ಯಾವುದೇ ದೇಶ ಆಟವಾಡಿದರೆ, ನಿಮಗೇ ಇನ್ನೂ ಅಧಿಕ ಹೊಡೆತ' ಎಂಬ ಧಾಟಿಯ ಎಚ್ಚರಿಕೆ ಸಂವಿಧಾನ ಮತ್ತು ನ್ಯಾಯಾಂಗಕ್ಕಿಂತ ಅವರ ಸ್ವಕೇಂದ್ರಿತ ಅಧಿಕಾರಾಭಿಲಾಷೆಯನ್ನು ತೋರ್ಪಡಿಸುತ್ತದೆ. ಇದು ತಮ್ಮ ಕಾಲದಲ್ಲಿ 'ನಾನು ಹೇಳಿದುದೇ ಧರ್ಮ, ನನ್ನ ನಿರ್ಧಾರವೇ ಶ್ರೇಷ್ಠ' ಎಂದುಕೊಂಡ ಮಹಮದ್ ಬಿನ್ ತುಘಲಕ್ ಮನೋಭಾವಕ್ಕೆ ಅಚ್ಚರಿಯ ಹೋಲಿಕೆ ತರುತ್ತದೆ.

ತುಘಲಕ್ ಕಾಲದ ವಿಚಿತ್ರ ನಿರ್ಧಾರಗಳು ದೆಹಲಿಯಿಂದ ದೌಲತಾಬಾದ್‌ಗೇ ರಾಜಧಾನಿ ಕಿನೆದಂತೆ ಕದಲಿಸುವ ಹಠ, ಕುಶಲ ಎಂದೇನು, ಜನಜೀವನವೇನು ಎಂಬುದನ್ನು ಲೆಕ್ಕಿಸದೇ 'ಇದೇನು ಬೃಹತ್ ತಂತ್ರಜ್ಞಾನ' ಎಂದು ತಾನೇ ಮೆಚ್ಚಿಕೊಂಡ ಔದಾರ್ಯ ಇತಿಹಾಸದ ಗರ್ಭಕ್ಕೆ ಸೇರಿವೆ. ಟ್ರಂಪ್ ಕಾಲದಲ್ಲಿ ರಾಜಧಾನಿಯನ್ನು ಭೌಗೋಳಿಕವಾಗಿ ಕಳೆಯುವ ಅಗತ್ಯವಿಲ್ಲ; ಇಲ್ಲಿ ಟ್ರುತ್‌ನ ಪೋಸ್ಟ್ ಒಂದೇ ಸಾಕು. ತುಘಲಕ್ ಚಿನ್ನ ಬೆಳ್ಳಿ ಬೆಲೆಯನ್ನು ಕಂಚಿನ ನಾಣ್ಯಕ್ಕೆ ಹೋಲಿಕೆ ತಂದಿದ್ದರೆ, ಟ್ರಂಪ್ ಡಾಲರ್ ಪ್ರಭಾವ, ವಿಶ್ವವ್ಯಾಪಾರ, ಸರಕು ಸರಪಳಿಗಳನ್ನು ಏಕ ಪೋಸ್ಟ್‌ನಲ್ಲೇ ತತ್ತರನಾಗುವಂತೆ ಮಾಡುತ್ತಾರೆ. ಇಬ್ಬರೂ ತಾವು ದೊಡ್ಡ ಶಕ್ತಿಶಾಲಿಗಳು ಎನ್ನುವ ಮೋಹದಲ್ಲಿ ಮುಳುಗಿ, ನೆಲದ ವಾಸ್ತವಿಕತೆಯನ್ನು, ಸಾಮಾನ್ಯ ಮನುಷ್ಯನ ಬದುಕನ್ನು ನಿರ್ಲಕ್ಷಿಸುವ ಒಂದು ಸಾಮ್ರಾಜ್ಯ ಮನೋಭಾವದ ಪ್ರತಿಫಲನವಾಗಿದೆ.

ಟ್ರಂಪ್ ನಿರ್ಧಾರದಲ್ಲಿ ಮಾರ್ಕೆಟ್‌ಗಳು ನಲುಗಿವೆ. 2018-20ರ ಮೊದಲ ಟ್ರಂಪ್ ಆಡಳಿತದಲ್ಲಿ ಟ್ಯಾರಿಫ್ ಯುದ್ಧಗಳ ಪರಿಣಾಮಗಳನ್ನು ಜಗತ್ತಿನ ಷೇರುಪೇಟೆಗಳು, ಅಂತಾರಾಷ್ಟ್ರೀಯ ಕಂಪನಿಗಳು ಚೆನ್ನಾಗಿ ಅನುಭವಿಸಿವೆ. ಆಗಿನ ಚೀನಾ-ಅಮೆರಿಕ ಜಗಳ, ಪೂರೈಕೆ ಸರಪಳಿಗೆ ಏಟು ನೀಡಿತ್ತು. ಆದರೆ, ಈಗ ಟ್ರಂಪ್ ಚೀನಾವೊಂದೇ ಅಲ್ಲ, ಜಗತ್ತಿನ ಯಾವುದೇ ದೇಶವನ್ನೂ ಬಿಡುತ್ತಿಲ್ಲ. ಸದ್ಯ ಅವರಿಗೆ ಮಿತ್ರರಿಗಿಂತ ಹೆಚ್ಚು ಶತ್ರುಗಳೇ ಆಗಿದ್ದಾರೆ. ಟ್ರಂಪ್ ನೀತಿಗಳಿಂದಾಗಿ ದೀರ್ಘಾವಧಿ ಯೋಜನೆಗಳೇ ಹಳ್ಳ ಹಿಡಿಯುತ್ತಿವೆ. ಯಾರೊಬ್ಬರೂ ಟ್ರಂಪ್ ನಂಬಿ ಹೊಸ ಯೋಜನೆಗಳತ್ತ ಕೈ ಹಾಕುತ್ತಲೇ ಇಲ್ಲ, ಏಕೆಂದರೆ, ಟ್ರಂಪ್ ಅವರ ಅಸ್ಥಿರ ನಿಲುವುಗಳು ತಮ್ಮ ಕಂಪನಿಗಳಿಗೆ ನಷ್ಟವುಂಟು ಮಾಡಿದರೆ ಕಷ್ಟ ಎಂಬುದೇ ಅವುಗಳ ನಿಲುವಾಗಿದೆ.

ಇಂತಹ ಸಂದರ್ಭದಲ್ಲಿ ಜಗ್ಲೋಬಲ್ ಸೌತ್ ದೇಶಗಳು, ವಿಶೇಷವಾಗಿ ಭಾರತದಂಥ ದೇಶದ ಪಾತ್ರ ಬಹುಮಟ್ಟಿಗೆ ಸಂಕೀರ್ಣ. ಒಂದು ಕಡೆ, ಟ್ರಂಪ್‌ಚೀನಾ ಯುದ್ಧದ ನಡುವೆ 'ಚೀನಾಕ್ಕೆ ಬದಲಿಗೆ ಭಾರತ' ಎಂಬ ಚರ್ಚೆಗಳು ತಲೆದೋರುತ್ತವೆ. ಜಾಗತಿಕ ಕಂಪನಿಗಳು ಪೂರೈಕೆ ಸರಪಳಿಯನ್ನು ವೈವಿಧ್ಯೀಕರಣ ಮಾಡಲು ಯತ್ನಿಸಿದಾಗ, ಭಾರತಕ್ಕೆ ಕೆಲ ಉದ್ಯೋಗ ಮತ್ತು ಹೂಡಿಕೆ ಬರಬಹುದು. ಸದ್ಯ ಆಗುತ್ತಿರುವುದು ಇದೇ ಆಗಿದ್ದು, ಭಾರತ ಅಮೆರಿಕದ ಜತೆ ಜತೆಗೆ 35ಕ್ಕೂ ಹೆಚ್ಚು ದೇಶಗಳ ನಡುವೆ ಎಫ್‌ಟಿಎ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ.

ಇಂಥ ಹೊತ್ತಲ್ಲಿ ಜಗತ್ತು ಏನು ಮಾಡಬಹುದು ಎಂಬುದು ಇಂದಿಗೂ ಯಾರಿಗೂ ನಿಲುಕಿಲ್ಲ. ಈ ಹಿಂದೆ ಭಾರತದ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಹೇಳಿದಂತೆ ಟ್ರಂಪ್ ಅವರ ಅಧಿಕಾರಾವಧಿ ಮುಗಿಯುವವರೆಗೆ ತಾಳ್ಮೆಯಿಂದ ಹೆಜ್ಜೆ ಇಟ್ಟು ನಂತರದಲ್ಲಿ ಒಂದು ಗಟ್ಟಿಯಾದ ಬಾಂಧವ್ಯದತ್ತ ಹೋಗಬಹುದು. ಆದರೆ, ಆಗ ಅಮೆರಿಕದಲ್ಲಿ ಯಾರು ಅಧಿಕಾರಕ್ಕೇರುತ್ತಾರೆ ಎಂಬುದು ಮುಖ್ಯವಾಗುತ್ತದೆ. ಇನ್ನು ಅಮೆರಿಕವನ್ನೇ ಬದಿಗಿರಿಸಿ, ಡಾಲರ್‌ಗೆ ಈಗ ನೀಡಿರುವ ಅಂತಾರಾಷ್ಟ್ರೀಯ ವಹಿವಾಟು ಕರೆನ್ಸಿಯ ಸ್ಥಾನಮಾನವನ್ನು ನಿರಾಕರಿಸಿ, ಬೇರೆ ರೀತಿಯಲ್ಲಿ ಅಥವಾ ಬೇರೆ ಕರೆನ್ಸಿಯಲ್ಲಿ ವಹಿವಾಟು ನಡೆಸಿದರೆ, ಟ್ರಂಪ್ ಅವರ ಈ ನಡೆಗೆ ಪೆಟ್ಟು ನೀಡಬಹುದು.

ಇದನ್ನು ಮಾಡಬೇಕಾದರೆ, ಇಡೀ ಜಗತ್ತು ಒಂದಾಗಬೇಕು. ಆಗ ಅಮೆರಿಕದ ಮೇಲಿನ ಎಲ್ಲರ ನಿಲುವು ಒಂದೇ ಆಗಬೇಕಾಗುತ್ತದೆ. ಇದು ದೊಡ್ಡ ಸವಾಲು ಆಗಿದ್ದು, ಅಮೆರಿಕದ ಜಾಲದಲ್ಲಿ ಬೀಳಲು ಪಾಕಿಸ್ತಾನದಂಥ ದೇಶಗಳು ತುದಿಗಾಲಲ್ಲೇ ನಿಂತಿರುತ್ತವೆ. ಜತೆಗೆ ಈ ಹಿಂದೆ ಬ್ರಿಟಿಷರು ಒಡೆದು ಆಳುವ ರೀತಿಯಲ್ಲಿ ಅಮೆರಿಕವೂ ಈಗ ಜಗತ್ತಿನ ಬೇರೆ ಬೇರೆ ದೇಶಗಳ ಜತೆ ವರ್ತಿಸುತ್ತಿದೆ. ಇದನ್ನು ಯಶಸ್ವಿಯಾಗಿ ಸೋಲಿಸಿ ಮುಂದಕ್ಕೆ ನಡೆಯುವುದು ಸಾಧ್ಯವೇ ಎಂಬ ಪ್ರಶ್ನೆಯೂ ಏಳುತ್ತದೆ.

ಈ ದೊಡ್ಡ ಚಿತ್ರದಲ್ಲಿ, 'ಟ್ರಂಪ್ ಹಾದಿಯನ್ನು ಕಠಿಣ ಮಾಡುವವರು ಯಾರು?' ಎಂಬ ಪ್ರಶ್ನೆಗೆ ಒಂದೇ ಉತ್ತರ ಇರಲ್ಲ. ಮೊದಲ ಹಂತ ಅಮೆರಿಕ ಮತದಾರರು. ಅವರಿಗೇ ತಾನೇ ಅವರು ತಮ್ಮ ಭವಿಷ್ಯವನ್ನು ಯಾವ ನಾಯಕನ ಕೈಗೆ ಒಪ್ಪಿಸುತ್ತಿದ್ದಾರೆ ಎಂದು ಮರು ಚಿಂತಿಸಬೇಕಿದೆ. ಎರಡನೇ ಹಂತ ಜಗತ್ತಿನ ಇತರ ನಾಯಕರು, ಸರ್ಕಾರಗಳು. 'ಟ್ರಂಪ್ ಜೊತೆ ಸೌಹಾರ್ದ ಹಾದಿ' ಮತ್ತು 'ಟ್ರಂಪ್ ನೀತಿಯ ವಿರೋಧ' ಒಂದೇ ಅಲ್ಲ. ಕೆಲವು ವಿಷಯಗಳಲ್ಲಿ ಅಮೆರಿಕದ ಜೊತೆ ಒಪ್ಪಿಕೊಳ್ಳುತ್ತ, ಇನ್ನು ಕೆಲವು ವಿಷಯಗಳಲ್ಲಿ ಪ್ರಾಮಾಣಿಕವಾಗಿ ವಿರೋಧ ಪಟ್ಟ ಅಭಿಪ್ರಾಯವನ್ನು ಹೇಳುವ ಸಾಮರ್ಥ್ಯ ಹೊಂದಿರುವ ನಾಯಕರು, ಟ್ರಂಪ್ ಸರ್ವಾಧಿಕಾರಿ ಮನೋಭಾವಕ್ಕೆ ಮಿತಿಯನ್ನು ತೋರಿಸಬಹುದು. ಮೂರನೇ ಹಂತ ಜಗತ್ತಿನ ಬಹುಜನರು.

ಇಂದಿನ ಕಾಲದಲ್ಲಿ ಒಂದು ದೇಶದ ರಾಜಕಾರಣವು, ಮತ್ತೊಂದು ದೇಶದ ಸಾಮಾನ್ಯ ಮನುಷ್ಯನ ಬದುಕಿನ ಮೇಲೆ ನೇರ ಪರಿಣಾಮ ಬೀರುತ್ತಿದೆ. ಅಮೆರಿಕ ಸುಂಕ ಯುದ್ಧವು ಭಾರತದಲ್ಲಿ ಕಾರ್ಖಾನೆ ಮುಚ್ಚುವಂತೆ ಮಾಡಬಹುದು, ಚೀನಾದಲ್ಲಿ ಕಾರ್ಮಿಕರಿಗೆ ವೇತನ ಕಡಿತ ತರಬಹುದು, ಯುರೋಪಿನ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಉತ್ಪಾದನಾ ನಷ್ಟ ತರಬಹುದು. ಇಂಥ ಪರಸ್ಪರ ಅವಲಂಬಿತ ಯುಗದಲ್ಲಿ 'ಇದು ಅವರ ದೇಶದ ಒಳಗಿನ ರಾಜಕಾರಣ' ಎಂಬ ಭಾವನೆಯಲ್ಲಿ ಕುಳಿತಿರಲು ನಮಗೆ ಐಶ್ವರ್ಯವಿಲ್ಲ. ಜಾಗತಿಕ ಜನತಂತ್ರವು, ಜಾಗತಿಕ ಬಹುಜನದ ಒಂದೇ ಧ್ವನಿಯೇ ಆಗಿರಬೇಕಾಗಿದೆ. ಆಗ 'ನಾವು ಎಲ್ಲರೂ ಒಂದೇ ಸಂಕಷ್ಟದೊಳಗಿದ್ದೇವೆ, ಪರಿಹಾರದ ಹಾದಿ ನಮ್ಮ ವಿವೇಕದಲ್ಲಿದೆ' ಎಂಬ ಶಾಂತ ಧ್ವನಿ ಬೇಕಾಗಿದೆ.

ವೇಷವನ್ನು ನಂಬಬಾರದು

ವೇಷಂ ನ ವಿಶ್ವಸೇತ್ ಪ್ರಾಜ್ಞೋ ವೇಷೋ ದೋಷಾಯ ಜಾಯತೇ ।
ರಾವಣೋ ಭಿಕ್ಷುರೂಪೇಣ ಜಹಾರ ಜನಕಾತ್ಮಜಾಮ್ ॥

ಬುದ್ಧಿವಂತನು ವೇಷವನ್ನು ನಂಬಬಾರದು. ಏಕೆಂದರೆ ವೇಷವು ದೋಷಗಳಿಗೆ ಕಾರಣವಾಗುತ್ತದೆ. ಸನ್ಯಾಸಿ ವೇಷವನ್ನು ಧರಿಸಿದ ರಾವಣನು ಜಾನಕಿಯನ್ನು ಅಪಹರಿಸಿದ -ಎಂಬುದು ಶ್ಲೋಕಾರ್ಥ.

ಎಲ್ಲರನ್ನೂ ಕಾಡುವ ಸಾಮಾನ್ಯ ಪ್ರಶ್ನೆ ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂಬುದಾಗಿ. ಆಮೇಲೆ ಎಷ್ಟು ನಂಬಬೇಕು, ಎಷ್ಟು ನಂಬಬಾರದು ಎಂಬುದಾಗಿ.

ಮೋಸಗೊಳಿಸುವವರು, ಬಣ್ಣದ ಮಾತನ್ನಾಡುವವರು, ವೇಷ ಮರೆತು ಮೋಸಗೊಳಿಸುವವರು ಹೆಚ್ಚಾದ ಕಾರಣ ಈ ಸಮಸ್ಯೆ ಉದ್ಭವಿಸಿದೆ. ನಾವಿರಿಸಿದ ವಿಶ್ವಾಸವೇ ಕೆಲವೊಮ್ಮೆ ನಮಗೆ ಮುಳುವಾಗುತ್ತದೆ. ಆದ್ದರಿಂದಲೇ ಸೂಕ್ತಿಯೊಂದು 'ವಿಶ್ವಾಸೋ ನೈವ ಕರ್ತವ್ಯಃ'' ಎಂದಿದೆ. ನಮ್ಮ ಬುದ್ಧಿವಂತಿಕೆ, ಬಲ(ಪ್ರಯತ್ನ)ಗಳ ಮೇಲೆ ಮಾತ್ರ



ವಿಶ್ವಾಸವಿರಿಸಬೇಕು. ಕೆಲವೊಮ್ಮೆ ಇದು ಕೈಕೊಡುತ್ತದೆ. ಹೀಗಿರುವಾಗ ಇತರರನ್ನು ಹೇಗೆ ನಂಬುವುದು? ಇಂದಿನ ಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ, ಗಂಡ ಹೆಂಡತಿಯನ್ನು ನಂಬಲಾರ; ಹೆಂಡತಿ ಗಂಡನನ್ನು ನಂಬಲಾರಳು. ಇವರಿಬ್ಬರೂ ಮಕ್ಕಳನ್ನು ನಂಬುವಂತಿಲ್ಲ. ಮಕ್ಕಳು ಹೆತ್ತವರನ್ನೇ ನಂಬರು.

ನಮ್ಮವರನ್ನೇ ನಂಬಲಾರದ ಸ್ಥಿತಿಗೆ ಬಂದಾಗ ವೇಷ ತೊಟ್ಟು ಬಂದವರನೆಂತು ನಂಬುವುದು? ತುಂಬಾ ಆತ್ಮೀಯರಂತೆ ನಟಿಸಿ ವಂಚಿಸುವವರಿದ್ದಾರೆ. ಮನೆ ಬಾಗಿಲಿಗೆ ಬೇಡುವುದಕ್ಕೆ ಬಂದವರಿಗೆ ಕೊಡದೇ ಇರುವ ಸಂಸ್ಕೃತಿ ನಮ್ಮದಲ್ಲ, ಆದರೆ ಇಂದು ಬೇಡುವ ನೆಪದಲ್ಲಿ ವಂಚಿಸುವವರಿದ್ದಾರೆ.

ಬುದ್ಧಿವಂತನಾದವನು ಯೋಚಿಸಿ, ವಿಮರ್ಶಿಸಿ ನಿರ್ಣಯ ತೆಗೆದುಕೊಳ್ಳಬೇಕು. ವೇಷದವರನ್ನು ಯಾವಾಗಲೂ ಎಚ್ಚರದಿಂದಲೇ ಅವಲೋಕಿಸಬೇಕು. ವೇಷವೇ ಅನೇಕ ದೋಷಗಳನ್ನುಂಟು ಮಾಡುತ್ತದೆ. ವಂಚಿಸುವುದಕ್ಕೆ ಕೇವಲ ಬಾಹ್ಯ ವೇಷವೇ ಬೇಕಿಲ್ಲ, ಸಭ್ಯರಂತೆ ಮುಖವಾಡ ಧರಿಸಿ ವಂಚಿಸುವವರು ಹೆಚ್ಚಿದ್ದಾರೆ. ಸೇವೆ, ಆರೋಗ್ಯ, ಶಿಕ್ಷಣ, ಬಡತನ ನಿವಾರಣೆಯ ಮುಖವಾಡ ತೊಟ್ಟು ವಂಚಿಸಿ ಮೋಸ ಮಾಡುತ್ತಾರೆ.

ಪ್ರೀತಿ ಪ್ರೇಮದ ಹೆಸರಿನಲ್ಲಿ ವಂಚಿಸುವವರಿದ್ದಾರೆ. ಇಂದು ಈ ಸಮಸ್ಯೆ ಬೃಹತ್ ಆಗಿ ಬೆಳೆಯುತ್ತಿದೆ. ಇದರ ಮುಂದೆ ದ್ವೇಷ ಮರೆಸಿ ಮಾಡುವ ವಂಚನೆ ಅಷ್ಟು ದೊಡ್ಡದಲ್ಲ, ಆದರೂ ಅದು ಮೋಸದ ಪ್ರಧಾನ ಭಾಗವೇ ಆಗಿದೆ. ರಾವಣನು ತನ್ನನ್ನು ಮರೆಮಾಚಿ ಸನ್ಯಾಸಿ ವೇಷಧರಿಸಿ ಸೀತೆಯನ್ನು ಅಪಹರಿಸಿದ.

ಒಳ್ಳೆಯದನ್ನು ಮಾಡುವುದಕ್ಕೂ, ಆಗುವುದಕ್ಕೂ ವೇಷವನ್ನು ಧರಿಸುವುದಿದೆ. ಪರಶಿವನು ಕಿರಾತ ವೇಷ ಧರಿಸಿ ಅರ್ಜುನನಿಗೆ ಪಾಶುಪತಾಸ್ತ್ರಾದಿ ಆಯುಧಗಳನ್ನಿತ್ತು ಅನುಗ್ರಹಿಸಿದ. ಪಾಂಡವರು ವೇಷ ಮರೆಸಿ ಅಜ್ಞಾತ ವಾಸವನ್ನು ಸಾಂಗಗೊಳಿಸಿದರು. ಒಳ್ಳೆಯ ಕೆಲಸಕ್ಕಿಂತಲೂ ಕೆಟ್ಟ ಕೆಲಸಕ್ಕಾಗಿಯೇ ವೇಷಧರಿಸಿ ವ್ಯವಹರಿಸುವವರು ಹೆಚ್ಚಿರುವುದರಿಂದ ಎಚ್ಚರ ವಹಿಸಬೇಕಾದುದು ಎಲ್ಲರ ಕರ್ತವ್ಯ.

ಕುಂದನಲ್ಲದೆ ಲೇಸ ಕಾಣದವರು

ಪ್ರತಿಯೊಂದರಲ್ಲಿಯೂ ಕುಂದನ್ನೇ ಕಾಣುವ ಸ್ವಭಾವ ಅನೇಕರಲ್ಲಿರುತ್ತದೆ. ಆದರೆ ಕುಂದನ್ನೇ ಕಾಣುವವರಿಂದ ಸಮಾಜಕ್ಕೆ ಲೇಸು ಉಂಟಾಗಲಾರದು.

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಕನ್ನಡದ ಕವಿ ರಾಘವಾಂಕನ 'ಹರಿಶ್ಚಂದ್ರ ಕಾವ್ಯ' (ಹರಿಶ್ಚಂದ್ರ ಚಾರಿತ್ರ) ದಲ್ಲಿ ಒಂದು ಸನ್ನಿವೇಶ ಇದೆ. ಅಮರಾವತಿಯಲ್ಲಿ ದೇವೇಂದ್ರನ ಸಭೆ. ಆ ಸಭೆಯಲ್ಲಿ ಘನತೆವೆತ್ತ ಸುರರು, ಋಷಿಗಳೇ ಮುಂತಾದ ಮಹನೀಯರು ಮಂಡಿಸಿದ್ದಾರೆ. ಆಗ ದೇವೇಂದ್ರನಲ್ಲಿ ಒಂದು ಜಿಜ್ಞಾಸೆ ಉಂಟಾಗುತ್ತದೆ. ಸೂರ್ಯವಂಶದ ಮಹಾರಾಜರಲ್ಲಿ ಅಪ್ರತಿಮ ಸತ್ಯವಾದಿ ಯಾರು? ಇದನ್ನು ತಿಳಿಯುವುದಕ್ಕಾಗಿ ವಸಿಷ್ಠನಲ್ಲಿ ಈ ಪ್ರಶ್ನೆಯನ್ನು ಮುಂದಿಡುತ್ತಾನೆ. ''ಇಕ್ಷ್ವಾಕು ವಂಶೀಯರಲ್ಲಿ ಮನ ವಚನ ಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ?'' ಈ ಪ್ರಶ್ನೆಗೆ ವಸಿಷ್ಠ, ಅಂತಹ ಸತ್ಯವಾದಿ ವಸುಧಾಧಿಪತಿ ಹರಿಶ್ಚಂದ್ರ ಎಂದು ಉತ್ತರಿಸುತ್ತಾನೆ. ಅದಿಲ್ಲಿ ಪ್ರಧಾನವಲ್ಲ, ಆದರೆ ಆ ಸಭೆಯಲ್ಲಿ ವಸಿಷ್ಠನ ಸಾಲಿನಲ್ಲಿ ಕುಳಿತಿದ್ದ ವಿಶ್ವಾಮಿತ್ರನು ಇದರಿಂದ ಕೆರಳುತ್ತಾನೆ.

ಯಾಕೆ ಕೆರಳಿದ ಎಂಬುದಕ್ಕೆ ಕವಿಯು ಕಾರಣವನ್ನು ಮುಂದಿಡುತ್ತಾನೆ. ವಿಶ್ವಾಮಿತ್ರನ ಸ್ವಭಾವವೇನು ಎಂಬುದನ್ನು ವಿವರಿಸುತ್ತ, ಒಂದು ವಿಶಿಷ್ಟ ಗುಣವನ್ನು (ಅಥವಾ ದುರ್ಗುಣ ಅನ್ನಿ) ತಿಳಿಸುತ್ತಾನೆ.



'ಅಖಿಳ ಜೀವಾವಳಿಯಲಿ ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ' ವಿಶ್ವಾಮಿತ್ರನದಾಗಿತ್ತು ಎನ್ನುತ್ತಾನೆ ರಾಘವಾಂಕ. ಹಾಗೆಂದರೇನು? ಸೃಷ್ಟಿಯಲ್ಲಿ ಅನೇಕ ಸಹಸ್ರ, ಲಕ್ಷ ಸಂಖ್ಯೆಯ ಜೀವ ರಾಶಿಗಳಿವೆ. ಅವುಗಳನ್ನು ಪರಿಶೀಲನೆ ಮಾಡುವ ಸಂದರ್ಭ ಬಂದರೆ ಈ ವಿಶ್ವಾಮಿತ್ರನ ಕಣ್ಣಿಗೆ ಲೋಪಗಳಲ್ಲದೆ ಒಳ್ಳೆಯದು ಯಾವುದೂ ಕಾಣಿಸದು ಎಂದು ಇದರ ಅರ್ಥ. ವಿಚಿತ್ರ ನೋಡಿ, ಅವನ ಹೆಸರು ವಿಶ್ವಾಮಿತ್ರ. ಆದರೆ ಮೈತ್ರೀಭಾವವು ಅವನಲ್ಲಿ ವಿಶಿಷ್ಟವಾಗಿ ಇರಬೇಕಿತ್ತು, ಆದರೆ ಇರಲಿಲ್ಲ, ಕುಂದನ್ನೇ ಕಾಣುವ ವಿಶ್ವಾಮಿತ್ರನ ಸ್ವಭಾವದಿಂದಾಗಿ ಹರಿಶ್ಚಂದ್ರನ ಜೀವನವು ಬಿರುಗಾಳಿಗೆ ಸಿಕ್ಕಿದ ಎಲೆಯಂತೆ ತತ್ತರಿಸಿಹೋಯಿತು. ಅವನು ತನ್ನ ಸತ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ನಾನಾ ಸಂಕಷ್ಟಗಳಿಗೆ ಈಡಾಗಬೇಕಾಯಿತು.

ಇರಲಿ, ಪ್ರತಿಯೊಂದರಲ್ಲಿಯೂ ಕುಂದನ್ನೇ ಕಾಣುವ ಇಂತಹ ಸ್ವಭಾವ ಅನೇಕರಲ್ಲಿರುತ್ತದೆ. ಅವರಿಗೆ ಛಿದ್ರಾನ್ವೇಶಿಗಳು ಅಂತ ಹೇಳುವ ಕ್ರಮವೂ ಉಂಟು. ಯಾವುದರಲ್ಲಾದರೂ, ಛಿದ್ರ, ಅಂದರೆ ಒಡಕನ್ನು ಕಾಣುವುದು (ಅಥವಾ ಹುಡುಕುವುದು) ಅವರಿಗೆ ಅಂಟಿದ ಗುಣ. ಹಾಗಾಗಿ ನೀವು ಏನೇ ವಿಷಯವನ್ನು ಅವರಲ್ಲಿ ಪ್ರಸ್ತಾವಿಸಿ. ಆ ವಿಷಯದಲ್ಲಿ ಒಂದಲ್ಲ ಒಂದು ದೋಷ ಅವರಿಗೆ ಸಿಕ್ಕಿಯೇ ಸಿಗುತ್ತದೆ. ಉದಾಹರಣೆಗೆ ನೋಡಿ. ಒಬ್ಬರು ಗೃಹಸ್ಥರಿದ್ದಾರೆ. ಅವರ ಮನೆಯಾಕೆ ಹೇಗೇ ಅಡುಗೆ ಮಾಡಿ ಬಡಿಸಿದರೂ ಅದರಲ್ಲಿ ಕುಂದು ಹುಡುಕಿ ಹಿಡಿಯದೇ ಬಿಡಲಾರರು. ಊಟಕ್ಕೆ ಏನೋ ಒಂದು ವ್ಯಂಜನ ಮಾಡಿದ್ದಾರೆ ಎಂದು ಭಾವಿಸಿ. ಉದಾಹರಣೆಗೆ ಒಂದು ಪಾಯಸ ಮಾಡಿದರು ಎಂದಿಟ್ಟುಕೊಳ್ಳುವ. ಯಜಮಾನರು ಊಟದ ಎಲೆಯ ಎದುರು ಕುಳಿತ ಕೂಡಲೇ ಮುಸುಮುಸು ಪ್ರಾರಂಭ. ''ಈಗ ಯಾವ ಕರ್ಮಕ್ಕೆ ಪಾಯಸ? ಸುಮ್ಮನೆ ಒಂದು ಅನ್ನ ಸಾರು, ಪಲ್ಯ ಸಾಕಾಗುವುದಿಲ್ವ?'' ಎನ್ನುತ್ತಾರೆ. ಸರಿ, ಅವರು ಹೇಳಿದರಲ್ಲ ಅಂತ ಸರಳವಾದ ಅಡುಗೆ ಮಾಡಿದ ದಿನ, ''ನಿತ್ಯವೂ ಇಷ್ಟೇ ತಿನ್ನಬೇಕೋ? ಅಪರೂಪಕ್ಕೆ ಒಂದು ದಿನವಾದರೂ ವಿಶೇಷ ಮಾಡಬಾರದೆ?'' ಎಂದು ಗೊಣಗುತ್ತಾರೆ. ಏನೋ ಆಕಸ್ಮಿಕವಾಗಿ ಅವರು ವಿಶೇಷ ಅಡುಗೆಯನ್ನು ಮಾಡಿದ ದಿನವೂ, ಇವರಿಗೆ ವಿಶೇಷವು ಬೇಕಾದ ದಿನವೂ ಒಂದೇ ಆಯಿತು ಅನ್ನಿ. ಆಗಲಾದರೂ ಸಮಾಧಾನವೆ ಅಂದರೆ, ಅದೇನೂ ಇಲ್ಲ. ''ಹೇಗೂ ಮಾಡುವಾಗ ಸ್ವಲ್ಪ ಸಿಹಿಯಾಗಿ ಮಾಡುವುದಲ್ವ? ನನಗೇನು ಮಧುಮೇಹ ಬಂದಿದೆಯ?'' ಅಂದಾರು. ಸಿಹಿ ಹೆಚ್ಚು ಅನಿಸಿದರೆ, ''ಇದೇನಿಷ್ಟು ಬೆಲ್ಲ ಸುರುವಿದ್ದಿ? ನಾನು ಸಿಹಿಮೂತ್ರ ಬಂದು ಸಾಯಬೇಕೇ?'' ಅನ್ನುತ್ತಾರೆ. ಹೋಗಲಿ, ಎಲ್ಲವೂ ಸರಿಯಾದ ಪ್ರಮಾಣದಲ್ಲಿ ಸೇರಿ, ರುಚಿಕಟ್ಟಾಗಿದೆ ಅಂದುಕೊಳ್ಳಿ. ಆಗಲೂ ಸಮಾಧಾನವಿಲ್ಲ.

''ಹೀಗೆ ದಿನಾ ರುಚಿಯಾಗಿ ಮಾಡಿ ಹಾಕಿದರೆ ತಿಂದೂ ತಿಂದೂ ನನ್ನ ತೂಕ ಒಂದು ತಿಂಗಳಲ್ಲೇ ಡಬಲ್ ಆದೀತು'' ಎಂದು ಗೊಣಗದೇ ಇರಲಾರರು. ಹೋಗಬೇಕಾಗಿರುವ ಬಸ್ಸು ತಡವಾದರೂ ಆಕ್ಷೇಪ, ಬೇಗ ಬಂದರೂ ಆಕ್ಷೇಪ, ಸಮಯಕ್ಕೆ ಸರಿಯಾಗಿ ಬಂದರೂ ದೋಷವೇ ಇವರಿಗೆ. ಹೆಚ್ಚು, ಕಡಿಮೆ, ಸರಿ ಹೀಗೆ ಯಾವುದಾದರೂ ಅದು ಒಪ್ಪಿಗೆಯಾಗುವುದಿಲ್ಲ. ಇದು ಒಂದು ಮನೋಧರ್ಮ. ಕವಿ ಕೆ.ಎಸ್. ನರಸಿಂಹ ಸ್ವಾಮಿ ಅವರು ಈ ಬಗೆಯ ಸ್ವಭಾವವುಳ್ಳವರನ್ನೇ

'ಚಳಿಗಾಲ ಬಂದಾಗ 'ಎಷ್ಟು ಚಳಿ?' ಎಂದರು
ಬಂತಲ್ಲ ಬೇಸಿಗೆ, 'ಕೆಟ್ಟ ಬಿಸಿಲೆಂದರು;
ಮಳೆ ಬಿತ್ತೊ, 'ಬಿಡದ ಶನಿ!' ಎಂಬ ಟೀಕೆ:
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!'

ಎಂದು ಹೇಳಿದ್ದು.

ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಯಕ್ಷಗಾನ ತಾಳಮದ್ದಲೆಯ ಕುರಿತು, ವಿಸ್ತೃತ ಲೇಖನವೊಂದು ಪ್ರಕಟವಾಯಿತು. ಈ ರಂಗಭೂಮಿಯ ಗುಣ ದೋಷಗಳ ವಿಮರ್ಶೆ ಅದು. ಒಟ್ಟಾಗಿ ಈ ರಂಗಭೂಮಿ ತನ್ನ ಮಟ್ಟನ್ನು ಉಳಿಸಿಕೊಂಡಿಲ್ಲ ಎನ್ನುವುದು ಲೇಖನದ ಸಾರಾಂಶ. ಬರೆದವರ ಅಭಿಪ್ರಾಯ ಸರಿಯೋ ತಪ್ಪೋ ಎಂಬುದು ಸದ್ಯದ ವಿವಕ್ಷೆ ಅಲ್ಲ. ಈ ಲೇಖನ ಬಂದುದೇ ತಡ, ಇದು ಕೆಲವು ವಾಟ್ಸಪ್ ಬಳಗಗಳಲ್ಲಿಯೂ ಪ್ರತಿಫಲಿಸಿತು. ಹಲವರು ಇದನ್ನು ಹಂಚಿಕೊಂಡರು. ಅಲ್ಲಿಯೂ ಚರ್ಚೆಗಳಾದವು. ಬಳಗವೊಂದರಲ್ಲಿ, ಪತ್ರಿಕೆಯ ನಿರ್ದಿಷ್ಟ ಲೇಖನವನ್ನು ಬೆಂಬಲಿಸಿ, ಈಗಿನ ಕಾರ್ಯಕ್ರಮಗಳು ಕಳಪೆ, ಗುಣಮಟ್ಟ ಇಲ್ಲದವು ಎಂದು ಕೆಲವರು ಬರೆದರು. ಇದರಲ್ಲಿ ವಿಶೇಷವೇನಿಲ್ಲ, ಯಾವುದೇ ಕ್ಷೇತ್ರದಲ್ಲಿ ಇಂತಹ ಸಂವಾದಗಳು, ಚರ್ಚೆಗಳು ನಡೆಯುವುದು ಸಹಜ ಪ್ರಕ್ರಿಯೆ. ಇರಲಿ, ಮುಂದೇನಾಯಿತು ನೋಡಿ.

ಕೆಲವು ದಿನಗಳಲ್ಲಿ ಅದೇ ಪತ್ರಿಕೆಯಲ್ಲಿ, ತಾಳಮದ್ದಲೆಯ ಕೆಲವು ಉತ್ತಮ ಕಲಾವಿದರು ಹಾಗೂ ಗುಣಮಟ್ಟವುಳ್ಳ ಪ್ರದರ್ಶನಗಳ ಕುರಿತು ಇನ್ನೊಂದು ಲೇಖನ ಪ್ರಕಟವಾಯಿತು. ಈ ಕ್ಷೇತ್ರದ ಎಲ್ಲವೂ ಕೆಟ್ಟಿಲ್ಲ ಎನ್ನುವ, ಉತ್ತಮಿಕೆಯನ್ನು ಗುರುತಿಸುವ ಈ ಲೇಖನವನ್ನು ಅನೇಕರು ಗಮನಿಸದವರಂತೆ ಇದ್ದು ಬಿಟ್ಟರು. ಈ ಮೊದಲಿನ ಲೇಖನವನ್ನು ಬೆಂಬಲಿಸಿ, ಅದನ್ನು ಬಳಗಗಳಲ್ಲಿ ಪ್ರಸಾರ ಮಾಡಿದವರೆಲ್ಲ ಹೊಸ ಲೇಖನದ ಕುರಿತು ಮೌನವಾಗಿಬಿಟ್ಟರು. ಅದನ್ನು ಯಾವ ಬಳಗದಲ್ಲಿಯೂ ಪ್ರಸಾರ ಮಾಡುವವರಿಲ್ಲವಾಯಿತು. ಕುಂದನ್ನು ಆಡುವವರು ಲೇಸನ್ನು ಕಾಣಲೇ ಇಲ್ಲ, ಅಂದರೆ ಇದಕ್ಕೆ, 'ಕುಂದನಲ್ಲದೆ ಲೇಸ ಕಾಣದಿಹ ಗುಣ' ಕಾರಣ ಎನ್ನದೆ ಬೇರೇನು ಹೇಳೋಣ?

ಮಕ್ಕಳನ್ನು ಹೆತ್ತವರು ಅಥವಾ ಪೋಷಕರು ಈ ದಿಕ್ಕಿನಲ್ಲಿ ಚಿಂತಿಸಬೇಕಾದ ಸಂಗತಿಯೊಂದಿದೆ. ಮಕ್ಕಳಲ್ಲಿ ಕೆಟ್ಟ ಅಂದರೆ ಸಮಾಜಕ್ಕೆ ಒಪ್ಪಿತವಲ್ಲದ ವರ್ತನೆಯೂ ಇರುತ್ತದೆ. ಸಮಾಜಕ್ಕೆ ಒಪ್ಪಿಗೆಯಾಗುವ ಒಳ್ಳೆಯ ವರ್ತನೆಯೂ ಇರುತ್ತದೆ. ಕೆಟ್ಟ ವರ್ತನೆಗೆ ಶಿಕ್ಷೆ ಹಾಗೂ ಉತ್ತಮ ವರ್ತನೆಗೆ ಮೆಚ್ಚುಗೆ ಸಿಗುತ್ತದೆ. ಆದರೆ ಕೆಟ್ಟ ವರ್ತನೆಗೆ ಯಾವ ಪ್ರತಿಕ್ರಿಯೆಯನ್ನೂ ಕೊಡದೆ ಒಳ್ಳೆಯದಕ್ಕೆ ಮಾತ್ರ ಮೆಚ್ಚುಗೊಡಬೇಕು ಎನ್ನುತ್ತದೆ ಮನಃಶಾಸ್ತ್ರ.

ಯಾವುದಕ್ಕೆ ಪ್ರತಿಕ್ರಿಯೆ ಇಲ್ಲವೋ ಆ ವರ್ತನೆ ಬಿಟ್ಟುಹೋಗುತ್ತದೆ. ಮೆಚ್ಚುಗೆ ಸಿಕ್ಕಿದ್ದು ಬೆಳೆಯುತ್ತದೆ. ಮಕ್ಕಳ ವಿಷಯ ಮಾತ್ರವಲ್ಲ, ದೊಡ್ಡವರ ವಿಷಯವೂ ಅಷ್ಟೇ. ಕುಂದನ್ನೇ ಕಾಣುವವರಿಂದ ಸಮಾಜಕ್ಕೆ ಲೇಸು ಉಂಟಾಗಲಾರದು.

ಸಮುದಾಯದ ಆದರ್ಶ ವ್ಯಕ್ತಿಗಳು ಯಾರಾಗಬೇಕು?

ಉದಯ್ ಮೆಹೂರ್‌ಕರ್

ದೇಶವೊಂದು ಶ್ರೇಷ್ಠವಾಗಿ ಬೆಳೆಯಬೇಕಾದರೆ ಸಮಾಜದ ಪ್ರತಿಯೊಂದು ವರ್ಗಕ್ಕೂ ಆದರ್ಶ ವ್ಯಕ್ತಿಗಳು (ರೋಲ್ ಮಾಡೆಲ್)ಇರಬೇಕು. ಭಾರತದಲ್ಲಿ ಪ್ರತಿಯೊಂದು ಸಮುದಾಯ ಕೂಡಾ ತನ್ನದೇ ಆದ ಆದರ್ಶ ವ್ಯಕ್ತಿಗಳನ್ನು ಹೊಂದಿದೆ. ಇಂತಹ ಆದರ್ಶ ವ್ಯಕ್ತಿಗಳನ್ನು ಆ ಸಮುದಾಯದವರಷ್ಟೇ ಅಲ್ಲದೇ ಎಲ್ಲಾ ಸಮುದಾಯದವರೂ ಗೌರವಿಸುತ್ತಾರೆ, ಆರಾಧಿಸುತ್ತಾರೆ. ಉದಾಹರಣೆಗೆ ಗುಜರಾತಿನ ಮೂವರು ದಲಿತ ಸಂತರನ್ನು ಮೇಲ್ವರ್ಗದ ಜನರು ಕೂಡಾ ಗೌರವಿಸುತ್ತಾರೆ. ದಾಸಿ ಜೀವನ್, ತ್ರಿಕಾಮ ಸಾಹೇಬ್ ಮತ್ತು ಭಾನು ಸಾಹೇಬ್ ಎಂಬ ಈ ಮೂವರು ಸಂತರು ರಚಿಸಿದ ಭಜನೆಗಳನ್ನು ಗುಜರಾತಿನ ಪುಷ್ಟಿಮಾರ್ಗಿ ವೈಷ್ಣವ ದೇವಾಲಯಗಳಲ್ಲೂ ಹಾಡಲಾಗುತ್ತದೆ. ಮಹಾರಾಷ್ಟ್ರದಲ್ಲಿ ಕೂಡಾ ಪ್ರತಿಯೊಂದು ಸಮುದಾಯದಲ್ಲೂ ಸಂತವರೇಣ್ಯರು ಹುಟ್ಟಿಬಂದಿದ್ದಾರೆ. ಮಹಾರ್ ಜನಾಂಗದ ಚೋಕಮೇಳ ಅವರ ಅಭಂಗಗಳನ್ನು ಈಗಲೂ ಮಹಾರಾಷ್ಟ್ರದಲ್ಲಿ ಭಕ್ತಿಭಾವದಿಂದ ಹಾಡಲಾಗುತ್ತದೆ.

ಮಹಾರಾಷ್ಟ್ರದ 12ನೇ ಶತಮಾನದ ಶ್ರೇಷ್ಠ ಸಂತ ಚಕ್ರಧರ ಸ್ವಾಮಿ ಅಸ್ಪೃಶ್ಯತೆ ಆಚರಿಸುವುದರ ವಿರುದ್ಧ ಜನರಿಗೆ ಬೋಧಿಸುತ್ತಿದ್ದರು. ಅವರು ತಮ್ಮ ಬೋಧನೆಗಳನ್ನು ಹೇಳುತ್ತಾ ಪೇಶಾವರ ತನಕ ಪಾದಯಾತ್ರೆ ನಡೆಸಿದ್ದರು. ಅವರು ಮಹಾರಾಷ್ಟ್ರೀಯರಿಗಷ್ಟೇ ಅಲ್ಲದೆ ಇನ್ನಿತರ ರಾಜ್ಯಗಳಲ್ಲೂ ಗೌರವಕ್ಕೆ ಅರ್ಹರಾಗಿದ್ದಾರೆ. ಗುಜರಾತಿನಲ್ಲಿ ಕ್ಷತ್ರಿಯ ವೀರ ಭಾತಿ ಮಹಾರಾಜ್ ಮುಸ್ಲಿಂ ಮತಾಂಧರು ಗೋಹತ್ಯೆ ನಡೆಸುವುದನ್ನು ತಡೆಯಲು ಹೋಗಿ ಜೀವ ತೆತ್ತಿದ್ದರು. ಅವರ ಹೆಸರನ್ನು ಈಗಲೂ ಗುಜರಾತ್ ಮತ್ತು ರಾಜಸ್ಥಾನದಲ್ಲಿ ಸ್ಮರಿಸಲಾಗುತ್ತದೆ.

ತೋಮರ್ ರಜಪೂತ ದೊರೆ ರಾಜ ರಾಮದೇವ್ ಕೂಡಾ ಸಾಮಾಜಿಕ ಅನಿಷ್ಟಗಳ ವಿರುದ್ಧ ಜನರಿಗೆ ಬೋಧಿಸುತ್ತಿದ್ದರು. ಅವರ ಜನ್ಮದಿನವನ್ನು ಹರ್ಯಾಣ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಆಚರಿಸಲಾಗುತ್ತದೆ.ಈ ರಾಜ್ಯಗಳಲ್ಲಿ ಅವರ ಕೆಲವು ದೇವಾಲಯಗಳನ್ನೂ ಕಾಣಬಹುದು. ಅವರ ಹಿಂಬಾಲಕರಲ್ಲಿ ಹೆಚ್ಚಿನವರು ದಲಿತರು. ಉತ್ತರ ಪ್ರದೇಶದಲ್ಲಿ 14ನೇ ಶತಮಾನದ ರಾಜ ತ್ರಿಲೋಕ್ ಚಂದ್ ಸ್ವತಂತ್ರ, ಹಿಂದು ರಾಜ್ಯವನ್ನು ಕಟ್ಟಿದವನು. ಆತನನ್ನು ಪೂರ್ವ ಉತ್ತರಪ್ರದೇಶದಲ್ಲಿ ಈಗಲೂ ಸ್ಮರಿಸಲಾಗುತ್ತದೆ. ಒಡಿಶಾದಲ್ಲಿ ಸೂರ್ಯವಂಶ ಸಾಮ್ರಾಜ್ಯ ಕಟ್ಟಿದ ರಾಜ ಕಪಿಲೇಂದ್ರ, ಅಲ್ಲಿನ ಜನರಿಗೆ ಈಗಲೂ ಆರಾಧ್ಯಪುರುಷ.

ಇಂತಹ ನಿಜವಾದ ಹೀರೋಗಳು ಸಮಾಜದ ಉನ್ನತಿಗೆ ಕಾರಣರಾದರೆ, ನಕಲಿ ಹೀರೋಗಳು ಸಮಾಜವನ್ನು ಅವನತಿಗೆ ಕೊಂಡೊಯ್ಯಬಲ್ಲರು. ಉದಾಹರಣೆಗೆ ನಮ್ಮ ಬಾಲಿವುಡ್ ಹೀರೋಗಳು. ಭಾರತದ ಕೋಟ್ಯಂತರ ಯುವಕರು ಈ ಬಾಲಿವುಡ್ ಹೀರೋಗಳನ್ನೇ ತಮ್ಮ ರೋಲ್ ಮಾಡೆಲ್‌ಗಳೆಂದು ಆರಾಧಿಸುತ್ತಾರೆ. ಕೆಲವೊಮ್ಮೆ ಅವರನ್ನು ದೇವರಂತೆ ಕಾಣುವುದೂ ಇದೆ. ಆದರೆ ನಿಜ ಜೀವನದಲ್ಲಿ ಈ ಹೀರೋಗಳು ನಕಾರಾತ್ಮಕ ನಡೆ-ನುಡಿಗಳನ್ನು ಹೊಂದಿರುತ್ತಾರೆ. ತಾನು ಹಸುವಿನ ಮಾಂಸ ತಿನ್ನುವುದಾಗಿ ಬಹಿರಂಗವಾಗಿ ಘೋಷಿಸಿದ ಹಿಂದಿ ಚಿತ್ರನಟನೊಬ್ಬ ಈಗ ಶ್ರೀರಾಮಾಯಣ ಚಿತ್ರದಲ್ಲಿ ಶ್ರೀರಾಮನ ಪಾತ್ರ ವಹಿಸಲು ತಯಾರಾಗಿದ್ದಾನೆ. ಸಣ್ಣ ಮಕ್ಕಳು ಆತನನ್ನೇ ಶ್ರೀರಾಮನಂತೆ ಪರಿಗಣಿಸಲಾರಂಭಿಸಿದರೆ ಅದರ ಪರಿಣಾಮವು ಏನಾಗಬಹುದೆಂದು ಊಹಿಸಬಹುದು. ಅದು ನಮ್ಮ ಸಂಸ್ಕೃತಿಗೆ ಪ್ರತಿಕೂಲವಾಗಬಹುದು.



ಶಾ ವಲಿಉಲ್ಲಾ

ಭಾರತದಲ್ಲಿ ಇದೀಗ 'ನಿಜವಾದ' ಆದರ್ಶ ವ್ಯಕ್ತಿಗಳು ಅತ್ಯಗತ್ಯವಾಗಿ ಬೇಕಾಗಿರುವ ಸಮುದಾಯವೆಂದರೆ ಮುಸ್ಲಿಂ ಸಮುದಾಯ. ಮುಸ್ಲಿಂ ಸಮುದಾಯದಲ್ಲಿ ನಿಜವಾದ ರೋಲ್ ಮಾಡೆಲ್‌ಗಳ ಕೊರತೆ ಇದೆ. ಉಗ್ರವಾದಿ ಮನಸ್ಥಿತಿಯವರನ್ನು, ಭಾರತದ ಮೇಲೆ ಆಕ್ರಮಣವೆಸಗಿದವರನ್ನು ಹೀರೋಗಳೆಂದು ಬಿಂಬಿಸಲಾಗುತ್ತಿದೆ. ಭಾರತದಲ್ಲಿ ವಹಾಬಿ ಆಂದೋಲನವು ಮಧ್ಯಯುಗದ ಉಗ್ರವಾದಿ ಮುಸ್ಲಿಂ ವ್ಯಕ್ತಿಗಳನ್ನೇ ತನ್ನ ಹೀರೋಗಳೆಂದು ಪ್ರತಿಬಿಂಬಿಸುತ್ತದೆ. (ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯನಂತರ ತನ್ನದೇ ಸ್ವಾರ್ಥ ಸಾಧನೆಗಾಗಿ ಈ ವಹಾಬಿ ಆಂದೋಲನವನ್ನು ಬೆಂಬಲಿಸುತ್ತಾ ಬಂದಿದೆ.) ಮಧ್ಯಯುಗದ ಈ 'ವಿಭಜನಾವಾದಿ ಹೀರೋಗಳು' ಭಾರತೀಯ ಮುಸ್ಲಿಮರು ಹಿಂದುಗಳ ವಿರುದ್ಧ ಜಿಹಾದ್ ಸಾರು ವಂತೆ ಬಹಿರಂಗವಾಗಿ ಕರೆ ನೀಡುತ್ತಾ ಬಂದವರು. ಇದಕ್ಕೊಂದು ಉದಾಹರಣೆ ಉಗ್ರವಾದಿ ಮುಸ್ಲಿಂ ಬೋಧಕ ಶಾ ವಲಿಉಲ್ಲಾ. ಆತ 1766ರಲ್ಲಿ ಅಫ್ಘಾನಿಸ್ತಾನದ ಆಕ್ರಮಣಕಾರ ಅಹಮ್ಮದ್ ಷಾ ಅಬ್ದಾಲಿಗೆ ಪತ್ರ ಬರೆದು ಭಾರತದ ಮೇಲೆ ದಂಡೆತ್ತಿ ಬರುವಂತೆ ಕೋರಿದ್ದ. ಭಾರತದಲ್ಲಿನ ಮರಾಠರನ್ನು ಸೋಲಿಸಿ ಹಿಂದುಸ್ತಾನದಲ್ಲಿ ಇಸ್ಲಾಮಿಕ್ ಸಾಮ್ರಾಜ್ಯ ಸ್ಥಾಪಿಸುವಂತೆ ಆತ ತನ್ನ ಪತ್ರದಲ್ಲಿ ಬರೆದಿದ್ದ.

ದೇವಬಂದ ಮೌಲ್ವಿಗಳು ಮತ್ತೊಬ್ಬ ವ್ಯಕ್ತಿಯನ್ನು ಹೀರೋನನ್ನಾಗಿ ಬಿಂಬಿಸಿದ್ದೆಂದರೆ 1831ರ ಬಾಲಾಕೋಟ್ ಯುದ್ಧದಲ್ಲಿ ಸಿಕ್ಖರ ವಿರುದ್ಧ ಜಿಹಾದ್ ಸಾರಿ ಮೃತಪಟ್ಟ ಸೈಯದ್ ಅಹಮದಾಬಾದ್ ಬರೇಲ್ವಿಯನ್ನು. ಬರೇಲ್ವಿಯ ಸೈದ್ಧಾಂತಿಕ ಅನುಯಾಯಿಯಾದ ಷಾ ಇಸ್ಮಾಯಿಲ್ ದಹಾಲ್ವಿ ಎಂಬಾತ ಕೂಡಾ ತನ್ನ ಪುಸ್ತಕದಲ್ಲಿ ಸೂಫಿ ಪಂಥ ಮತ್ತು ಹಿಂದು ಧರ್ಮವನ್ನು ಕಟುವಾಗಿ ಟೀಕಿಸಿದ್ದಾನೆ. ಆತನನ್ನು ದೇವಬಂದಿಗಳು ಹೀರೋ ಎಂಬಂತೆ ಪರಿಗಣಿಸುತ್ತಾರೆ. ಆತ ಕೂಡಾ ಬಾಲಾಕೋಟ್ ಯುದ್ಧದಲ್ಲಿ ಸಾವಿಗೀಡಾಗಿದ್ದ. ದುರಂತವೆಂದರೆ ಭಾರತದ ಪ್ರಥಮ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಂ ಆಜಾದ್ ಕೂಡಾ ಈತನನ್ನು ಶ್ಲಾಘಿಸಿದ್ದರು. ವಿಪರ್ಯಾಸವೆಂದರೆ ಅವರು ಉದಾರವಾದಿಯಾದ ಅಕ್ಬರ್‌ನನ್ನು ಟೀಕಿಸಿದ್ದರು. ಅವರಷ್ಟೇ ಅಲ್ಲ, ದೇವಬಂದಿ-ವಹಾಬಿ ಮದ್ರಸಾಗಳಲ್ಲಿ ಕೂಡಾ ಅಕ್ಬರ್‌ನನ್ನು ದ್ವೇಷಿಸಲಾಗುತ್ತದೆ.

ಮತಾಂತರಗೊಂಡ ಮುಸ್ಲಿಮರನ್ನು ಆರ್ಯ ಸಮಾಜವು ಮರಳಿ ಮಾತೃಧರ್ಮಕ್ಕೆ ಕರೆ ತರುವ ಪ್ರಕ್ರಿಯೆಯಲ್ಲಿ ತೊಡಗಿದ್ದಾಗ ವಹಾಬಿ ಮೌಲ್ವಿಗಳು ಇದನ್ನು ತಡೆಯಲೆಂದು ಮಹಾತ್ಮಾಗಾಂಧಿ ಮತ್ತು ಕಾಂಗ್ರೆಸ್ ಜತೆ 20ರ ಶತಮಾನದ ಆರಂಭದಲ್ಲಿ ಕೈಜೋಡಿಸಿದ್ದರು. ಹಿಂದುಗಳನ್ನು ಮರಳಿ ಮಾತೃಧರ್ಮಕ್ಕೆ ಕರೆತರುವ ಕ್ರಮ ಜರುಗಿಸದಂತೆ ಕಾಂಗ್ರೆಸ್ ಮುಖಾಂತರವಾಗಿ ಆರ್ಯ ಸಮಾಜದ ಮೇಲೆ ಒತ್ತಡ ಹೇರಿದ್ದರು.

ದೇವಬಂದಿ ಮುಖಂಡರ ಒಂದು ಬಣವು ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸಿನೊಂದಿಗೆ ಕೈಜೋಡಿಸಿತ್ತು. ಅದಕ್ಕೆ ಕಾರಣ ಬ್ರಿಟಿಷರು ಮುಸ್ಲಿಮರಿಗೆ ಕೂಡಾ ಸಮಾನ ವೈರಿಯಾಗಿದ್ದುದು. ಇವರಲ್ಲಿ ಜೆಯುಎಚ್ ಸ್ಥಾಪಕ ಮೌಲಾನಾ ಹುಸೇನ್ ಅಹ್ಮದ್ ಮದನಿ ಕೂಡಾ ಸೇರಿದ್ದಾರೆ. ಈ ಮದನಿ ಔರಂಗಜೇಬನನ್ನು ಹೊಗಳಿದ್ದವರು ಹಾಗೂ ಔರಂಗಜೇಬನ ಉದಾರವಾದಿ ಸೋದರ ಧಾರ ಶುಕೋನನ್ನು ಟೀಕಿಸಿದ್ದವರು.

ಜಿನ್ನಾ ತಮ್ಮ ಇಸ್ಲಾಂ ವಿಸ್ತರಣೆಯ ಕಾರ್ಯವನ್ನು ಪಾಕಿಸ್ತಾನ ನಿರ್ಮಾಣಕ್ಕಷ್ಟೇ ಸೀಮಿತಗೊಳಿಸಿದ್ದಕ್ಕಾಗಿಯೂ ಮದನಿಯವರು ಜಿನ್ನಾರನ್ನು ಟೀಕಿಸಿದ್ದರು. ಇಡೀ ಭಾರತವನ್ನೆ ಇಸ್ಲಾಮ್‌ನ ಅಡಿ ತರಬೇಕೆಂದು ಅವರು ಬಯಸಿದ್ದರು. ಈ ರೀತಿ ಕಾಂಗ್ರೆಸ್‌ನೊಂದಿಗೆ ಸೇರಿದ್ದ ದೇವಬಂದಿ ಮುಖಂಡರು ಇಡೀ ಭಾರತವು ಇಸ್ಲಾಂ ಆಗಬೇಕೆಂದು ಬಯಸಿದ್ದರು ಹಾಗೂ ಜಿನ್ನಾನ ಪಾಕಿಸ್ತಾನ ಆಂದೋಲನವು ಈ ನಿಟ್ಟಿನಲ್ಲಿ ಒಂದು ಅಡ್ಡಿ ಎಂದು ಭಾವಿಸಿದ್ದರು.

ಸಮುದಾಯವೊಂದು ಗುಣಾತ್ಮಕ ವ್ಯಕ್ತಿಗಳನ್ನು ಆದರ್ಶ ವ್ಯಕ್ತಿಯನ್ನಾಗಿ ಸ್ವೀಕರಿಸಿದಾಗ ಅದು ರಾಷ್ಟ್ರದ ಉನ್ನತಿಗೂ ಸಹಕಾರಿಯಾಗುತ್ತದೆ.

ಪಾಲಿಕೆ ಬಜೆಟ್: ನೀರಿಗಿಂತ ನಾಯಿಗಳಿಗೇ ಹೆಚ್ಚು ವೆಚ್ಚ!


• **ಬೆಳಗಾವಿ:** ಸ್ಮಾರ್ಟ್‌ಸಿಟಿಯಲ್ಲಿ ಕಳೆದೊಂದು ದಶಕಗಳಿಂದಲೂ ಬೀದಿನಾಯಿಗಳ ಕಾಟ ವಿಪರೀತವಾಗಿದೆ. ಸಾವಿರಾರು ಸಂಖ್ಯೆಯ ನಾಯಿಗಳು ಪ್ರತಿ ವರ್ಷವೂ ಹೆಚ್ಚುತ್ತಲೇ ಇವೆ. ಪ್ರಸಕ್ತ ಬಜೆಟ್‌ನಲ್ಲಿಯೂ ಕೂಡ ನಾಯಿಗಳ ಉಪಟಳ ನಿಯಂತ್ರಣ ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ 2.10 ಕೋಟಿ ಅನುದಾನ ಮೀಸಲು ಇಡಲಾಗಿದೆ.

ಮಹಾನಗರ ಪಾಲಿಕೆಯ ಮೇಯರ್ ಮಂಗೇಶ ಪವಾರ್ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಸಭೆಯಲ್ಲಿ ಪಾಲಿಕೆಯ ತೆರಿಗೆ, ಹಣಕಾಸು, ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ರೇಷ್ಮಾ ಹೂಗಾರ ಅವರು, ನಗರದ ಅಭಿವೃದ್ಧಿಗೆ ದಿಕ್ಸೂಚಿ ತೋರಿಸುವ 2026-27ನೇ ಸಾಲಿನ ಬಜೆಟ್ ಮಂಡಿಸಿದರು. ಬುಧವಾರ ಮಹಾನಗರ ಪಾಲಿಕೆಯ ಸಭೆಯಲ್ಲಿ ಬೆಳಗಾವಿ ನಗರದಲ್ಲಿರುವ ಆಯಾ ಅಭಿವೃದ್ಧಿ ಕ್ಷೇತ್ರಗಳಿಗೆ ಬೇಕಾಗಿರುವ ಅನುದಾನವನ್ನು ಬಜೆಟ್‌ನಲ್ಲಿ ಮಂಡಿಸಲಾಯಿತು. ಆದರೆ, ಪಾಲಿಕೆಗೆ ದೊಡ್ಡ ತಲೆನೋವು ಆಗಿರುವುದೆಂದರೆ ನೀರಿಗಿಂತ ಬೀದಿನಾಯಿಗಳ ಖರ್ಚು ಅಂತಿ ಹೆಚ್ಚು ಆಗಿರುವುದರಿಂದ ಪಾಲಿಕೆಯ ತಲೆ ಬಿಸಿ ಮಾಡಿಕೊಂಡಿದೆ.

2024-25ನೇ ಸಾಲಿನ ಹಾಗೂ 2025-26ನೇ ಸಾಲಿನ ಬಜೆಟ್‌ನಲ್ಲಿಯೂ ಅಂದಾಜು ರೂ.2 ಕೋಟಿ ಮೀಸಲು ಇಡಲಾಗಿತ್ತು. ಆದರೆ, ನಾಯಿಗಳ ಸಂತಾನ ಮಾತ್ರ ಕಡಿಮೆ ಆಗಿಲ್ಲ, ಅಚ್ಚರಿಯೆಂದರೆ ಕುಡಿಯುವ ನೀರಿಗಿಂತಲೂ ನಾಯಿಗಳಿಗೆ ಹೆಚ್ಚು ಹಣ ಸುರಿಯುತ್ತಿದೆ.

ಇದರಿಂದಾಗಿ ಮಹಾನಗರ ಪಾಲಿಕೆಗೆ ನಾಯಿಗಳ ಸಂತಾನವನ್ನು ಯಾವ ರೀತಿ ಕಡಿಮೆ ಮಾಡಬೇಕೆಂದು ತಲೆ ಬಿಸಿ ಮಾಡಿಕೊಂಡಿದ್ದಾರೆ. ನಾಯಿಗಳ ಖರ್ಚು ಹೆಚ್ಚಾಗಿರುವುದರಿಂದ ಸಾರ್ವಜನಿಕ ಜೇಬಿಗೆ ಕತ್ತರಿ ಬೀಳುವ ಸಾಧ್ಯತೆ ಹೆಚ್ಚಾಗಿದೆ. ನೀರಿನ ದರ, ಆಸ್ತಿ ತೆರಿಗೆ ಸೇರಿದಂತೆ ವಿವಿಧ ತೆರಿಗೆಗಳನ್ನು ಹೆಚ್ಚಿಗೆ ಮಾಡುವ ಸಾಧ್ಯತೆಗಳಿವೆ ಎಂದು ಕೆಲ ಕಾರ್ಪೊರೇಟರ್‌ಗಳು ಅಸಮಾಧಾನ ಹೊರಹಾಕಿದ್ದಾರೆ ಎನ್ನಲಾಗಿದೆ.

ರಾಮ ಬಾಣ



ಭಾರತ-ಇಸ್ರೇಲ್ ಬಂಧ

ಪುಟ ೧➡ ಭಯೋತ್ಪಾದನೆಯು ಸಮಾಜಗಳನ್ನು ಅಸ್ಥಿರಗೊಳಿಸುವ, ಅಭಿವೃದ್ಧಿಯನ್ನು ತಡೆಯುವ ಮತ್ತು ವಿಶ್ವಾಸವನ್ನು ಕುಗ್ಗಿಸುವ ಗುರಿಯನ್ನು ಹೊಂದಿದೆ. ಭಯೋತ್ಪಾದನೆಯನ್ನು ಎದುರಿಸಲು ಸುಸ್ಥಿರ ಮತ್ತು ಸಂಘಟಿತ ಜಾಗತಿಕ ಕ್ರಮದ ಅಗತ್ಯವಿದೆ. ಏಕೆಂದರೆ ಭಯೋತ್ಪಾದನೆಯು ಎಲ್ಲೆಡೆ ಶಾಂತಿಗೆ ಅಪಾಯವನ್ನುಂಟುಮಾಡುತ್ತದೆ. ಅದಕ್ಕಾಗಿಯೇ, ಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆಗೆ ಕೊಡುಗೆ ನೀಡುವ ಎಲ್ಲಾ ಪ್ರಯತ್ನಗಳನ್ನು ಭಾರತ ಬೆಂಬಲಿಸುತ್ತದೆ ಎಂದು ಮೋದಿ ತಮ್ಮ ಭಾಷಣದಲ್ಲಿ ಹೇಳಿದರು.

ತಾನು ಜನಿಸಿದ ದಿನವೇ ಇಸ್ರೇಲ್‌ಗೆ ಔಪಚಾರಿಕ ಮಾನ್ಯತೆ: 1950ರ ಸೆಪ್ಟೆಂಬರ್ 17ರಂದು ಭಾರತವು ಇಸ್ರೇಲ್‌ಗೆ ಔಪಚಾರಿಕವಾಗಿ ಮಾನ್ಯತೆ ನೀಡಿದ ದಿನವೇ ತಾನು ಜನಿಸಿದ್ದರಿಂದ ತಾನು ಯಾವಾಗಲೂ ಇಸ್ರೇಲ್ ಕಡೆಗೆ ಆಕರ್ಷಿತನಾಗಿದ್ದೇನೆ ಎಂದು ಪ್ರಧಾನಿ ಮೋದಿ ಬುಧವಾರ ಇಸ್ರೇಲ್ ಸಂಸತ್ತಿಗೆ ತಿಳಿಸಿದರು.

ಕೇಸರಿ ಬಟ್ಟೆ ಧರಿಸಿ ಮೋದಿ ಸ್ವಾಗತಿಸಿದ ನೆತನ್ಯಾಹು ಪತ್ನಿ

ಪುಟ ೧➡ ಅದು ಕೇಸರಿ ಬಣ್ಣ ಎಂದು ಮೋದಿ ನಕ್ಕರು.

ಜೆರುಸಲೇಂ ಮೇ ಆಪ್ ಕಾ ಸ್ವಾಗತ್ ಹೇ!: ಜೆರುಸಲೇಂ ಮೇ ಆಪ್ ಕಾ ಸ್ವಾಗತ್ ಹೇ, ನೆಸೆಟ್ ಮೇ ಆಪ್ ಕಾ ಸ್ವಾಗತ್ ಹೇ (ಜೆರುಸಲೇಂಗೆ ನಿಮಗೆ ಸ್ವಾಗತ, ಸಂಸತ್ತಿಗೆ ನಿಮಗೆ ಸ್ವಾಗತ) ಎಂದು ಇಸ್ರೇಲ್ ಸಂಸತ್ತಿನ ಸ್ಪೀಕರ್ ಅಮಿರ್ ಒಹಾನ ಹಿಂದಿಯಲ್ಲೇ ಪ್ರಧಾನಿ ಮೋದಿಯವರನ್ನು ಸ್ವಾಗತಿಸಿದರು.

ಮೋದಿ ಅಪ್ಪುಗೆ ಬಹಳ ವಿಶೇಷ!: ಪ್ರಧಾನಿ ಮೋದಿ ಅವರ ಅಪ್ಪುಗೆಯಲ್ಲಿ ಏನೋ ವಿಶೇಷತೆಯಿದೆ. ಅದನ್ನು ಮೋದಿ ಅಪ್ಪುಗೆಯೆಂದು ಕರೆಯಲಾಗುತ್ತದೆ. ವಿಶ್ವದೆಲ್ಲೆಡೆ ಮೋದಿ ಅಪ್ಪುಗೆ ಪ್ರಸಿದ್ಧಿ ಪಡೆದಿದೆ. ಬಹಳ ಆತ್ಮೀಯವಾಗಿ, ನಿಷ್ಕಲ್ಮಶವಾಗಿ ಯಾರನ್ನಾದರೂ ಅಪ್ಪುವಾಗ ನಟಿಸಬೇಕಿಲ್ಲ. ಈ ನಿಜವಾದ ಅಪ್ಪುಗೆಯನ್ನು ಎಲ್ಲಾ ನೆಸೆಟ್ ಸದಸ್ಯರಿಗೆ ಹಿಂದಿರುಗಿಸಲು ಬಯಸುತ್ತೇನೆ. ಇದು ವೈಯಕ್ತಿಕ ಗೆಳೆತನವಷ್ಟೇ ಅಲ್ಲ, ನಮ್ಮ ಜನರ ನಡುವಿನ ಸ್ನೇಹ ಸಂಬಂಧವೂ ಆಗಿದೆ ಎಂದು ನೆತನ್ಯಾಹು ನುಡಿದರು. ಪ್ರಧಾನಿ ಮೋದಿಯವರ ಭೇಟಿ ಹಿನ್ನೆಲೆ ಇಸ್ರೇಲ್‌ನ ಜೆರುಸಲೇಂ ಪೋಸ್ಟ್ ಪತ್ರಿಕೆಯು ತನ್ನ ಮುಖಪುಟದಲ್ಲಿ ನಮಸ್ತೇ, ಮೋದಿ ಶೀರ್ಷಿಕೆಯೊಂದಿಗೆ ಆತ್ಮೀಯ ಸ್ವಾಗತ ಕೋರಿದೆ.

ಕಿಡಿ ನುಡಿ

■ ವಾಸುದೇವರಾವ್ ಕಕ್ಕಳೇಜಿ

ಪಕ್ಷದ ಹೈಕಮಾಂಡ್ ಸೂಚಿಸಿದರೆ ಬೀದಿ ದಾಸಯ್ಯನೂ ಸಿಎಂ ಆಗಬಹುದು
- ಜಮೀರ್ ಅಹ್ಮದ್ ಖಾನ್

- ಅಂದರೆ ಯೋಗ್ಯತೆ, ಅರ್ಹತೆಯ ಆವಶ್ಯಕತೆ ಇಲ್ಲ, ಹೈಕಮಾಂಡ್ ಕೃಪಾಕಟಾಕ್ಷವೇ ಎಲ್ಲಾ!

ದಿನ ಭವಿಷ್ಯ

ಮೇಷ
ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಪರಿಣಾಮ ಬೀರಬಹುದು. ಕೆಲಸ ವಿಳಂಬಕ್ಕೆ ಅಸಹನೆ ಬೇಡ. ತಾಳ್ಮೆಯಿಂದ ಕಾಯಿರಿ.

ವೃಷಭ
ನಿಮ್ಮ ಪ್ರಯತ್ನದಿಂದ ಉದ್ದೇಶ ಸಾಧನೆ. ಧನ ಪ್ರಾಪ್ತಿ. ಅನಿರೀಕ್ಷಿತ ಲಾಭ ಖುಷಿ ತರಲಿದೆ. ಕೌಟುಂಬಿಕ ಅಸಹಕಾರ ನಿವಾರಣೆ, ನೆಮ್ಮದಿ.

ಮಿಥುನ
ಎಲ್ಲರ ದೃಷ್ಟಿ ನಿಮ್ಮ ಮೇಲೆ. ನಿರ್ವಹಣೆಯಲ್ಲಿ ಸೋಲಬೇಡಿ. ನಿಮ್ಮ ಸೋಲನ್ನೆ ಕೆಲವರು ಬಯಸುವರು. ಆಪ್ತ ಸಂಬಂಧದಲ್ಲಿ ಒಡಕು.

ಕಟಕ
ಎಂದಿನಂತೆ ಸಹಜ ದಿನವಾಗಿ ಕಂಡರೂ ಬಳಿಕ ಕೆಲವು ಪ್ರಮುಖ ಬೆಳವಣಿಗೆ ಆಗಲಿದೆ. ಅದಕ್ಕೆ ಹೊಂದಿಕೊಳ್ಳಿ. ವಿರೋಧಿಸಿದರೆ ತೊಡಕು.

ಸಿಂಹ
ವೃತ್ತಿಯಲ್ಲಿ ಏನೋ ಅಸಹಜ ಬೆಳವಣಿಗೆ ಸಂಭವಿಸಬಹುದು. ಆ ಬಗ್ಗೆ ಎಚ್ಚರದಿಂದಿರಿ. ಆರೋಗ್ಯ ಕಾಳಜಿ ವಹಿಸಿ.

ಕನ್ಯಾ
ಬಂಧುಗಳ ಭೇಟಿ ನಿಮ್ಮ ದಿನದ ಸಂತೋಷ ಹೆಚ್ಚಿಸಲಿದೆ. ಆರ್ಥಿಕ ಬೆಳವಣಿಗೆ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಫಲಿತಾಂಶ ಕಾಣುವಿರಿ.

ತುಲಾ
ಜವಾಬ್ದಾರಿ ಹೆಚ್ಚಳ. ಇಷ್ಟವಿಲ್ಲದಿದ್ದರೂ ಮಾಡಲೇ ಬೇಕು. ಆತ್ಮೀಯರ ಜತೆ ಭಾವನೆ ಹಂಚಿಕೊಳ್ಳಿ. ಹಿರಿಯರಿಗೆ ಆರೋಗ್ಯ ಸಮಸ್ಯೆ.

ವೃಶ್ಚಿಕ
ವೃತ್ತಿಯಲ್ಲಿ ಒತ್ತಡ. ಸಹನೆಯ ವರ್ತನೆ ನಿಮ್ಮ ನೆರವಿಗೆ ಬರಲಿದೆ. ಆರ್ಥಿಕ ಲಾಭ. ಆರೋಗ್ಯ ಸಮಸ್ಯೆ ಕಾಡಬಹುದು. ಮಿತಾಹಾರ ಒಳಿತು.

ಧನು
ಒತ್ತಡ ತುಂಬಿದ ದಿನ. ಕಾಲಮಿತಿಯಲ್ಲಿ ಕೆಲಸ ಪೂರೈಸಬೇಕು. ಆಪ್ತರ ಜತೆಗಿನ ಭಿನ್ನಮತ ನಿವಾರಿಸಿಕೊಳ್ಳಿ. ದೈಹಿಕ ಆಲಸ್ಯ ಕಾಡಬಹುದು.

ಮಕರ
ನಿಮ್ಮ ಪಾಲಿಗೆ ಉತ್ತಮ ದಿನ. ಆರ್ಥಿಕ ಅಭಿವೃದ್ಧಿ. ಮಹತ್ವದ ಉದ್ದೇಶ ಸಾಧಿಸುವಿರಿ. ವಿರೋಧಿಗಳು ಮೌನ. ಆಪ್ತರಿಂದ ಸಹಕಾರ.

ಕುಂಭ
ಎಲ್ಲವೂ ಕೃತಕ, ಭಾವನೆಗೆ ಬೆಲೆಯಿಲ್ಲ ಎಂಬಂತಹ ಅನಿಸಿಕೆ ಉಂಟಾದೀತು. ವಾಸ್ತವದ ಜತೆ ಹೊಂದಿಕೊಂಡು ಬಾಳುವುದೇ ಒಳಿತು.

ಮೀನ
ಸವಾಲಿನ ದಿನ. ಏಳು-ಬೀಳು ಎರಡನ್ನೂ ಎದುರಿಸುವಿರಿ. ಆಪ್ತರ ಜತೆ ಭಾವನೆ ಹಂಚಿಕೊಂಡು ಸಮಾಧಾನ ಪಡೆಯುವಿರಿ.


ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 0,6,1,5

ರಾಜ್ಯ ಸರ್ಕಾರದಿಂದ 52 ಕೋಟಿ ರೂ. ವೆಚ್ಚ: ಪ್ರಿಯಾಂಕ್ ಖರ್ಗೆ

ನೀರಿನ ಗುಣಮಟ್ಟಕ್ಕೆ ಆದ್ಯತೆ

• **ಬೆಂಗಳೂರು:** ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ನಿರ್ವಹಣೆ ಪ್ರಯೋಗಾಲಯಗಳ ಮೂಲಕ ನೀರಿನ ಗುಣಮಟ್ಟ ಪರೀಕ್ಷೆಗಳನ್ನು ಕೈಗೊಳ್ಳಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದ್ದು, 2024-25 ನೇ ಸಾಲಿನಲ್ಲಿ 23.52 ಕೋಟಿ ರೂ. ಮತ್ತು ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೂ 28.85 ಕೋಟಿ ರೂ. ವೆಚ್ಚ ಮಾಡಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ನೀರು ಸರಬರಾಜು ಮಾಡಲು ಕಾಲ-ಕಾಲಕ್ಕೆ ಇಲಾಖೆಯಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಿರುವುದರಿಂದ ಪ್ರಸಕ್ತ ಸಾಲಿನಲ್ಲಿ ರಾಜ್ಯದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಕಲುಷಿತ ನೀರಿನಿಂದ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುವಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯಾದ್ಯಂತ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಮೂಲಗಳನ್ನು ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳ ಅನುಗುಣವಾಗಿ ಬಿಐಎಸ್ 10500-2012 ಗುಣಮಟ್ಟದಂತೆ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ, ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಮಟ್ಟದ ಪ್ರಯೋಗಾಲಯಗಳು ಮತ್ತು 47 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಪ್ರಯೋಗಾಲಯಗಳಲ್ಲಿ 2023-24ರಿಂದ ನೀರಿನ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಕಣ್ಗಾವಲು ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸಲಾಗಿದೆ.

ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಸಿಇಒಗಳಿಗೆ ಮಾಹಿತಿ ನೀಡಲಾಗಿದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

ಈ ವರ್ಷ 2.46 ಲಕ್ಷ ನೀರಿನ ಮಾದರಿ ಸಂಗ್ರಹ

ರಾಜ್ಯದಲ್ಲಿ 2023-24ರಲ್ಲಿ ಲಕ್ಷ, 2025-25ರಲ್ಲಿ 3.90 ಲಕ್ಷ ಹಾಗೂ 2025-26ರಲ್ಲಿ 2.46 ಲಕ್ಷ ನೀರಿನ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಇವುಗಳಲ್ಲಿ 9.34 ಲಕ್ಷ ಮಾದರಿಗಳಲ್ಲಿ ರಾಸಾಯನಿಕಗಳು, 7,244 ಮಾದರಿಗಳಲ್ಲಿ ಬ್ಯಾಕ್ಟೀರಿಯಾ ಪತ್ತೆಯಾಗಿದ್ದವು. ಈ ಪೈಕಿ ಕಲುಷಿತ ನೀರು ಎಂದು ಕಂಡು ಬಂದ 49,309 ನೀರಿನ ಮಾದರಿಗಳಿಗೆ ಪರ್ಯಾಯ ಕ್ರಮಗಳನ್ನು ಕೈಗೊಂಡು ನೀರು ಪೂರೈಸಲಾಗಿದೆ ಸಚಿವರು ವಿವರ ನೀಡಿದ್ದಾರೆ.

ರಾಯಚೂರು ಕೃಷಿ ವಿವಿ ಜತೆ ಒಪ್ಪಂದ

ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಬರುವ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲು ರಾಯಚೂರು ಕೃಷಿ ವಿಶ್ವವಿದ್ಯಾಲಯದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಾಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದೂ ಸಚಿವರು ತಿಳಿಸಿದ್ದಾರೆ.

ಕುಸುಮ ರೋಗಿಗಳಿಗೆ ಡಿಕೆಶಿ ಅಭಯ

ಪುಟ ೧➡ ಒಬ್ಬ ರೋಗಿಗೆ ಚುಚ್ಚುಮದ್ದು ನೀಡಲು ವರ್ಷಕ್ಕೆ 5 ಲಕ್ಷ ರೂ. ವೆಚ್ಚವಾಗಲಿದೆ. ಹಿಮೋಫಿಲಿಯಾದಂತಹ ಅಪರೂಪದ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಬದುಕಿನಲ್ಲಿ ಭರವಸೆ ಮೂಡಿಸಬೇಕು. ಪೋಷಕರು ಮತ್ತು ರೋಗಿಗಳು ಎದೆಗುಂದಬಾರದು ಎಂದರು.

ಪ್ರತಿ ವರ್ಷ 13,940 ಹೊಸ ವೈದ್ಯರು: ರಾಜ್ಯದಿಂದ ಪ್ರತಿ ವರ್ಷ 13,940 ವೈದ್ಯರು ತಯಾರಾಗುತ್ತಿದ್ದಾರೆ. 3 ಸಾವಿರ ವೈದ್ಯರು ಎಂಡಿ ಪದವಿ ಪಡೆಯುತ್ತಿದ್ದಾರೆ. 70 ಮೆಡಿಕಲ್ ಕಾಲೇಜು ಹೊಂದಿದ್ದೇವೆ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಮೆಡಿಕಲ್ ಕಾಲೇಜುಗಳಿವೆ. ಸುಮಾರು 1 ಲಕ್ಷ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಪ್ರತಿ ವರ್ಷ ಸೇವೆಗೆ ಸಜ್ಜಾಗುತ್ತಿದ್ದಾರೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ರಾಜ್ಯದಲ್ಲಿ ಒಟ್ಟು 2,621 ಹಿಮೋಫಿಲಿಯಾ ರೋಗಿಗಳಿದ್ದಾರೆ. ಇವರಿಗಾಗಿ ಸರ್ಕಾರ ಕುಸುಮ ಸಂಜೀವಿನಿ ಯೋಜನೆಯ ಮೂಲಕ ಚಿಕಿತ್ಸೆ ನೆರವು ನೀಡಲು ಸಜ್ಜಾಗಿದ್ದು, ಈ ಯೋಜನೆಗೆ 42.55 ಕೋಟಿ ರೂ. ಅನುದಾನ ಮಂಜೂರು ಮಾಡಿದೆ. ಈ ಪೈಕಿ ಔಷಧ ಕ್ಕಾಗಿ 17 ಕೋಟಿ ರೂ. ಮೀಸಲಿಟ್ಟಿದ್ದು, ಕಡಿಮೆಯಾದಲ್ಲಿ ಇನ್ನೂ 50 ಕೋಟಿ ರೂ. ಮೀಸಲಿಡಲು ಸರ್ಕಾರ ಸಿದ್ಧವಿದೆ ಎಂದರು.

ಹಿಮೋಫಿಲಿಯಾ ಎ ರೋಗಿಗಳಿಗೆ ವಾರ್ಷಿಕವಾಗಿ ಸುಮಾರು 5 ಲಕ್ಷ ರೂ. ವೆಚ್ಚವಾಗುವ ಸಬ್ಕ್ಯುಟೇನಿಯಸ್ ಚುಚ್ಚುಮದ್ದನ್ನು ರಾಜ್ಯ ಸರ್ಕಾರ ಉಚಿತವಾಗಿ ಒದಗಿಸುತ್ತಿದೆ. ಈ ಮೊದಲು ಪದೇಪದೆ ರಕ್ತನಾಳದ ಮೂಲಕ ನೋವಿನ ಚುಚ್ಚುಮದ್ದನ್ನು ಪಡೆಯಬೇಕಾಗಿದ್ದ ರೋಗಿಗಳಿಗೆ ಈಗ ತಿಂಗಳಿಗೊಮ್ಮೆ ಚರ್ಮದ ಅಡಿಯಲ್ಲಿ ಸುಲಭವಾಗಿ ಪಡೆಯಬಹುದಾದ ಚಿಕಿತ್ಸೆ ಲಭ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ, ಹಿಮೋಫಿಲಿಯಾ ರೋಗಿಗಳಿಗಾಗಿ ತಮ್ಮ ವೃತ್ತಿ ಜೀವನ ಮುಡಿಪಾಗಿಟ್ಟು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಸುರೇಶ್ ಹನಗವಾಡಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರೋಶ್ ಫಾರ್ಮಾ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜ್‌ವಿಂದರ್ (ರಾಜ್) ಮೆಹ್ವಾನ್, ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಇದ್ದರು.

> ರೋಗನಿರೋಧಕ ಚಿಕಿತ್ಸೆಗೆ ಆದ್ಯತೆ ನೀಡಿರುವುದು ರೋಗಿಗಳ ಜೀವನದಲ್ಲಿ ಪರಿವರ್ತನಾತ್ಮಕ ಹೆಜ್ಜೆಯಾಗಿದೆ. ಸಮಾಜ ಹಾಗೂ ಸರ್ಕಾರ ಹಿಮೋಫಿಲಿಯಾಪೀಡಿತರ ಬೆಳವಣಿಗೆ ಹಾಗೂ ಆರೋಗ್ಯಕ್ಕೆ ಪೂರಕ ವಾತಾವರಣ ಕಲ್ಪಿಸಬೇಕು.
> ■ ಡಾ. ಸುರೇಶ್ ಹನಗವಾಡಿ, ವೈದ್ಯ

ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

ಪುಟ ೧➡ **ಅತ್ಯಾಚಾರವೆಸಗಲು ಪ್ರಿಯತಮೆಯಿಂದಲೇ ವೇದಿಕೆ!:** ಹಿಂದು ಯುವತಿಯರಿಗೆ ಮನೆಗೆಲಸದ ನೌಕರಿ ನೀಡುವುದಾಗಿ ನಂಬಿಸಿ ಮನೆಗೆ ಕರೆದೊಯ್ದು, ಮಾದಕವಸ್ತು ನೀಡಿ ತನ್ನ ಪ್ರಿಯಕರನಿಂದಲೇ ಅಮ್ರೀನ್ ಅತ್ಯಾಚಾರ ಮಾಡಿಸುತ್ತಿದ್ದಳು. ಮನೆಯಲ್ಲಿ ಪಾರ್ಟಿ ಇತ್ಯಾದಿ ವೇಳೆ ಬಲವಂತದಿಂದ ಅಮಲು ಪದಾರ್ಥ ನೀಡಿ ಅಶ್ಲೀಲ ನೃತ್ಯ ಮಾಡಿಸುತ್ತಿದ್ದರು. ತನ್ನ ಪ್ರಿಯಕರನಿಂದ ಅಥವಾ ಸಹಚರರಿಂದ ಅತ್ಯಾಚಾರ ನಡೆಸುತ್ತಿದ್ದ ಅಮ್ರೀನ್, ವಿಡಿಯೋ ಚಿತ್ರೀಕರಿಸಿ ಇಸ್ಲಾಂಗೆ ಮತಾಂತರ ಆಗುವಂತೆ ಹಿಂದು ಯುವತಿಯರನ್ನು ಬೆದರಿಸುತ್ತಿದ್ದಳು ಎಂದು ಸಂತ್ರಸ್ತ ಯುವತಿ ದೂರಿನಲ್ಲಿ ತಿಳಿಸಿದ್ದಾಳೆ.

ಸಂತ್ರಸ್ತೆ ದೂರು, ಎಫ್‌ಐಆರ್: ವಾರದ ಹಿಂದೆ ಛತ್ತೀಸಗಢದಲ್ಲಿ 21 ವರ್ಷದ ಸೌಂದರ್ಯತಜ್ಞೆ ಮತ್ತು 32 ವರ್ಷದ ಭೋಪಾಲ್ ನಿವಾಸಿ ಮಹಿಳೆಯರ ವಿರುದ್ಧ ಪೊಲೀಸರು ತನಿಖೆ ಆರಂಭಿಸಿದಾಗ ಬಲವಂತದ ಮತಾಂತರ ಜಾಲ ಬೆಳಕಿಗೆ ಬಂದಿದೆ. ಇಬ್ಬರೂ ಸಹೋದರಿಯರು ಬಲವಂತದ ಮತಾಂತರ ಜಾಲ ನಡೆಸುತ್ತಿದ್ದರೆಂಬ ವಿಷಯ ಬಯಲಾಗಿದೆ. ಇವರಿಬ್ಬರ ವಿರುದ್ಧ ಸಂತ್ರಸ್ತೆಯೊಬ್ಬರು ದೂರು ನೀಡಲು ಧೈರ್ಯ ತೋರಿಸಿದ್ದರಿಂದ ದೊಡ್ಡ ಜಾಲವೊಂದು ಪತ್ತೆಯಾಗಿದೆ. ಸಂತ್ರಸ್ತೆ ಯುವತಿಯ ದೂರಿನ ಆಧಾರದಲ್ಲಿ ಭೋಪಾಲ್ ಪೊಲೀಸರು, ಮುಸ್ಲಿಂ ಸಹೋದರಿಯರು, 6 ಮಂದಿಯ ವಿರುದ್ಧ ಮಧ್ಯಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ ಅನ್ವಯ ಧಾರ್ಮಿಕ ಮತಾಂತರ, ಅತ್ಯಾಚಾರ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸಾಮೂಹಿಕ ಅತ್ಯಾಚಾರ: ಪ್ರಕರಣದಲ್ಲಿ ಹಲವು ಆರೋಪಿಗಳಿದ್ದರೂ, ಅಮ್ರೀನ್ ಪ್ರಿಯಕರ ಚಂದನ್ ಮತ್ತು ಪ್ರಮುಖ ಸಹಚರರಾದ ಬಿಲಾಲ್ ಮತ್ತು ಯಾಸಿರ್ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಭೋಪಾಲ್ ನಿವಾಸಿ 21ರ ಹರೆಯದ ಸಂತ್ರಸ್ತೆ, ತನ್ನ ಮೇಲೆ ಅಮ್ರೀನ್ ಸಹಚರ ಯಾಸಿರ್ ಅತ್ಯಾಚಾರ ನಡೆಸಿದ್ದಾನೆ. ತನ್ನನ್ನು ಚಂದನ್ ಮನೆಗೆ ಕರೆದೊಯ್ದು ಅಮ್ರೀನ್ ಅತ್ಯಾಚಾರ ನಡೆಸಲು ಅವಕಾಶ ಮಾಡಿಕೊಟ್ಟಿದ್ದಳು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕೈಗೆ ಹುದ್ದೆ ಭರ್ತಿ ಮನಸಿಲ್ಲ: ಬಿವೈವಿ

ಪುಟ ೧➡ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತರಾದವರ ಹುದ್ದೆಗಳಿಗೆ ನೇಮಕಾತಿಗೆ ಸರ್ಕಾರದ ಅನುಮತಿ ಕೇಳಿದ್ದಾರೆ. ಸರ್ಕಾರ ಅನುಮತಿ ನೀಡಿದೆ; ಒಂದು ವರ್ಷ ಎಂಟು ತಿಂಗಳಾದರೂ ಸರ್ಕಾರ ಒಂದು ಹೆಜ್ಜೆಯನ್ನೂ ಮುಂದಿಟ್ಟಿಲ್ಲ. ಪ್ರಕ್ರಿಯೆ ಮುಂದುವರೆಸಲು ಸಹಕಾರ ಕೊಡುತ್ತಿಲ್ಲ ಎಂದು ಟೀಕಿಸಿದರು. ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ವಿಧಾನಪರಿಷತ್ ಸದಸ್ಯ ಎಸ್.ವಿ. ಸಂಕನೂರು, ಮಾಜಿ ಸಂಸದ ಎಸ್.ಮುನಿಸ್ವಾಮಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಸುದ್ದಿಗೋಷ್ಠಿಯಲ್ಲಿದ್ದರು.



> ಕಾಂಗ್ರೆಸ್ ಸರ್ಕಾರ ಹಗರಣರಹಿತವಾಗಿ ಖಾಲಿ ಹುದ್ದೆಗಳನ್ನು ತುಂಬಬೇಕು ಎಂದು ಕೆಲಸ ಮಾಡುತ್ತಿದೆ. ಯುವಕರೇ ಧೈರ್ಯವಾಗಿರಿ. ನಾವು ನಿಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತೇವೆ. ಸದ್ಯದಲ್ಲೇ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಶೀಘ್ರದಲ್ಲೇ ನಿಮಗೆ ಸಂದೇಶ ನೀಡುತ್ತೇವೆ.
> ■ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಎಂಎಲ್‌ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ

ಪುಟ ೧➡ ವಿಧಾನ ಪರಿಷತ್‌ನಿಂದ ಭೋಸರಾಜು ಅವರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದ್ದು, ಸಂಪುಟ ಪುನರ್ ರಚನೆಯಲ್ಲಿ ಅವರನ್ನು ಉಳಿಸಿಕೊಂಡರೆ ಬೇರೆಯವರಿಗೆ ಅವಕಾಶ ಸಿಗುವುದು ಕಷ್ಟವಾಗಲಿದೆ. ಅಲ್ಲದೆ ಬಿ.ಕೆ. ಹರಿಪ್ರಸಾದ್ ಅವರು ಸಂಪುಟಕ್ಕೆ ಬರುವ ಸಾಧ್ಯತೆ ಇರುವುದರಿಂದ ಪರಿಷತ್ ಇತರ ಸದಸ್ಯರಿಗೆ ಅವಕಾಶ ಸಿಗುವುದು ಸಂದೇಹವಾಗಿದೆ. ವಿಧಾನಸಭೆಯಿಂದ ಆಯ್ಕೆಯಾದ ಶಾಸಕರಲ್ಲೇ ಸಚಿವ ಸ್ಥಾನಕ್ಕೆ ಭಾರೀ ಪೈಪೋಟಿ ನಡೆಯುತ್ತಿರುವಾಗ ಹೈಕಮಾಂಡ್ ಪರಿಷತ್ ಸದಸ್ಯರಿಗೆ ಮಣೆ ಹಾಕುವುದು ಕಷ್ಟವಾಗಲಿದೆ.

ಸಿಂದೂರದ ತೀವ್ರತೆ ಒಪ್ಪಿಕೊಂಡ ಟ್ರಂಪ್

ಪುಟ ೧➡ ಪಾಕ್ ಪ್ರಧಾನಿ ಷರೀಫ್ ಮೃತಪಡುವಷ್ಟು ತೀವ್ರತೆಯ ದಾಳಿಯನ್ನು ಅಥವಾ ಆಪರೇಷನ್ ಸಿಂದೂರ ಭಾರತ ನಡೆಸಿತೆಂಬ ವಿಷಯವನ್ನು ಟ್ರಂಪ್ ಒಪ್ಪಿಕೊಂಡಿದ್ದಾರೆ.

ದೇಗುಲದ ಗಂಟೆ, ಜಾಗಟೆ ಸದ್ದಿಗೆ ಮುಸ್ಲಿಮನ ತಂಟೆ!

ಪುಟ ೧➡ ಇದರಿಂದ ತೊಂದರೆಯಾಗುತ್ತಿದೆ ಎಂದು ಆಕ್ಷೇಪಿಸಿದ್ದಾರೆ. ಅಕ್ಕಪಕ್ಕದ ನಿವಾಸಿಗಳಿಗೆ ಶಬ್ದದಿಂದ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಅರ್ಚಕರಿಗೆ ಸೂಚನೆ ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಸ್ ನಿರ್ವಾಹಕನ ಮೇಲೆ ಮುಸ್ಲಿಮರಿಂದ ತೀವ್ರ ಹಲ್ಲೆ

ಪುಟ ೧➡ ಬಸ್ ಸಹಿತ ನಿರ್ವಾಹಕ ಕೊಳ್ಳೇಗಾಲಕ್ಕೆ ವಾಪಸ್ ಬಂದು ಪೊಲೀಸ್ ಠಾಣೆಗೆ ದೂರು ನೀಡಿ, ಆಸ್ಪತ್ರೆಗೆ ದಾಖಲಾಗಿದ್ದು, ಇಬ್ಬರು ಪ್ರಯಾಣಿಕರಾದ ಫಯಾಜ್ ಮತ್ತು ಮಹಮದ್ ಶಾರನ್ ನಮ್ಮ ಮೇಲೆ ಹಲ್ಲೆ ಮಾಡಿ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ದೂರು ನೀಡಿದ್ದಾರೆ. ಇದುವರೆಗೆ ಇವರ ವಿರುದ್ಧ ಪ್ರಕರಣ ದಾಖಲಾಗಿಲ್ಲ ಎಂಬ ಮಾಹಿತಿ ಇದೆ. ಈ ಇಬ್ಬರು ಪ್ರಯಾಣಿಕರು ಕಡ್ಲೆಕಾಯಿ ತಿಂದು ಸಿಪ್ಪೆಯನ್ನು ಬಸ್‌ನ ಒಳಗಡೆಯೇ ಇಡುತ್ತಿದ್ದರು ಎನ್ನಲಾಗಿದೆ. ಇದನ್ನು ನೋಡಿದ ನಿರ್ವಾಹಕ ಮುನಿಮಾದಯ್ಯ ಸಿಪ್ಪೆ ಹೊರಗಡೆ ಹಾಕಿ ಎಂದು ಹೇಳಿದ್ದಕ್ಕೆ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನಿರ್ವಾಹಕನ ಮೇಲೆ ಹಲ್ಲೆ ನಡೆಸಿರುವ ಫೋಟೋಗಳು, ಪ್ರಯಾಣಿಕರು ನಿರ್ವಾಹಕನ ಕುತ್ತಿಗೆಗೆ ಕೈಹಾಕಿರುವುದು, ತಳ್ಳಾಟ, ನೂಕಾಟಗಳ ಕುರಿತು ವೈರಲ್ ಆಗಿದೆ.

ಘಟನೆ ವಿವರ: ಕೊಳ್ಳೇಗಾಲದಿಂದ ಕನಕಪುರ ಮಾರ್ಗವಾಗಿ ಬೆಂಗಳೂರು ಕಡೆಗೆ ಹೋಗುತ್ತಿರುವಾಗ ಇಲ್ಲಿನ ಹೊರವಲಯದ ಪಾಪನಕೆರೆ ಬಳಿ ಬಸ್ಸಿನಲ್ಲಿ ಕಡಲೆಕಾಯಿ ತಿಂದು ಸಿಪ್ಪೆಯನ್ನು ಬಸ್ಸಿನಲ್ಲಿ ಹಾಕುತ್ತಿದ್ದ ವೇಳೆ ಸಿಪ್ಪೆಯನ್ನು ಹೊರಗೆ ಹಾಕುವಂತೆ ಹೇಳಿದ್ದಕ್ಕೆ ಕಂಡಕ್ಟರ್ ಹಾಗೂ ಪ್ರಯಾಣಿಕರು ತಂದೆ ಮಗ ನಡುವೆ ಗಲಾಟೆ ಉಂಟಾಗಿದೆ. ಇದರಲ್ಲಿ ಕಂಡಕ್ಟರ್ ತಲೆಗೆ ಪೆಟ್ಟಾಗಿದೆ. ಫಯಾಜ್, ಅಹಮ್ಮದ್ ಹಾಗೂ ಮಹಮ್ಮದ್ ಶಾರನ್ ಸಹ ನಿರ್ವಾಹಕರು ಹಲ್ಲೆ ನಡೆಸಿದ್ದಾರೆಂದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೊಬೈಲ್ ವಿಚಾರ: ಹಿಂದು ಯುವಕನಿಗೆ ಇರಿತ

ಪುಟ ೧➡ ಇದಕ್ಕೆ ಹೆಚ್ಚುವರಿ 100 ರೂ. ನೀಡುವಂತೆ ವಿಕ್ರಮ್ ಚೌಧರಿ ಕೇಳಿದ್ದರು. ಇದರಿಂದ ಸಿಟ್ಟಿಗೆದ್ದ ಆರೋಪಿ ವಿಕ್ರಮ್ ಚೌಧರಿ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಇರಿದಿದ್ದಾನೆ ಎಂದು ತಿಳಿದುಬಂದಿದೆ. ಗಾಯಾಳುವನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಗಾಯಾಳು ವಿಕ್ರಮ್ ಚೌಧರಿ ಆರೋಗ್ಯ ವಿಚಾರಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿ ಟಿವಿ ದೃಶ್ಯಾವಳಿ ಪರಿಶೀಲಿಸಿ ಶೀಘ್ರದಲ್ಲಿ ಆರೋಪಿಯನ್ನು ಬಂಧಿಸಲಾಗುವುದು. ಮಾದಕದ್ರವ್ಯ ಸೇವಿಸಿ ದಾಳಿ ನಡೆಸಿರುವ ಶಂಕೆ ವ್ಯಕ್ತವಾಗಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ತನಿಖೆಯ ನಂತರ ಸತ್ಯಾಂಶ ತಿಳಿಯಲಿದೆ ಎಂದು ಹೇಳಿದ್ದಾರೆ. ಘಟನೆಗೆ ಹಿಂದೂಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ವಿಷಯ ತಿಳಿಯುತ್ತಿದ್ದಂತೆ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಜಿಲ್ಲಾಸ್ಪತ್ರೆಯ ಮುಂದೆ ಜಮಾಯಿಸಿದ್ದರು.

ಜಿಲ್ಲಾಸ್ಪತ್ರೆಯ ಮುಂದೆ ಕೆಲ ಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಘಟನೆಯನ್ನು ಖಂಡಿಸಿ ರಸ್ತೆತಡೆ ನಡೆಸಿದರು. ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ಹೊರ ಹಾಕಿದರು. ಕೂಡಲೇ ಹಲ್ಲೆ ಆರೋಪಿಯನ್ನು ಬಂಧಿಸಬೇಕು. ತಪ್ಪಿದಲ್ಲಿ ಚಿತ್ರದುರ್ಗ ಬಂದ್ ಕರೆ ನೀಡುವುದಾಗಿ ಎಚ್ಚರಿಸಿದ್ದಾರೆ. ಪ್ರತಿಭಟನೆಯಲ್ಲಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರಾದ ಕೇಶವ್, ರುದ್ರೇಶ್, ದೀಪಕ್‌ರಾಜ್, ಶ್ರೀನಾಥ್, ಮುರಳೀಧರ್, ಬಿಜೆಪಿ ಯುವ ಮುಖಂಡ ಅನಿತ್ ಕುಮಾರ್, ಬಿಜೆಪಿ ಮಂಡಲ ಅಧ್ಯಕ್ಷ ನಾಗರಾಜ್ ಹಾಗೂ ಶ್ರೀರಾಮಸೇನೆ ಮುಖ್ಯಸ್ಥ ಸುರೇಶ್‌ಬಾಬು ಭಾಗವಹಿಸಿದ್ದರು.

ಹಲ್ಲೆ ಆರೋಪಿ ಸೆರೆ: ನಗರದ ಸಂತೇಹೊಂಡದ ಬಳಿಯ ಚೌಧರಿ ಮೊಬೈಲ್ ಶಾಪ್ ಮಾಲೀಕ ವಿಕ್ರಮ್ ಚೌಧರಿ ಅವರ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಇರಿದು ಗಾಯಗೊಳಿಸಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿ-ಮುಂಬೈ ನಡುವೆ ವಿಮಾನ ಹಾರಾಟ ಪುನರಾರಂಭ

• **ಬೆಳಗಾವಿ:** ಬೆಳಗಾವಿ-ಮುಂಬೈ ನಡುವೆ ಇಂಡಿಗೋ ಸಂಸ್ಥೆಯು ನೂತನ ವಿಮಾನಯಾನ ಸೇವೆಯನ್ನು ಪ್ರಾರಂಭ ಮಾಡಲಿದೆ ಎಂದು ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ ಶೆಟ್ಟರ ತಿಳಿಸಿದ್ದಾರೆ. ಕೆಲವು ತಿಂಗಳ ಹಿಂದೆಯಷ್ಟೆ ಸ್ಟಾರ್ ಏರ್ ಸಂಸ್ಥೆಯು ಬೆಳಗಾವಿ-ಮುಂಬೈ ನಡುವೆ ವಿಮಾನಯಾನ ಸೇವೆಯನ್ನು ರದ್ದುಗೊಳಿಸಿತ್ತು. ಇದರಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸಂಸದರು ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರನ್ನು ಬಜೆಟ್ ಅಧಿವೇಶನ ನಡೆದ ಸಮಯದಲ್ಲಿ ಭೇಟಿ ಮಾಡಿ ವಿನಂತಿಸಿದ್ದು ಇಲ್ಲಿ ಸ್ಮರಣೀಯ. ಅದಲ್ಲದೆ, ಇಂಡಿಗೋ ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಸಹ ನವದೆಹಲಿಯಲ್ಲಿ ಸಭೆ ನಡೆಸಿ, ಬೆಳಗಾವಿಯಿಂದ ಮುಂಬೈ, ಚೆನ್ನೈ ಹಾಗೂ ಪುಣೆ ಮಾರ್ಗದಲ್ಲಿ ವಿಮಾನಯಾನ ಸೇವೆಯನ್ನು ಒದಗಿಸಲು ಕೋರಿದ್ದರು.



ಇದಕ್ಕನುಗುಣವಾಗಿ 29ನೇ ಮಾರ್ಚ್ 2026ರಿಂದ ಬೆಳಗಾವಿ-ನವಿಮುಂಬೈ ನಡುವೆ ಇಂಡಿಗೋ ವಿಮಾನ ಹಾರಾಟವನ್ನು ಪ್ರಾರಂಭಿಸಲಿದೆ. ಇದು ನವಿ ಮುಂಬೈಯನ್ನು ಬೆಳಗ್ಗೆ 10:20ಕ್ಕೆ ಬಿಟ್ಟು ಬೆಳಗಾವಿಯನ್ನು 11:35ಕ್ಕೆ ತಲುಪಿ, ನಂತರ ಬೆಳಗಾವಿಯನ್ನು ಸಂಜೆ 17:35ಕ್ಕೆ ಬಿಟ್ಟು ನವಿಮುಂಬೈಯನ್ನು 18.45ಕ್ಕೆ ತಲುಪುವುದು. ವಿಮಾನಯಾನ ಸೇವೆ ಪ್ರಾರಂಭಕ್ಕೆ ಸಹಕರಿಸಿದ ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರಿಗೆ ಮತ್ತು ಇಂಡಿಗೋ ಸಂಸ್ಥೆಯ ಅಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸುವುದಾಗಿ ಹೇಳಿದ್ದಾರೆ.

ಕಾಡಂಚಿನಲ್ಲಿ ಬೃಹತ್ ಬ್ಯಾರಿಕೇಡ್ ಅಳವಡಿಕೆ

ಪುಟ ೧➡ ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಕಾಡಿನ ಅಂಚಿನಲ್ಲಿ ದೊಡ್ಡ ಪ್ರಮಾಣದಲ್ಲಿ ಬ್ಯಾರಿಕೇಡ್ ಅಳವಡಿಸುವ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕಾರ್ಕಳದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಗಾಂಜಾ ಮತ್ತು ಡ್ರಗ್ಸ್ ಹಾವಳಿ ಹೆಚ್ಚುತ್ತಿರುವ ಕುರಿತು ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಘಟನೆಗಳನ್ನು ಉಲ್ಲೇಖಿಸಿದರು. ಡ್ರಗ್ಸ್ ಸಮಸ್ಯೆಯನ್ನು ಸಂಪೂರ್ಣ ಶೂನ್ಯ ಮಟ್ಟಕ್ಕೆ ತರುವುದು ಸರ್ಕಾರದ ಗುರಿಯಾಗಿದೆ. ಕರ್ನಾಟಕವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ಉಡುಪಿಯ ವಿಶ್ವವಿದ್ಯಾಲಯವೊಂದರಲ್ಲಿ ಎಬಿವಿಪಿ ಕಾರ್ಯಕರ್ತರಿಂದ ನಡೆದ ದಾಳಿ ಪ್ರಕರಣದ ಕುರಿತು ಮಾತನಾಡಿದ ಸಿಎಂ, ಕಾನೂನನ್ನು ಯಾರೂ ಕೈಗೆ ತೆಗೆದುಕೊಳ್ಳಲು ಅವಕಾಶ ನೀಡುವುದಿಲ್ಲ ಎಂದರು. ಎಬಿವಿಪಿ ಅಥವಾ ಬೇರೆ ಯಾವುದೇ ಸಂಘಟನೆಗಳಾದರೂ ಕಾನೂನು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ವಿನಾಕಾರಣ ಗಲಾಟೆ ಸೃಷ್ಟಿಸುವವರನ್ನು ಸಹಿಸಲಾಗುವುದಿಲ್ಲ ಎಂದರು.

ಸುರಂಗ ಮಾರ್ಗ: ಆಗುಂಬೆ ಸುರಂಗ ಮಾರ್ಗ ಯೋಜನೆ ಕುರಿತು ಮಾತನಾಡಿದ ಸಿಎಂ, ಈ ಯೋಜನೆಯನ್ನು ಸರ್ಕಾರ ಜಾರಿಗೆ ತರುವುದಾಗಿ ತಿಳಿಸಿದರು. ಪರಿಸರವಾದಿಗಳ ಆತಂಕಗಳನ್ನು ಮನವರಿಕೆ ಮಾಡಿಕೊಂಡು ಅವರೊಂದಿಗೆ ಸಂವಾದ ನಡೆಸಲಾಗುವುದು. ಅವರ ವಿರೋಧದ ಕಾರಣಗಳನ್ನು ತಿಳಿದು ಸಮನ್ವಯದಿಂದ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿದರು. ಪರಶುರಾಮ ಥೀಮ್ ಪಾರ್ಕ್ ವಿವಾದಕ್ಕೆ ಸಂಬಂಧಿಸಿ, ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪ್ರಥಮ ಬಾರಿ ಶಾಸಕರಾದವರು ಮಂತ್ರಿಯಾಗಬೇಕು ಎನ್ನುವ ಆಸೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆಸೆ ವ್ಯಕ್ತಪಡಿಸುವುದು ತಪ್ಪಲ್ಲ, ಆದರೆ ಮೊದಲ ಬಾರಿ ಶಾಸಕರಿಗೆ ಮಂತ್ರಿ ಸ್ಥಾನ ನೀಡಬಾರದು ಎಂಬ ನಿರ್ಣಯ ಕೈಗೊಂಡಿದ್ದೇವೆ. ಹೈಕಮಾಂಡ್ ಸೂಚನೆಗಳನ್ನು ಪಾಲಿಸಲಾಗುವುದು ಎಂದು ತಿಳಿಸಿದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದ ಸಿಎಂ, ಯಾವುದೇ ಆಸ್ಪತ್ರೆಯಲ್ಲಿ ಸಮಸ್ಯೆ ಇಲ್ಲ ಎಂದರು. ಕಾರ್ಕಳ ನರ್ಸಿಂಗ್ ಕಾಲೇಜು ಅವಸ್ಥೆಯ ಬಗ್ಗೆ ಕೇಳಿದ ಪ್ರಶ್ನೆಗೆ ವಿದ್ಯಾರ್ಥಿಗಳ ಅಹವಾಲನ್ನು ಸ್ವೀಕರಿಸಿ, ಬಗೆಹರಿಸುವ ಬಗ್ಗೆ ಭರವಸೆ ನೀಡಿದರು.

ಗ್ಯಾರಂಟಿ ಭಾರವಾಗಿಲ್ಲ

ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಭಾರವಾಗಿವೆ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ವರ್ಷಕ್ಕೆ ಸುಮಾರು 52 ಸಾವಿರ ಕೋಟಿಗೂ ಹೆಚ್ಚು ಹಣ ಬೇಕಾಗುತ್ತದೆ. ಅದನ್ನು ಭಾರವೆಂದು ಹೇಳಬಹುದು. ಆದರೆ ಸರ್ಕಾರ ಅಭಿವೃದ್ಧಿ ಹಾಗೂ ಗ್ಯಾರಂಟಿ ಯೋಜನೆ ಎರಡನ್ನೂ ಸಮಾನವಾಗಿ ಮುಂದುವರಿಸುತ್ತಿದೆ ಎಂದು ಸ್ಪಷ್ಟಪಡಿಸಿದರು.

ಹುದ್ದೆ ಭರ್ತಿ ಶೀಘ್ರ

ಪುಟ ೧➡ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬರುವ ಮುನ್ನ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು. ಆದರೆ, ಹನ್ನೊಂದು ವರ್ಷವಾದರೂ ಭರವಸೆ ಈಡೇರಿಲ್ಲ, ಈ ಹಿಂದೆ ಯುವಕರು ಉದ್ಯೋಗ ವಿಚಾರವಾಗಿ ಕೇಳಿದಾಗ 'ಸರಕಾರಿ ಉದ್ಯೋಗಕ್ಕಾಗಿ ಕಾಯಬೇಡಿ, ಸ್ವಂತ ಉದ್ಯೋಗ ಮಾಡಿ, ಪಕೋಡ ಮಾರಿರಿ' ಎಂದು ಹೇಳಿದ ಮಾತನ್ನೂ ನೆನಪಿಸಿ, ಕೇಂದ್ರ ಸರ್ಕಾರದ ವಿರುದ್ಧವೂ ತೀಕ್ಷ್ಣವಾಗಿ ಟೀಕಿಸಿದರು. ಒಂದು ದೊಡ್ಡ ಪ್ರಮಾಣದ ಉದ್ಯೋಗ ಭರ್ತಿ ಮಾಡದ ಬಿಜೆಪಿ, ನಮ್ಮನ್ನು ಪ್ರಶ್ನಿಸುವ ನೈತಿಕತೆ ಏನು ಎಂದು ತರಾಟೆಗೆ ತೆಗೆದುಕೊಂಡರು. ಒಳ ಮೀಸಲಾತಿಯಲ್ಲಿ ಅನ್ಯಾಯವಾಗಿದೆ ಎಂದು ಕೆಲವರು ಪ್ರತಿಭಟನೆ ನಡೆಸುತ್ತಿರುವುದಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಸಮಸ್ಯೆಗೆ ಸ್ಪಂದಿಸುವುದೇ ಶಿಕ್ಷಣದ ಉದ್ದೇಶ: ಸಿಎಂ

• **ಕಾರ್ಕಳ:** ವೈಚಾರಿಕ ಮತ್ತು ವೈಜ್ಞಾನಿಕತೆಯ ಶಿಕ್ಷಣ ಇಂದಿನ ಅಗತ್ಯವಾಗಿದ್ದು, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವುದೇ ಅದರ ಮೂಲ ಉದ್ದೇಶವಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅವರು ಬುಧವಾರ ಇಲ್ಲಿ ಕಿಸಾನ್ ಸಭಾ ಸಭಾಂಗಣದ ಉದ್ಘಾಟಿಸಿ, ಟ್ರಸ್ಟ್‌ನ ಮಹಾತ್ಮ ಗಾಂಧಿ ಪ್ರೌಢಶಾಲೆಯ 35 ನೇ ವರ್ಷದ ಸಮಾರಂಭವನ್ನು ಉದ್ಘಾಟಿಸಿದ ನಂತರ ಮಾತನಾಡಿದರು. ಸಮಾನ ಅವಕಾಶಗಳನ್ನು ಕೊಡುವುದು ಶಿಕ್ಷಣ ಮೂಲ ಉದ್ದೇಶವಾಗಬೇಕು. ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಸಿಗದೆ, ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ತಿಳಿಸಿದ್ದರು ಎಂದರು.

ನಮ್ಮ ಸರ್ಕಾರ ನುಡಿದಂತೆ ನಡೆಯುತ್ತದೆ. ಕಾರ್ಕಾಳ ಜನತೆಯ ಬೇಡಿಕೆಗಳನ್ನು ಹಂತ ಹಂತವಾಗಿ ಪೂರೈಸಲಾಗುವುದು. 2013ರಲ್ಲಿ ಮೊದಲ ಬಾರಿಗೆ ಸಿಎಂಯಾಗಿದ್ದಾಗ ನೀಡಲಾಗಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. 2023ರಲ್ಲಿ ಪುನ: ಅಧಿಕಾರಕ್ಕೆ ಬಂದು, 590 ಭರವಸೆಗಳನ್ನು ಕಳೆದ ಎರಡೂವರೆ ವರ್ಷದಲ್ಲಿ 243 ಭರವಸೆಗಳನ್ನು ಈಡೇರಿಸಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 52000 ಕೋ.ರೂ.ಗಳಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದ್ದು, ಎಲ್ಲ ಜಾತಿಧರ್ಮಗಳ ಬಡವರಿಗೆ ಗ್ಯಾರಂಟಿಯ ಸವಲತ್ತುಗಳನ್ನು ನೀಡಲಾಗುತ್ತಿದೆ. ಎಲ್ಲ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ, ಇದುವರೆಗೆ 1.20 ಲ.ಕೋ.ರೂ.ಗಳನ್ನು ಗ್ಯಾರಂಟಿಗಳಿಗೆ ನೀಡಲಾಗಿದೆ ಎಂದರು.

ಕಿರುಸುದ್ದಿ

ದಲಿತ ದಂಪತಿ ದೇಗುಲ ಪ್ರವೇಶಕ್ಕೆ ನಿರ್ಬಂಧ: ಶಾಂತಿ ಸಭೆ ಬಳಿಕ ಸುಖಾಂತ್ಯ

• **ತುಮಕೂರು:** ದೇವಾಲಯಕ್ಕೆ ಪ್ರವೇಶ ನಿರ್ಬಂಧಿಸಿ ದಲಿತ ನವದಂಪತಿ ವಿರುದ್ಧ ಜಾತಿ ನಿಂದನೆ ಮಾಡಲಾಗಿದೆ ಎಂಬ ಪ್ರಕರಣ ಸಂಬಂಧ ತುರುವೇಕೆರೆ ತಾಲೂಕಿನ ಗೋಣಿತುಮಕೂರಿನಲ್ಲಿ ಉಂಟಾಗಿದ್ದ ಉದ್ವಿಗ್ನತೆಗೆ ತಾಲೂಕು ಆಡಳಿತ ಶಾಂತಿ ಸಭೆ ನಡೆಸುವ ಮೂಲಕ ಪ್ರಕರಣ ಸುಖಾಂತ್ಯವಾಗಿದೆ. ತಹಸೀಲ್ದಾರ್ ಎಂ.ಎಸ್. ಕುಂಞ ಅಹಮದ್ ಅವರ ನೇತೃತ್ವದಲ್ಲಿ ನಡೆದ ಶಾಂತಿ ಸಭೆಯಲ್ಲಿ, ಗ್ರಾಮದಲ್ಲಿ ಯಾವುದೇ ರೀತಿಯ ಅಸ್ಪೃಶ್ಯತೆ, ಜಾತಿ ಭೇದಭಾವ ಅಥವಾ ಸಮಾಜವನ್ನು ವಿಭಜಿಸುವ ಆಚರಣೆಗಳಿಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟ ಸಂದೇಶ ನೀಡಲಾಯಿತು. ಸಭೆಯ ಬಳಿಕ, ತಹಸೀಲ್ದಾರ್ ಸಮ್ಮುಖದಲ್ಲೇ ದಲಿತ ನವದಂಪತಿ ದೇವಾಲಯ ಪ್ರವೇಶಿಸಿ ಪೂಜೆ ಸಲ್ಲಿಸಿದರು. ಈ ವೇಳೆ ಗ್ರಾಮದ ಮುಖಂಡರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಎಲ್ಲರ ಸಮ್ಮುಖದಲ್ಲೇ ತಹಸೀಲ್ದಾರ್ ಎಂ.ಎಸ್. ಕುಂಞ ಅಹಮದ್ ಸಹಿತ ಪೂಜಾ ಕಾರ್ಯಕ್ರಮ ಶಾಂತಿಯುತವಾಗಿ ನೆರವೇರಿತು. ಗೋಣಿ ತುಮಕೂರು ಗ್ರಾಮದ ಆದಿಶಕ್ತಿ ಅರಸಮ್ಮ ದೇವಾಲಯಕ್ಕೆ ದಲಿತ ಸಮುದಾಯಕ್ಕೆ ಸೇರಿದ ನವದಂಪತಿಗಳು ಪೂಜೆ ಸಲ್ಲಿಸಲು ತೆರಳಿದ್ದರು. ಈ ವೇಳೆ ನಾರಾಯಣಪ್ಪ ಎಂಬ ವ್ಯಕ್ತಿ, ಮೈ ಮೇಲೆ ದೇವರು ಬಂದಿದೆ ಎಂದು ನಟನೆ ಮಾಡುತ್ತಾ, ದಲಿತರು ದೇವಾಲಯ ಪ್ರವೇಶಿಸಿದ್ದಾರೆ. ದಲಿತರು ದೇವಾಲಯ ಪ್ರವೇಶಿಸಿರುವುದರಿಂದ ಪುಣ್ಯಾಹ ಮಾಡಿಸಬೇಕು ಎಂಬ ಅವಮಾನಕಾರಿ ಹೇಳಿಕೆ ನೀಡಿ, ಸಮಾಜದ ಒಂದು ವರ್ಗದ ಧಾರ್ಮಿಕ ಹಾಗೂ ಮಾನವೀಯ ಭಾವನೆಗೆ ಧಕ್ಕೆ ತಂದಿದ್ದರು. ಘಟನೆಯಿಂದ ಮನನೊಂದ ನವದಂಪತಿಗಳು ತುರುವೇಕೆರೆ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ವಿಚಾರಣೆ ಆರಂಭಿಸಿದ್ದರಲ್ಲದೆ ನಾರಾಯಣಪ್ಪ ಎಂಬುವರನ್ನು ಬಂಧಿಸಿದ್ದರು. ತಹಸೀಲ್ದಾರ್ ಎಂ.ಎಸ್. ಕುಂಞ ಅಹಮದ್ ಮಾತನಾಡಿ, ಯಾವುದೇ ರೂಪದ ಅಸ್ಪೃಶ್ಯತೆ ಅಥವಾ ಜಾತಿ ನಿಂದನೆ ಕಾನೂನಿನ ಪ್ರಕಾರ ಅಪರಾಧ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ವಿಮಾನ ನಿಲ್ದಾಣದಲ್ಲಿ ಗಾಂಜಾ ವಶ: ಬಂಧನ

• **ಬೆಂಗಳೂರು:** ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಅಕ್ರಮವಾಗಿ ಸಾಗಿಸುತ್ತಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಪ್ತಿ ಮಾಡಿದ್ದಾರೆ. ಫೆ.25ರಂದು ನಡೆದ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಸುಮಾರು 6.50 ಕೋಟಿ ರೂ. ಮೌಲ್ಯದ 18.61 ಕೆ.ಜಿ ತೂಕದ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ. ಬ್ಯಾಂಕಾಕ್‌ನಿಂದ ಕೆಐಎ ಟರ್ಮಿನಲ್ 2ಕ್ಕೆ ಆಗಮಿಸಿದ ಪ್ರಯಾಣಿಕನೊಬ್ಬನ ಮೇಲೆ ಅನುಮಾನಗೊಂಡ ಕಸ್ಟಮ್ಸ್ ಅಧಿಕಾರಿಗಳು ಆತನ ಚೆಕ್-ಇನ್ ಬ್ಯಾಗೇಜ್ ತಪಾಸಣೆ ನಡೆಸಿದಾಗ, ಅಡಗಿಸಿಟ್ಟಿದ್ದ 5.55 ಕೆ.ಜಿ ಹೈಡ್ರೋಪೋನಿಕ್ ಗಾಂಜಾ ಪತ್ತೆಯಾಗಿದೆ. ಇದರ ಅಂತರಾಷ್ಟ್ರೀಯ ಮಾರುಕಟ್ಟೆ ಮೌಲ್ಯ ಸುಮಾರು 1.94 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಮತ್ತೊಂದು ಕಾರ್ಯಾಚರಣೆಯಲ್ಲಿ, ಅದೇ ಮಾರ್ಗವಾಗಿ ಬಂದ ಇನ್ನೊಬ್ಬ ಪ್ರಯಾಣಿಕನಿಂದ 13.6 ಕೆ.ಜಿ ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ.

33 ವರ್ಷ ತಲೆಮರೆಸಿ ಕೊಂಡಿದ್ದವನ ಸೆರೆ



• **ಕೋಲಾರ:** ಕಳೆದ 33ವರ್ಷದಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸುವಲ್ಲಿ ಕೋಲಾರ ನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ. ಕೋಲಾರದ ದರ್ಗಾ ಶಾಹಿ ಮೊಹಲ್ಲಾ ವಾಸಿ ಜಮೀರ್ (54) ಬಂಧಿತ ಆರೋಪಿ. ಈತ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಗಲಭೆ ಮಾಡಿ ಅಪಾಯಕಾರಿ ಆಯುಧದಿಂದ ವ್ಯಕ್ತಿಯೊಬ್ಬರನ್ನು ಗಾಯಗೊಳಿಸಿದ್ದ ಕೇಸಿನ ಆರೋಪಿಯಾಗಿದ್ದನು. ಇದೀಗ ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಮಾ.9 ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಲಾಗಿದೆ. ಪೊಲೀಸ್ ಪದ್ಧತಿ ಹಾಗೂ ಆಧುನಿಕ ತಂತ್ರಜ್ಞಾನದಿಂದ ಆರೋಪಿಯನ್ನು ಬಂಧಿಸಲಾಗಿದೆ. ಮುಖ್ಯಪೇದೆ ಶೇಖರ್, ಪೇದೆ ರಮೇಶ್ ಆರೋಪಿಯನ್ನು ಬಂಧಿಸಿದ್ದು, ಅಧಿಕಾರಿ, ಸಿಬ್ಬಂದಿ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನಿಕಾ ಸಿಕ್ರಿವಾಲ್ ಶ್ಲಾಘಿಸಿದ್ದಾರೆ.

ಗ್ರಾಮ ಒನ್ ಕೇಂದ್ರಗಳ ಬಳಿ ಸರದಿಯಲ್ಲಿ ರೈತರು | ಆಸ್ತಿ ದಾಖಲಾತಿ ನೋಂದಣಿಗೆ ಇಂದೇ ಕಡೆ ದಿನ

ಇ-ಕೆವೈಸಿ ಅಳವಡಿಕೆಗೆ ಸರ್ವರ್ ಸಮಸ್ಯೆ

▸ ಎಸ್. ರುದ್ರೇಶ್ವರ



• **ರಾಮನಗರ:** ಕೇಂದ್ರ ಸರ್ಕಾರದ ಅಗ್ರಿಸ್ಟಾಕ್ ಯೋಜನೆಯಲ್ಲಿ ರಾಜ್ಯದ ಎಲ್ಲಾ ರೈತರ ವಿವರವನ್ನು ಒಳಗೊಂಡ ರಾಜ್ಯ ರೈತ ನೋಂದಣಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರೈತರು ತಮ್ಮ ಸೌಲಭ್ಯವನ್ನು ಮುಂದುವರಿಸಲು ಫ್ರೂಟ್ಸ್ ತಂತ್ರಾಂಶದಲ್ಲಿ ಇ-ಕೆವೈಸಿ ಮಾಡಿಸುವುದು ಮತ್ತು ಡಿಜಿಟಲ್ ಸಹಮತಿ ನೀಡುವುದು ಕಡ್ಡಾಯವಾಗಿದೆ ಎಂದು ಕೃಷಿ ಇಲಾಖೆ ಪ್ರಕಟಣೆ ಹೊರಡಿಸಿತ್ತು. ಜತೆಗೆ ಫೆ.26ರವರೆಗೆ ಗಡುವು ಸಹ ನೀಡಿತ್ತು.

ಆದರೆ ಕೃಷಿ ಇಲಾಖೆಯ ಸೂಚನೆಯಂತೆಯೇ ಫ್ರೂಟ್ಸ್ ತಂತ್ರಾಂಶದಲ್ಲಿ ಇ-ಕೆವೈಸಿ ಮಾಡಿಸಲು ಮತ್ತು ಡಿಜಿಟಲ್ ಸಹಮತಿ ನೀಡಲು ಗ್ರಾಮ ಒನ್ ಗಳಿಗೆ ತೆರಳಿದ್ದ ರೈತರಿಗೆ ಸರ್ವರ್ ಸಮಸ್ಯೆ ಎದುರಾಗಿದೆ. ಸಿಎಫ್‌ಐಡಿ (ಸೆಂಟ್ರಲ್ ಫಾರ್ಮರ್ ಐಡಿ) ಪಡೆಯಲು ರೈತರು ಪರದಾಡುವಂತಾಗಿದೆ.

ಇ-ಕೆವೈಸಿ ಮತ್ತು ಡಿಜಿಟಲ್ ಸಹಮತಿ ನೀಡುವ ಪ್ರಕ್ರಿಯೆಗಾಗಿ ಹತ್ತಿರದ ಗ್ರಾಮ ಒನ್ ಗಳು, ರೈತಸಂಪರ್ಕ ಕೇಂದ್ರಗಳು ಹಾಗೂ ಕೃಷಿ, ತೋಟಗಾರಿಕೆ, ಕಂದಾಯ ಮತ್ತು ರೇಷ್ಮೆ ಇಲಾಖೆ ಕಚೇರಿಗಳಿಗೆ ಭೇಟಿ ನೀಡುವಂತೆ ಸೂಚನೆ ನೀಡಲಾಗಿತ್ತು. ಅದರಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಗ್ರಾಮ ಒನ್ ಗಳು ಹಾಗೂ ರೈತಸಂಪರ್ಕ ಕೇಂದ್ರಗಳಲ್ಲಿ ರೈತರು ಜಮಾಯಿಸಿದ್ದರು.

ಪ್ರಕಟಣೆಯಲ್ಲಿ ಸೂಚಿಸಲಾಗಿದ್ದ ದಾಖಲಾತಿಗಳೊಂದಿಗೆ ತೆರಳಿ ಸಿಎಫ್‌ಐಡಿ ಪಡೆಯಲು ಮುಂದಾಗಿದ್ದರು. ಆದರೆ ಇಡೀ ಜಿಲ್ಲೆಯಲ್ಲಿ ಏಕಕಾಲಕ್ಕೆ ನೂರಾರು ಕಡೆಗಳಲ್ಲಿ ಸಾವಿರಾರು ಜನರು ಈ ತಂತ್ರಾಂಶಗಳನ್ನು ಓಪನ್ ಮಾಡುತ್ತಿದ್ದರೆ ಸರ್ವರ್ ಸಮಸ್ಯೆ ಎದುರಾಯಿತು. ಹೀಗಾಗಿ ಗ್ರಾಮ ಒನ್ ಗಳಿಗೆ ಆಗಮಿಸಿದ್ದ ರೈತರು ದಿನವಿಡೀ ಕಾಯುವಂತಾಗಿದೆ. ವಯಸ್ಸಾದವರು, ಮಹಿಳೆಯರು ಎನ್ನದೇ ಎಲ್ಲರೂ ಕಾದು ಕಾದು ಸುಸ್ತಾಗುತ್ತಿದ್ದಾರೆ. ಕೃಷಿ ಇಲಾಖೆ ಹೊಸದಾಗಿ ಹೊರಡಿಸಿರುವ ಪ್ರಕಟಣೆಯಿಂದ ರೈತರಲ್ಲಿ ಸೌಲಭ್ಯಗಳಿಂದ ವಂಚಿತರಾಗುವ ಭೀತಿ ಎದುರಾಗಿದೆ. ಯಾಕೆಂದರೆ ನಿಗದಿತ ಅವಧಿಯೊಳಗೆ ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸದಿದ್ದರೆ ಮತ್ತು ಭೂಹಿಡುವಳಿಗಳನ್ನು ಎಫ್‌ಐಡಿಯಲ್ಲಿ ಸೇರ್ಪಡೆಗೊಳಿಸದಿದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಸೌಲಭ್ಯಗಳಿಂದ ರೈತರು ವಂಚಿತರಾಗುವ ಸಾಧ್ಯತೆಯಿದೆ ಎಂದು ಇಲಾಖೆಯ ಪ್ರಕಟಣೆ ಎಚ್ಚರಿಸಿತ್ತು. ಆದ್ದರಿಂದ ರೈತರು ತಮ್ಮೆಲ್ಲಾ ಕೆಲಸಗಳನ್ನು ಬಿಟ್ಟು ಇ-ಕೆವೈಸಿ ಮತ್ತು ಡಿಜಿಟಲ್ ಸಹಮತಿ ನೀಡುವ ಪ್ರಕ್ರಿಯೆಗಾಗಿ ಗ್ರಾಮ ಒನ್ ಸೇರಿದಂತೆ ವಿವಿಧ ಕಚೇರಿಗಳತ್ತ ಮುಖಮಾಡುತ್ತಿದ್ದಾರೆ.

ಬೆಳೆ ನಾಶ, ರೋಗ ಬಾಧೆ, ಇಳುವರಿ ಕುಂಠಿತ, ಬೆಲೆ ಇಳಿಕೆ ಸಾಲುಸಮಸ್ಯೆ ನಡುವೆಯೇ ಬದುಕನ್ನು ಸಾಗಿಸುವ ರೈತರಿಗೆ ಪಿಎಂ ಕಿಸಾನ್, ಬೆಳೆವಿಮೆ ಮತ್ತು ಬರ ಪರಿಹಾರ ಯೋಜನೆಗಳು ಕೊಂಚ ಉಸಿರಾಡುವಂತೆ ಮಾಡುತ್ತವೆ.

ಗಡುವು ವಿಸ್ತರಣೆಗೆ ಒತ್ತಾಯ

ಕೃಷಿ ಇಲಾಖೆ ಈ ಬಗ್ಗೆ ಕೇವಲ 2-3 ದಿನಗಳ ಹಿಂದಷ್ಟೇ ಪ್ರಕಟಣೆ ಹೊರಡಿಸಿದೆ. ಕೇವಲ ಫೆ.26ರವರೆಗೆ ಗಡುವು ನೀಡಿದೆ. ಇನ್ನು ಕೇವಲ 2 ದಿನಗಳು ಮಾತ್ರ ಬಾಕಿ ಉಳಿದಿದೆ. ಒಂದು ಕಡೆ ಸಮಯಾವಕಾಶ ಕಡಿಮೆ ಇದ್ದರೆ, ಮತ್ತೊಂದೆಡೆ ಸರ್ವರ್ ಸಮಸ್ಯೆಯಿಂದ ರೈತರು ಕಾದುಕಾದು ಸುಸ್ತಾಗುತ್ತಿದ್ದಾರೆ. ಹೀಗಾಗಿ ಈ ಪ್ರಕ್ರಿಯೆಯನ್ನು ಮಾಡಿಮುಗಿಸಲು ನೀಡಿರುವ ಗಡುವನ್ನು ವಿಸ್ತರಿಸಬೇಕು ಎಂದು ಚಾಲಮಂಗಲದ ರೈತಮುಖಂಡ ಶಿವಕುಮಾರಸ್ವಾಮಿ ಒತ್ತಾಯಿಸಿದರು. ನಮಗೆ ಇದರ ಬಗ್ಗೆ ಗೊತ್ತಾಗಿದ್ದೇ ಎರಡು ದಿನದ ಹಿಂದೆ. ವಾರಾಂತ್ಯದ ರಜೆಯ ಕಾರಣದಿಂದ ಕಚೇರಿಗಳು ತೆರೆದಿರಲಿಲ್ಲ. ಈಗ ಬಂದು ನೋಡಿದರೆ ಗ್ರಾಮ ಒನ್ ಗಳು ತುಂಬಿ ತುಳುಕುತ್ತಿವೆ. ಸರ್ವರ್ ಸಮಸ್ಯೆಯಿಂದ ಯಾವ ಕೆಲಸವೂ ಆಗಿಲ್ಲ. ಜತೆಗೆ ಈ ಪ್ರಕ್ರಿಯೆಗೆ ಕೇವಲ ಗ್ರಾಮ ಒನ್ ಹಾಗೂ ನಾಲ್ಕು ಇಲಾಖೆಯ ಕಚೇರಿಗಳಲ್ಲಿ ಮಾತ್ರ ಅವಕಾಶ ನೀಡಲಾಗಿದೆ. ಇದಕ್ಕೆ ಬೇರೆ ಕಚೇರಿಗಳಲ್ಲಿಯೂ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

ಸರ್ವರ್ ಸಮಸ್ಯೆ ಸರಿಪಡಿಸಲಾಗಿದೆ

ಇಡೀ ರಾಜ್ಯದಲ್ಲಿ ಏಕಕಾಲಕ್ಕೆ ಪ್ರಕ್ರಿಯೆ ಶುರುವಾಗಿರುವುದರಿಂದ ಕೆಲವು ಸಮಯ ಸರ್ವರ್ ಸಮಸ್ಯೆ ಎದುರಾಯಿತು. ಈ ಬಗ್ಗೆ ತಕ್ಷಣವೇ ಇ-ಗವರ್ನೆನ್ಸ್ ತಂಡದ ಗಮನಕ್ಕೆ ತಂದುಸಮಸ್ಯೆ ಸರಿಪಡಿಸಲಾಗಿದೆ. ಸದ್ಯ ಸರ್ವರ್ ಸಮಸ್ಯೆಗೆ ಮುಕ್ತಿ ಸಿಕ್ಕಿದ್ದು, ಪ್ರಕ್ರಿಯೆ ಸರಾಗವಾಗಿ ನಡೆಯುತ್ತಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಅಂಬಿಕಾ ತಿಳಿಸಿದರು.

ಎಲ್ಲರ ಆಸ್ತಿ ನೋಂದಣಿಗೆ ಅವಕಾಶ

ಒಂದು ಬಾರಿ ಪ್ರಕ್ರಿಯೆ ಆರಂಭವಾದ ನಂತರ ಒಬ್ಬರದ್ದು ಮಾಡಿ, ಒಬ್ಬರದ್ದನ್ನು ಬಿಡಲು ಸಾಧ್ಯವಿಲ್ಲ. ಎಲ್ಲರ ಇ-ಕೆವೈಸಿ ಪ್ರಕ್ರಿಯೆ ಮಾಡುತ್ತೇವೆ. ಕೊಟ್ಟ ಗಡುವಿನೊಳಗೆ ಎಲ್ಲವೂ ಮುಗಿಯುತ್ತದೆ ಎಂಬ ನಂಬಿಕೆಯಿದೆ. ಹೀಗಾಗಿಗಡುವುವಿಸ್ತರಣೆಯ ಪ್ರಶ್ನೆಯೇ ಬರುವುದಿಲ್ಲ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಅಂಬಿಕಾ ತಿಳಿಸಿದರು.

ಜಿಲ್ಲಾ ಯೋಜನಾ ಸಮಿತಿ ಚುನಾವಣೆ: ಲೀಲಾಮಹೇಶ್ ನಾಮಪತ್ರ ಸಲ್ಲಿಕೆ



• **ದೊಡ್ಡಬಳ್ಳಾಪುರ:** ಇದೇ ತಿಂಗಳು 27ರಂದು ನಡೆಯಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾ ಯೋಜನಾ ಸಮಿತಿ ಚುನಾವಣೆಗೆ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯ 13ನೇ ವಾರ್ಡ್ ಸದಸ್ಯೆ ಲೀಲಾ ಮಹೇಶ್ ಅವರು ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಪ್ರೇಮ್ ಕುಮಾರ್, ಉಪಾಧ್ಯಕ್ಷೆ ಶ್ವೇತಾ ಮುರುಳಿಧರ್, ಸದಸ್ಯರಾದ ಮುನಿಶಂಕರ್ ಸೇರಿದಂತೆ ಬಿಜೆಪಿ ಮುಖಂಡರಿದ್ದರು.

ವಿನಾಯಕ ದೇಗುಲ ಜೀರ್ಣೋದ್ಧಾರ



• **ಹೊಸಕೋಟೆ:** ನಗರದ ತಮ್ಮೇಗೌಡ ಬಡಾವಣೆಯಲ್ಲಿ ನವೀಕರಣಗೊಂಡ ಶ್ರೀ ಉತ್ತರಾಮುಖಿ ವರಸಿದ್ಧಿ ವಿನಾಯಕ ದೇವಾಲಯದ ಜೀರ್ಣೋದ್ಧಾರದ ಅಂಗವಾಗಿ ಕುಂಭಾಭಿಷೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಇದೇ ಸಂದರ್ಭದಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು, ವಿವಿಧ ದೇವರ ಹೋಮ ಸಹ ಏರ್ಪಡಿಸಲಾಗಿತ್ತು. ದೇವಾಲಯ ಆಡಳಿತ ಮಂಡಳಿಯ ಸದಸ್ಯರು, ಭಕ್ತರು ಭಾಗವಹಿಸಿದ್ದರು.

ಮಹಿಳೆಯರಿಗೆ ವಂಚನೆ

• **ಮೈಸೂರು:** ಬ್ಯಾಂಕ್‌ನಲ್ಲಿ ಅಡವಿಟ್ಟ ಚಿನ್ನಾಭರಣ ಬಿಡಿಸಿ ಹೆಚ್ಚಿನ ಹಣ ನೀಡುತ್ತೇವೆ ಎಂದು ಬೆಂಗಳೂರು ಮೂಲದ ಇಬ್ಬರು ಮಹಿಳೆಯರಿಗೆ ನಂಬಿಸಿದ ಮೈಸೂರಿನ ಫೈನಾನ್ಸ್ ಕಂಪೆನಿಯೊಂದು ಲಕ್ಷಾಂತರ ರೂ. ವಂಚಿಸಿರುವ ಘಟನೆ ನಡೆದಿದೆ.

ಮೈಸೂರಿನ ಕುವೆಂಪುನಗರದಲ್ಲಿರುವ ಧನಗಣ ಪತಿ ಫೈನಾನ್ಸ್ ಕಂಪೆನಿ ನಮ್ಮನ್ನು ವಂಚಿಸಿದೆ ಎಂದು ಮಹಿಳೆಯರು ನೀಡಿದ ದೂರಿನ ಮೇಲೆ ಅಲ್ಲಿನ ಸಿಬ್ಬಂದಿಗಳಾದ ಸಹನಾ, ಶಾಂತ, ಶಂಕರ್, ಅಭಿಲಾಷ್, ಕಿರಣ್, ಸುಂದರರಾಜನ್ ಹಾಗೂ ಮಹೇಂದ್ರ ಎಂಬವರ ವಿರುದ್ಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಂಗಳೂರಿನ ಕೋಟೆಕ್ ವಿಮಾ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪವಿತ್ರಾ ಎಂಬುವರು ಸಾಲ ತೀರಿಸುವ ಉದ್ದೇಶದಿಂದ ತಮ್ಮ ಬಳಿ ಇದ್ದ 290 ಗ್ರಾಂ ಚಿನ್ನಾಭರಣ ಹಾಗೂ ಸ್ನೇಹಿತೆ ಬಿಂದು ಎಂಬವರ 323 ಗ್ರಾಂ ಚಿನ್ನಾಭರಣವನ್ನು ಬೆಂಗಳೂರಿನ ಫೆಡರಲ್ ಬ್ಯಾಂಕ್‌ನಲ್ಲಿ ಅಡವಿಟ್ಟು ಹಣ ಪಡೆದಿದ್ದರು. ನಂತರ ಜಾಹಿರಾತು ಮೂಲಕ ಅವರು ಧನ ಗಣಪತಿ ಫೈನಾನ್ಸ್ ಬಗ್ಗೆ ತಿಳಿದುಕೊಂಡಿದ್ದಾರೆ. ಅವರಿಗೆ ಚಿನ್ನವನ್ನು ಮಾರಾಟ ಮಾಡಿ ಹೆಚ್ಚಿನ ಹಣ ಪಡೆಯಲು ಉದ್ದೇಶಿಸಿ ಸಂಪರ್ಕಿಸಿದ್ದಾರೆ. ನಂತರ ಅವರ ಆಭರಣವನ್ನು ಕಂಪೆನಿ ಸಿಬ್ಬಂದಿ ಬ್ಯಾಂಕ್‌ಗೆ ಹಣ ಪಾವತಿಸಿ ಬಿಡಿಸಿಕೊಂಡಿದ್ದಾರೆ.

ನಂತರ ಫೈನಾನ್ಸ್ ಕಂಪೆನಿಯವರು ಪ್ರತಿ ಗ್ರಾಂ ಚಿನ್ನಕ್ಕೆ 17,200 ರೂ. ಕೊಡುವುದಾಗಿ ಭರವಸೆ ನೀಡಿದರು. ನಂತರ ಅವರನ್ನು ಕಾರಿನಲ್ಲಿ ಕರೆದುಕೊಂಡು ಮೈಸೂರಿನ ಕಚೇರಿಗೆ ಕರೆತಂದರು. ಇದೇ ವೇಳೆ ನಮ್ಮ ಅನುಮತಿ ಇಲ್ಲದಿದ್ದರೂ ಚಿನ್ನಾಭರಣವನ್ನು ಕರಗಿಸಿದರು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ನಂತರ ಚಿನ್ನದ ಪ್ಯೂರಿಟಿ ಚೆಕ್ ಮಾಡುತ್ತೇವೆ ಎಂದು ಹೇಳಿ, ಕೆಲ ಸಮಯದ ನಂತರ ನಿಮ್ಮ ಚಿನ್ನ ಹೆಚ್ಚಿನ ಪ್ಯೂರಿಟಿ ಹೊಂದಿಲ್ಲ ಎಂದು ಹೇಳಿದ ಅವರು, ನಮ್ಮ ಚಿನ್ನಕ್ಕೆ ಉಳಿಕೆ ಹಣವಾಗಿ 5 ಲಕ್ಷ ರೂ. ನೀಡುವುದಾಗಿ ಹೇಳಿದರು. ಆದರೆ, ನಾವು ಅವರು ಹೇಳಿದ್ದನ್ನು ಒಪ್ಪಲಿಲ್ಲ, ನಮ್ಮದು 916 ಹಾಲ್ ಮಾರ್ಕ್ ಆಭರಣ, ನೀವು ನಮಗೆ ಮೋಸ ಮಾಡಿದ್ದೀರಿ ಎಂದು ದೂರಿದೆವು. ನಮಗೆ ನಮ್ಮ ಆಭರಣವನ್ನು ವಾಪಸ್ ನೀಡಿ ಎಂದು ಕೇಳಿದೆವು. ಆದರೆ ಅವರು ಸ್ಪಂದಿಸಿಲ್ಲ ಎಂದು ಆರೋಪಿಸಿ ಪವಿತ್ರಾ, ಅವರು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಡವಿಟ್ಟ ಚಿನ್ನಕ್ಕೆ ಹೆಚ್ಚಿನ ಹಣದ ಆಮಿಷ: ದೂರು ದಾಖಲು

ಕುರುಕ್ಷೇತ್ರ ನಾಟಕ ಪ್ರದರ್ಶನ



• **ನೆಲಮಂಗಲ:** ತಾಲೂಕಿನ ಯಂಟಗಾನಹಳ್ಳಿ ಗ್ರಾಮದಲ್ಲಿ ಶ್ರೀ ಗ್ರಾಮದೇವತೆ ಕೃಪಾಪೋಷಿತ ಮಹಿಳಾ ನಾಟಕ ಮಂಡಳಿಯಿಂದ ಫೆ.27ರ ಶುಕ್ರವಾರ ರಾತ್ರಿ 8ಗಂಟೆಗೆ ಸಂಪೂರ್ಣ ಮಹಿಳಾ ಕಲಾವಿದರ ತಂಡ ಕುರುಕ್ಷೇತ್ರ ಅಥವಾ ಶ್ರೀ ಕೃಷ್ಣಸಂಧಾನ ಪೌರಾಣಿಕ ನಾಟಕವನ್ನು ಅಭಿನಯ ಮಾಡುತ್ತಿದ್ದು, ತಪ್ಪದೇ ಎಲ್ಲರೂ ಆಗಮಿಸುವಂತೆ ಮಹಿಳಾ ಕಲಾವಿದರು ಮನವಿ ಮಾಡಿದರು.

ಯಂಟಗಾನಹಳ್ಳಿ ಗ್ರಾಮದ ಕುರುಕ್ಷೇತ್ರ ಪೌರಾಣಿಕ ನಾಟಕಕ್ಕೆ ಶಾಸಕರಾದ ಎನ್.ಶ್ರೀನಿವಾಸ್, ಬಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಗಂಗಹನುಮಯ್ಯ, ಮಾಜಿ ಎಂಎಲ್‌ಸಿ ಬಿಎಂಎಲ್ ಕಾಂತರಾಜು, ಮಾಜಿ ಶಾಸಕ ಡಾ.ಕೆ ಶ್ರೀನಿವಾಸಮೂರ್ತಿ, ಎಂ.ಎ ನಾಗರಾಜು, ಬಮುಲ್ ನಿರ್ದೇಶಕ ಭವಾನಿಶಂಕರ್‌ಬೈರೇಗೌಡ ಸೇರಿದಂತೆ ಅನೇಕರು ಗಣ್ಯರು, ಮುಖಂಡರು, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷರು, ಸದಸ್ಯರು ಹಾಗೂ ಬಿಲ್ಲಪತ್ರೆ, ವಿನಾಯಕ ಗೆಳೆಯರ ಬಳಗ, ವೈಸಿಸಿ ಕ್ಲಬ್, ಶ್ರೀ ಆಂಜನೇಯ ಕೃಪಾಪೋಷಿತ ಮಂಡಳಿ, ತಾಯಿನಾಡು ಭೀಮಸೇನ ಯುವಕರ ಸಂಘದ ಸದಸ್ಯರು ಭಾಗವಹಿಸಲಿದ್ದಾರೆ.

ಮಹಿಳಾ ಕಲಾವಿದರು: ಇದೇ ಮೊದಲ ಬಾರಿಗೆ ಗ್ರಾಮೀಣ ಮಹಿಳೆಯರು ಕುರುಕ್ಷೇತ್ರ ನಾಟವನ್ನು ಕಲಿತು ಅಭಿನಯ ಮಾಡುತ್ತಿದೆ. ಕೃಷ್ಣನ ಪಾತ್ರದಲ್ಲಿ ವಿಮಲ, ಧರ್ಮರಾಯನ ಪಾತ್ರದಲ್ಲಿ ಅಶ್ವಿನಿ, ಭೀಮಸೇನ ಚಂದ್ರಮ್ಮ, ಅರ್ಜುನ ಉಮಾದೇವಿ, ಅಭಿಮನ್ಯು ಅನು, ವಿಧುರ ಶಾರದ, ಬಲರಾಮ ಸುಶೀಲ, ದುರ್ಯೋಧನ, ದುಶ್ಯಾಸನ ರತ್ನಮ್ಮ, ಕರ್ಣ ಕಾವ್ಯ.ಸಿಎಸ್, ಶಕುನಿ ಪಾತ್ರದಲ್ಲಿ ಸುಧಾ, ದ್ರೋಣಾಚಾರ್ಯ ಪ್ರೀತಿ, ಭೀಷ್ಮ ಪಾತ್ರದಲ್ಲಿ ಶಾಂತಮ್ಮ, ದ್ರೌಪತಿ ನಂದಿನಿ, ಉತ್ತರೆ ಸೌಮ್ಯ, ರುಕ್ಮಿಣಿ ರಂಜಿತ ಅಭಿನಯ ಮಾಡಲಿದ್ದಾರೆ. ಸಂಗೀತ ನಿರ್ದೇಶಕ ಜಗದೀಶ್ ಮಾಡಲಿದ್ದಾರೆ.

ಅಂಗಾಂಗ ದಾನ ಮಾಡಿದ ಕುಟುಂಬ

• **ಮಂಡ್ಯ:** ಮೆದುಳು ನಿಷ್ಕ್ರಿಯಗೊಂಡಿದ್ದ ತಾಲೂಕಿನ ಚಿಕ್ಕಮಂಡ್ಯ ಗ್ರಾಮದ ಸಿ.ಎಸ್. ದರ್ಶನ್ ಅವರ ಅಂಗಾಂಗ ಕುಟುಂಬದವರು ದಾನ ಮಾಡಿ ಹಲವು ಜೀವಗಳಿಗೆ ಅನುಕೂಲ ಮಾಡಿಕೊಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಚಿಕ್ಕಮಂಡ್ಯದ ದರ್ಶನ್ ಬೈಕ್‌ನಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ. ಚಿಕಿತ್ಸೆ ಪಡೆದು ಮನೆಯಲ್ಲಿ ಬಂದು ವಿಶ್ರಾಂತಿ ಪಡೆಯುತ್ತಿದ್ದ. ಆದರೆ ಈ ವೇಳೆ ಆತ ತುಂಬಾ ಅಸ್ವಸ್ಥನಾಗಿದ್ದು, ತಕ್ಷಣ ಆತನನ್ನು ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಪರೀಕ್ಷಿಸಿದ ವೈದ್ಯರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲು ಸಲಹೆ ನೀಡಿದ್ದರು.

ವೈದ್ಯರ ಸಲಹೆ ಮೇರೆಗೆ ದರ್ಶನ್‌ನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಟ್ರಾಮಾಕೇರ್ ಸೆಂಟರ್‌ಗೆ ದಾಖಲಿಸಲಾಯಿತು. ಪ್ರಜ್ಞೆ ತಪ್ಪಿದ ಹಿನ್ನೆಲೆಯಲ್ಲಿ ಅಗತ್ಯವಿರುವ ಎಲ್ಲಾ ಚಿಕಿತ್ಸೆಯನ್ನು ನೀಡಲಾಯಿತು. ಆದರೂ ದರ್ಶನ್ ಚಿಕಿತ್ಸೆಗೆ ಸ್ಪಂದಿಸಲಿಲ್ಲ, ಆತನ ಮೆದುಳು ನಿಷ್ಕ್ರಿಯವಾಗಿತ್ತು. ಬೇರೆ ದಾರಿ ಇಲ್ಲದೆ ವೈದ್ಯರು ಆತನ ಸಾವಿನ ಬಗ್ಗೆ ಖಚಿತ ಪಡಿಸಿದ್ದರು. ಜತೆಗೆ ಕುಟುಂಬದವರಿಗೆ ಮನವರಿಕೆ ಮಾಡಿ ಆತನ ಅಂಗಾಂಗಗಳನ್ನು ದಾನ ಮಾಡುವಂತೆ ಸಲಹೆ ನೀಡಿದ್ದರು.

ಕುಟುಂಬದವರ ಸಮ್ಮತಿ ಮೇರೆಗೆ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಾದ ಡಾ. ಟಿ.ಎಸ್.ಕಾವ್ಯ ಮತ್ತು ವೈದ್ಯಕೀಯ ಅಧೀಕ್ಷಕ ಡಾ. ಎಸ್.ದೀಪಕ್ ಮತ್ತಿತರರ ವೈದ್ಯರ ತಂಡ ತಡ ರಾತ್ರಿ, ಶಸ್ತ್ರ ಚಿಕಿತ್ಸೆ ನಡೆಸಿ, 26 ವರ್ಷದ ವ್ಯಕ್ತಿಗೆ ಯಕೃತ್ತನ್ನು, 29 ಮತ್ತು 38 ವರ್ಷದ ವ್ಯಕ್ತಿಗಳಿಗೆ ಮೂತ್ರಪಿಂಡವನ್ನು ನೀಡಲಾಯಿತು.

ಹೃದಯ ಕವಾಟುಗಳನ್ನು ಮತ್ತೊಂದು ಆಸ್ಪತ್ರೆಗೆ ಕಳುಹಿಸಲಾಗಿದ್ದು, ವಿಧಿ ವಿಜ್ಞಾನ ಇಲಾಖೆಯ ತಂಡ ಶಸ್ತ್ರ ಚಿಕಿತ್ಸೆ ನಂತರ ಮರಣೋತ್ತರ ಪರೀಕ್ಷೆ ನಡೆಸಿ ಮೃತ ದೇಹವನ್ನು ಬೆಳಗ್ಗೆ ಅವರ ಕುಟುಂಬಕ್ಕೆ ಹಸ್ತಾಂತರಿಸಲಾಯಿತು. ನಂತರ ಆ್ಯಂಬುಲೆನ್ಸ್‌ನಲ್ಲಿ ದೇಹವನ್ನು ನಿವಾಸಕ್ಕೆ ಸ್ಥಳಾಂತರಿಸಲಾಯಿತು. ದರ್ಶನ್‌ನ ಅಂಗಾಂಗಳು ಹಲವು ಮಂದಿಯ ಜೀವಕ್ಕೆ ಆಸರೆಯಾಗಿದೆ.

▸▸ ಬೈಕ್ ಅಪಘಾತ: ಗಾಯಾಳು ಯುವಕ ದರ್ಶನ್ ಸಾವು

ಹನ್ನೊಂದು ಮಂದಿ ಬಂಧನ

• **ಪಾಂಡವಪುರ:** ವ್ಯಕ್ತಿ ಮೇಲೆ ಕಲ್ಲು ಹಾಗೂ ದೊಣ್ಣೆಯಿಂದ ಹಲ್ಲೆ ನಡೆಸಿ, ವೀಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು ಕ್ರೌರ್ಯ ಮೆರೆದಿದ್ದ 14 ಮಂದಿ ಆರೋಪಿಗಳ ಪೈಕಿ ಹನ್ನೊಂದು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್. ಪೇಟೆ ತಾಲೂಕು ಗಿರೀಶ್.ಬಿ.ಕೆ., ಮಂಜು ಅಲಿಯಾಸ್ ಪ್ಲಗ್ ಮಂಜ, ವಿಜಯ್‌ಕುಮಾರ್, ಸಂಜು, ಜೀವನ್, ಶಶಿಕುಮಾರ್, ರವಿ, ಡಿಂಕ ಗ್ರಾಮ, ನಿಂಗಣ್ಣ, ಗಣೇಶ್, ಬಿ. ಶಿವಣ್ಣ, ಮುದ್ದಪ್ಪ ಮಾದಪ್ಪ ಹಾಗೂ ಪುಟ್ಟರಾಜು ಎಂಬುವರೇ ಬಂಧಿತ ಆರೋಪಿಗಳಾಗಿದ್ದಾರೆ. ಉಳಿದ ಮೂವರು ಆರೋಪಿಗಳಾಗಿ ಪೊಲೀಸರು ಶೋಧ ನಡೆಸಿದ್ದಾರೆ.

ಯುವತಿ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ನವೀನ್‌ಕುಮಾರ್ ಹಾಗೂ ಬಿ.ಎಸ್.ಪ್ರಕಾಶ್ ಮೇಲೆ ಆರೋಪಿಗಳು ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ನಡೆಸಿದ್ದಾರೆ. ಅಲ್ಲದೆ, ನವೀನ್‌ಕುಮಾರ್‌ನ ಕಾಲಿನ ಮೇಲೆ ದೊಡ್ಡ ಗಾತ್ರದ ಸೈಜುಗಲ್ಲನ್ನು ಎತ್ತಿಹಾಕಿ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಘಟನೆಯಿಂದಾಗಿ ತೀವ್ರವಾಗಿ ಗಾಯಗೊಂಡಿರುವ ನವೀನ್‌ಕುಮಾರ್‌ನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಬಂಧ ಬಿ.ಎಸ್.ಪ್ರಕಾಶ್ ನೀಡಿದ ದೂರಿನ ಮೇರೆಗೆ ಘಟನೆ ನಡೆದ ಮಾರನೇ ದಿನವೇ ಪ್ರಮುಖ ಆರೋಪಿ ಗಿರೀಶ್‌ನನ್ನು ಬಂಧಿಸಲಾಗಿದೆ.. ಉಳಿದ ಆರೋಪಿಗಳನ್ನು ಬುಧವಾರ ಬಂಧಿಸಲಾಗಿದೆ. ಉಳಿದ ಆರೋಪಿಗಳನ್ನೂ ಶೀಘ್ರ ಬಂಧಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ. ವಿ.ಜೆ. ಶೋಭಾರಾಣಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆರೋಪಿಗಳು ಕೃತ್ಯಕ್ಕೆ ಬಳಸಿದ ಕಾರು ಮತ್ತು ಬೈಕ್‌ಗಳನ್ನು ವಶಪಡಿಸಿಕೊಂಡಿರುವ ಪೊಲೀಸರು ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿದ್ದಾರೆ.

▸▸ ವ್ಯಕ್ತಿ ಮೇಲೆ ಕಲ್ಲು, ದೊಣ್ಣೆಯಿಂದ ಹಲ್ಲೆ

ಮೈಸೂರಿನ ವಿವಿಧೆಡೆ ಕಳವು | ಪೊಲೀಸರಿಂದ ಓರ್ವನ ಬಂಧನ

2.96ಲಕ್ಷ ರೂ.ಮೌಲ್ಯದ ಚಿನ್ನಾಭರಣ ವಶ

• **ಮೈಸೂರು:** ನಗರ ಪೊಲೀಸ್ ಸ್ವತ್ತು ಕಳುವು ಪ್ರಕರಣವನ್ನು ಭೇದಿಸಿದ್ದು, ಒಟ್ಟು 2,96,36,000 ಮೌಲ್ಯದ ಚಿನ್ನಾಭರಣ ಹಾಗೂ 10,03,000 ನಗದು ಸೇರಿದಂತೆ ಇತರೆ ಸ್ವತ್ತು ವಶಪಡಿಸಿಕೊಂಡಿದ್ದಾರೆಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

ಬುಧವಾರ ನಗರ ಪೊಲೀಸ್ ಕಚೇರಿಯಲ್ಲಿ ಕಳುವು ಸ್ವತ್ತುಗಳ ಪ್ರದರ್ಶನವನ್ನು ವೀಕ್ಷಿಸಿ, ವಶಪಡಿಸಿಕೊಂಡ ಸ್ವತ್ತುಗಳನ್ನು ಅವುಗಳ ಮಾಲೀಕರಿಗೆ ಹಸ್ತಾಂತರಿಸದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ನಗರ ವ್ಯಾಪ್ತಿಯ ಸರಸ್ವತಿಪುರಂ, ಕುವೆಂಪುನಗರ, ಲಷ್ಕರ್, ವಿದ್ಯಾರಣ್ಯಪುರಂ, ವಿಜಯನಗರ, ಮೇಟಗಳ್ಳಿ, ಮಂಡಿ ಹಾಗೂ ನರಸಿಂಹರಾಜ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಳವು ಪ್ರಕರಣದಲ್ಲಿ 2 ಕೆಜಿ 50 ಗ್ರಾಂ ಚಿನ್ನ, 5 ಕೆಜಿ 312 ಗ್ರಾಂ ಬೆಳ್ಳಿ ಪದಾರ್ಥ, 57 ವಿವಿಧ ಬಗೆಯ ವಾಹನಗಳು ಸೇರಿದಂತೆ ಒಟ್ಟು 2,96,36,000 ಮೌಲ್ಯದ ಚಿನ್ನಾಭರಣ ಹಾಗೂ 10,03,000 ನಗದು ಸೇರಿದಂತೆ ಇತರೆ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು. ಛಾಮರಾಜನಗರ ಮೂಲಕ ಕಳ್ಳ ಮಂಜ ಎಂಬಾತ ಕೇವಲ ದೇವಸ್ಥಾನವನ್ನು ಮಾತ್ರ ಗುರಿಯಾಗಿಸಿಕೊಂಡಿದ್ದ. ಆತನ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈತ ಕುವೆಂಪುನಗರ ರಾಘವೇಂದ್ರಸ್ವಾಮಿ ಮಠ ಸೇರಿದಂತೆ ಎರಡು ದೇವಾಲಯಗಳಲ್ಲಿ ಕಳ್ಳತನ ಮಾಡಿದ್ದ, ಹುಂಡಿ, ದೇವರ ತಾಳಿ ಮತ್ತಿತರ ಆಭರಣಗಳನ್ನು ಕಳವು ಮಾಡಿ ಸಿಕ್ಕಿ ಬಿದ್ದಿದ್ದಾನೆ.

ಪಾಲಿಟೆಕ್ನಿಕ್ ಒಂದರಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಲ್ಯಾಬ್ ಟೆಕ್ನಿಷಿಯನ್ ಹಾಗೂ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬ ತಮ್ಮ ಮನೆಯ ಸಮೀಪದ ವಿಧವೆಯೊಬ್ಬರನ್ನು ಪರಿಚಯ ಮಾಡಿಕೊಂಡು ಅವರು ಮನೆಯಲ್ಲಿ ಇಲ್ಲದ ವೇಳೆ ಕಿಟಕಿ ಮುರಿದು ಕಳವು ಮಾಡಿದ್ದ. ಈತನಿಂದ 25.08 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ ಎಂದರು. ನಗರದಲ್ಲಿ ರೌಡಿ ಚಟುವಟಿಕೆ ನಿಯಂತ್ರಣದಲ್ಲಿಡುವ ಸಂಬಂಧ ವಿದ್ಯಾರಣ್ಯಪುರಂ ಠಾಣಾ ವ್ಯಾಪ್ತಿಯ ಜನತಾ ಬಡಾವಣೆ ನಿವಾಸಿ ರೌಡಿ ಪಿ. ಗಣೇಶ್ (25) ವಿರುದ್ಧ ಗೂಂಡಾ ಕಾಯ್ದೆಯಲ್ಲಿ ಬಂಧನದ ಆದೇಶ ಹೊರಡಿಸಿರುವುದಾಗಿ ಹೇಳಿದರು.

2026ನೇ ಸಾಲಿನಲ್ಲಿ 22 ಎನ್‌ಡಿಪಿಎಸ್ ಕಾಯ್ದೆಯ ಪ್ರಕರಣಗಳನ್ನು ದಾಖಲಿಸಲಾಗಿದ್ದು, ಈ ಪೈಕಿ 30 ಕೆಜಿ 250 ಗ್ರಾಂ ಗಾಂಜಾ ಮತ್ತು 311 ಗ್ರಾಂ 579 ಮಿಲಿಗ್ರಾಂ ಸಿಂಥೆಟಿಕ್ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ನಗರದ ಕೇಂದ್ರೀಯ ಬಸ್ ನಿಲ್ದಾಣದ ಸಮೀಪ ಕ್ಷಣಾರ್ಧದಲ್ಲಿ ಆಟೋ ಕಳುವಾಗಿತ್ತು.



ಮೇಲ್ಸೇತುವೆ ಕಾಮಗಾರಿ ಪರಿಶೀಲಿಸಿದ ರೈಲ್ವೆ ಸಚಿವ ವಿ.ಸೋಮಣ್ಣ

ಗುಣಮಟ್ಟದ ಕಾಮಗಾರಿಗೆ ಸೂಕ್ತ ಸೂಚನೆ

• **ತಿಪಟೂರು:** ಪ್ರಾದೇಶಿಕ ರೈಲು ಮತ್ತು ರಸ್ತೆ ಮೂಲ ಸೌಕರ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ರೈಲ್ವೆ ಕಾಮಗಾರಿಯಲ್ಲಿ ಪಾರದರ್ಶಕತೆ ಹಾಗೂ ಗುಣಮಟ್ಟದಿಂದ ಕೂಡಿರುವಂತೆ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ತಾಲೂಕಿನ ಶಾರದಾ ನಗರ ಗೇಟ್‌ನ ಲೆವೆಲ್ ಕ್ರಾಸಿಂಗ್ ಸಂಖ್ಯೆ 86 ಹಾಗೂ ಹೊನ್ನವಳ್ಳಿ ಗೇಟ್‌ನ ಲೆವೆಲ್ ಕ್ರಾಸಿಂಗ್ ಸಂಖ್ಯೆ 88ರ ಬದಲಿಗೆ ನಿರ್ಮಾಣಗೊಳ್ಳುತ್ತಿರುವ ಮೇಲ್ಸೇತುವೆ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾತನಾಡಿ, ಲೆವೆಲ್ ಕ್ರಾಸಿಂಗ್ ಸಂಖ್ಯೆ 86 ಶಾರದಾ ನಗರ ಗೇಟ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಮೇಲ್ಸೇತುವೆಗೆ ಅಂದಾಜು 89.32 ಕೋಟಿ ರೂ. ವೆಚ್ಚ ನಿಗದಿಯಾಗಿದೆ. ಇದು ಚಿಕ್ಕನಾಯಕನಹಳ್ಳಿ, ಹಾಸನ ರೈಲು ಮಾರ್ಗದ ಸಂಪರ್ಕ ಸುಧಾರಿಸಲು ನೆರವಾಗಲಿದೆಂದರು. ಲೆವೆಲ್ ಕ್ರಾಸಿಂಗ್ ಸಂಖ್ಯೆ 88 ಬಿದರೆಗುಡಿಯ ಹೊನ್ನವಳ್ಳಿ ಗೇಟ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಮೇಲ್ಸೇತುವೆಗೆ ರೂಪಾಯಿ 29.74 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಈ ಮೇಲ್ಸೇತುವೆ ಹೊನ್ನವಳ್ಳಿ, ಕೊನೆಹಳ್ಳಿ ಮತ್ತು ತಿಪಟೂರಿನ ನಡುವೆ ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸಿ, ವಾಹನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವಲ್ಲಿ ಸಹಾಯಕವಾಗಲಿದೆಂದು ತಿಳಿಸಿದರು. ಈ ಯೋಜನೆಗಳು ಪ್ರಯಾಣಿಕರ ಸುರಕ್ಷತೆಯನ್ನು ಹೆಚ್ಚಿಸಿ, ಅಡೆತಡೆರಹಿತಸಂಚಾರಕ್ಕೆಅನುಕೂಲಕಲ್ಪಿಸಲಿದ್ದು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡಲಿವೆ. ರೈಲ್ವೆ ಮೂಲಸೌಕರ್ಯವನ್ನು ಆಧುನೀಕರಿಸುವುದು ಮತ್ತು ಜನರ ದೀರ್ಘಕಾಲದ ಬೇಡಿಕೆಗಳಿಗೆ ಸ್ಪಂದಿಸುವುದು ಸರ್ಕಾರದ ಬದ್ಧತೆಯಾಗಿದೆ ಎಂದರು. ಜೆಡಿಎಸ್ ಮುಖಂಡ ಕೆ.ಟಿ.ಶಾಂತಕುಮಾರ್, ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್. ಉಪವಿಭಾಗಧಿಕಾರಿ ಸಪ್ತಶ್ರೀ.ಬಿ.ಕೆ, ರಾಮ್ ಮೋಹನ್, ಶಶಿಕಿರಣ್, ಸಂಗಮೇಶ್, ಲಿಂಗರಾಜು, ಪ್ರಸನ್ನಕುಮಾರ್, ತರಕಾರಿ ಗಂಗಾಧರ್, ಪ್ರಕಾಶ್‌ಹುಣಸೇಘಟ್ಟ, ಜಕ್ಕನಹಳ್ಳಿ ಲಿಂಗರಾಜು, ವಿಶ್ವದೀಪು ಇತರರಿದ್ದರು.



ಹಾರ್ಡ್‌ವೇರ್ ಗೋದಾಮಿಗೆ ಬೆಂಕಿ: ಅಪಾರ ನಷ್ಟ

- ಅಗ್ನಿಶಾಮಕ ಸಿಬ್ಬಂದಿ ಸೇರಿ ಆರು ಮಂದಿಗೆ ಗಾಯ
- ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅವಘಡ
- ಎರಡು ಗಂಟೆ ಕಾಲ 12 ಅಗ್ನಿಶಾಮಕಗಳಿಂದ ಕಾರ್ಯಾಚರಣೆ

• **ಬೆಂಗಳೂರು:** ಜನನಿಬಿಡ ಪ್ರದೇಶವಾದ ಚಿಕ್ಕಪೇಟೆ ವ್ಯಾಪ್ತಿಯ ಕುಂಬಾರಪೇಟೆಯಲ್ಲಿ ಹಾರ್ಡ್‌ವೇರ್ ಗೋದಾಮೊಂದಕ್ಕೆ ಆಕಸ್ಮಿಕ ಬೆಂಕಿ ತಗುಲಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಅಗ್ನಿಗಾಹುತಿಯಾಗಿವೆ. ಅದೃಷ್ಟವಶಾತ್ ಈ ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಗುರುವಾರ ಮಧ್ಯಾಹ್ನ ಗೋದಾಮಿನಲ್ಲಿ ಕಾಣಿಸಿಕೊಂಡ ಬೆಂಕಿ ಕ್ಷಣಾರ್ಧದಲ್ಲಿ ಅಕ್ಕಪಕ್ಕದ ಅಂಗಡಿಗಳಿಗೂ ವ್ಯಾಪಿಸಿದೆ. ಕಟ್ಟಡದಿಂದ ದಟ್ಟವಾದ ಹೊಗೆ ಬರುತ್ತಿರುವುದನ್ನು ಗಮನಿಸಿದ ಸ್ಥಳೀಯರು ತಕ್ಷಣ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ಗೋದಾಮಿನಲ್ಲಿದ್ದ ಪ್ಲಾಸ್ಟಿಕ್ ವಸ್ತುಗಳು, ಹಾರ್ಡ್ ವೇರ್ ಸಾಮಗ್ರಿ ಹಾಗೂ ಡೆಕೋರೇಷನ್ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿದ್ದ ಕಾರಣ ಬೆಂಕಿ ತೀವ್ರವಾಗಿ ಹರಡಿತು. ಸ್ಥಳಕ್ಕೆ ಧಾವಿಸಿದ 12 ಅಗ್ನಿಶಾಮಕ ವಾಹನಗಳು ಸತತ ಎರಡು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಹತೋಟಿಗೆ ತಂದವು.

ಗೋದಾಮಿನಲ್ಲಿ ಕಿಟಕಿಗಳ ಕೊರತೆ ಹಾಗೂ ದಟ್ಟವಾದ ಹೊಗೆಯಿಂದಾಗಿ ಕಾರ್ಯಾಚರಣೆಗೆ ಅಡಚಣೆಯುಂಟಾಗಿತ್ತು. ಈ ಸಂದರ್ಭದಲ್ಲಿ ಅಗ್ನಿಶಾಮಕ ದಳದ ಹಾಗೂ ಸಿವಿಲ್ ಡಿಫೆನ್ಸ್ ಸಿಬ್ಬಂದಿ ಸೇರಿ ಆರು ಮಂದಿ ಗಾಯಗೊಂಡಿದ್ದು, ತಕ್ಷಣ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಮೊದಲು ಒಂದು ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತು, ಕೂಡಲೇ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಅಗ್ನಿಶಾಮಕ ದಳಕ್ಕೆ ತಿಳಿಸಿದೆವು. ಶಾರ್ಟ್ ಸರ್ಕ್ಯೂಟ್‌ನಿಂದ ಈ ಅವಘಡ ಸಂಭವಿಸಿರುವ ಶಂಕೆ ಇದೆ ಎಂದು ಕಟ್ಟಡದ ಮಾಲೀಕ ವಿನೋದ್ ತಿಳಿಸಿದ್ದಾರೆ.

ಅಗ್ನಿಶಾಮಕ ದಳದ ಅಧಿಕಾರಿ ಜಯರಾಮಯ್ಯ ಮಾತನಾಡಿ, ಸ್ಥಳೀಯರು ಮತ್ತು ಪೊಲೀಸರ ಸಹಕಾರದೊಂದಿಗೆ ಬೆಂಕಿ ನಂದಿಸಲಾಗಿದೆ. ಪ್ಲಾಸ್ಟಿಕ್ ವಸ್ತುಗಳಿಂದ ಕಾರಣ ಹೊಗೆ ಆವರಿಸಿತ್ತು, ಅವಘಡಕ್ಕೆ ನಿಖರ ಕಾರಣ ತಿಳಿಯಲು ತನಿಖೆ ನಡೆಸಲಾಗುತ್ತಿದೆ ಎಂದರು.



CHANGE OF NAME

I, **CHETANA INCHAL**, W/o. Ashwinikumar Karki, D/o Suranaik M Inchal, aged about 35 years, presently residing at Flat No. 201, Sai Sunrise Apartment, Immadihalli Main Road, Near Karimariyamma Temple, Immadihalli, Whitefield, Bangalore-560066, do hereby declare that I have changed my name from **CHETANA ASHWINIKUMAR KARKI** to **CHETANA INCHAL** pertains to me only, vide affidavit dated 24.02.2026, sworn to before Prakasha .C, Advocate & Notary, Bengaluru.

CHANGE OF NAME

I, **Mr. MOHAMMED SAAD SAIT**, S/o Mohammed Shabeer Sait, age Major, R/at No.3, Ground Floor, Standage Road, Fraser Town, Bangalore-560 005 do hereby declare that in my passport my name is mentioned as **MOHAMMED SAAD** instead of **MOHAMMED SAAD SAIT**, henceforth I shall be known and called as **MOHAMMED SAAD SAIT** for all purposes, vide affidavit dated 24th February 2026, sworn before Advocate and Notary **N. NAGAPPA** at Bangalore.

IN THE COURT OF SENIOR CIVIL JUDGE AT NELAMANGALA
O.S. NO. 348/2009

Between : Sri. Narayanappa ...**Plaintiff**
And : Sri. Venkataramanappa and Others ...**Defendants**

PAPER PUBLICATION WITH RESPECT TO DEFENDANTS NO. 4 TO 6 AND 8 TO 11

4. Smt.Jayalakshmi W/o Siddalingaiah Age not Known R/at., 28, 3rd Cross, BK Nagara, Yashavanthapura Bengaluru-560022. **5. Smt.Gangaveni** W/o Narasimhamurthy Age not Known R/at., 270, 4th East Road, ITI Colony, Bengaluru North, Bengaluru-560016, Bengaluru North Taluk, Bengaluru District-562123. **6. Sri. Ranganath. G.** S/o Late Ganagaih No. 018, NO. 240, New No. 8/2, Near manjunath Service station, Gollara paly, Bangalore North Taluk, Bangalore-560091. **8. Smt.Shobha** D/o G Krishnappa Age not Know R/at. Hogasandra Village, Beguru Road Bengaluru 560068 **9. Smt. Varalakshmi** D/o G. Krishnappa Age Not Known R/at. Hogasandra Village, Beguru Road, Bengaluru-560068. **10. Sri Punith** S/o G.Krishnappa Age Not Know R/at. Hogasandra Village, Beguru Raad, Bengaluru-560068 **11. Smt Suvarna** W/o G.Narayanappa Age Not Know R/at. 1st Cross, Manjunatha Layout, Mangarsapalya, Bengaluru 560068

Whereas, the plaintiffs had filed Partition case against Defendants With respect to the suit schedule properties are ancestral property. If defendants no 4 to 6 and 8 to 11 have any objections regarding this matter, they can appear before the court in person or through pleader on the **18/3/2026 at 11 0 Clock** before 18/03/26 Senior Civil Judge. At Nelamangala, and can rise objection and produce all the necessary documents. if any with respect to the schedule property.

SCHEDULE

Sy No.78/1 measuring 0.14 guntas
East by : Property of Chikkamahimanna
West by : Property of Chikkagalappa
North by : Property of Dasappa
South by : Government Land
Sy.No.78/3 measuring 0.23 guntas
East by : Government Land
West by : Property of Thoti Inam Land
North by : Property of Venkatahanumaiah
South by : Property of Anjanappa
Sy.No.89/5 measuring 0.03 guntas
East by : Government Land
West by : Property of Anjanappa
North by : Property of Dasappa
South by : Property of Puttaswamy
Sy.No.81/2A measuring 0.27 guntas
East by : Property of Jayalakshmamma
West by : Government Khodi Halla
North by : Property of Narasimhaiah
South by : Property of Dasappa
House Property No.48/2 measuring not Known
East by : House property of Hanumanthappa
West by : House Property of Hanumanthaiah
North by : House Property of Byraiah
South by : House Property of Gangaiah
House Property No.57/1 measuring not Known
East by : House property of Arasaiah
West by : House Property of Narayanappa
North by : House Property of Kulla Arasaiah and Road
South by : House Property of Garudarangaiah
House Property No. 119/1 measuring not Known
East by : House property of Hanumanthaiah
West by : Government Road, House Property of Lakshmanna **North by** : NH-48 Road
South by : House Property of Ranganath
All the items 1 to 8 are situated at Kulavanahalli Village Thyamagondlu Hobli, Nelamangala Taluk, Bengaluru Rural District
All that part and parcel of the agricultural landed property bearing Sy No.80/1, measuring 01 acre 0.01 guntas situated at Kulavanahalli Village, Thyamagondlu Hobli, Nelamangala Taluk, bounded on: **East by** : Land of Doddahucchaiah, **West by** : Land of Gangaiah
North by : Land of Abdul saheb
South by : Land of Chikkagalappa and Dasappa
All that part and parcel of the agricultural landed property bearing Sy No.80 measuring 0.31 guntas situated at Kulavanahalli Village, Thyamagondlu Hobli, Nelamangala Taluk, bounded on: **East by** : Land of Chikkamahimanna, **West by** : Land of Byranna,
North by : Land of Usman sab,
South by : Tank bund (kere angala)
All that part and parcel of the agricultural landed property bearing Sy No. 81/2, measuring 01 acre 0.15 guntas situated at Kulavanahalli Village, Thyamagondlu Hobli, Nelamangala Taluk, bounded on:
East by : Land of Shivanna, **West by** : Government Canal, **North by** : Land of Abdul Rahaman sab
South by : Land of Rudraiah
All that part and parcel of the agricultural landed property bearing Sy.No.80/2, measuring 0.09 guntas situated at Kulavanahalli Village, Thyamagondlu Hobli, Nelamangala Taluk, bounded on:
East by : Land of Late. Dasappa (Plaintiff's father)
West by : Land of Late. Dasappa (Plaintiff's father)
North by : Land of Late. Dasappa (Plaintiff's father)
South by : Land of Late. Dasappa (Plaintiff's father)
All that part and parcel of the agricultural landed property bearing Sy.No.80/2, measuring 0.09 guntas situated at Kulavanahalli Village, Thyamagondlu Hobli, Nelamangala Taluk, bounded on: **East by** : Land of Late. Dasappa (Plaintiff's father) **West by** : Land of Late. Dasappa (Plaintiff's father) **North by** : Land of Late. Dasappa (Plaintiff's father) **South by** : Kere Angala (Tank bund)
All that part and parcel of the agricultural landed property bearing Sy.No.80/2, measuring 0.09 guntas situated at Kulavanahalli Village, Thyamagondlu Hobli, Nelamangala Taluk, bounded on: **East by** : Land of Huccheraiah, **West by** : Land of Sheshaiah,
North by : Land of Usman Saheb, **South by** : Remaining Land of Late. Dasappa (Plaintiff's father)
Land bearing Sy.No.80/2, measuring 0.35 guntas situated at Kulavanahalli Village, Thyamagondlu Hobli, Nelamangala Taluk, Bangalore Rural District, is having the following boundaries **East by** : Property of Erabyranna, **West by** : Property of Krishnabyranna
North by : Property of Abdul Reham
South by : Sy. No.78/1 belongs to Dasappa
Land bearing Sy.No.80/3, measuring 0.31 guntas situated at Kulavanahalli Village, Thyamagondlu Hobli, Nelamangala Taluk, Bangalore Rural District, is having the following boundaries: **East by** : Property of Chikkamahimanna, **West by** : Property of Byranna Sy.No.80/2, **North by** : Property of Abdul Reham
South by : Property of Dasanna Sy. No.78/1
Land bearing Sy.No.81/2B, measuring 01 acre 0.16 guntas situated at Kulavanahalli Village, Thyamagondlu Hobli, Nelamangala Taluk, Bangalore Rural District, is having the following boundaries:
East by : Property of Shivanna, **West by** : Khodi halla
North by : Property of Jayalakshmamma
South by : Property of Rudraiah
Given under my hand and the seal of the court, this 21/2/2026
By Order of the Court
Sd/- Sharistedar
Court of Senior Civil Judge and JMFC., Nelamangala
Shashikala A.C. Advocate
KAR.No. 173/2012
Nelamangala -562123.

BEFORE THE SOLE ARBITRATOR SHRI C R BENAKANAHALLI, DISTRICT JUDGE (Retd.) AT ARBITRATION AND CONCILIATION CENTRE-BENGALURU
AC NO.474/2025

BETWEEN: Sneha Sampath, represented by her Power of Attorney Holder, Mr. Sampath. V ...**CLAIMANT**
AND: M/S JABM One source Pvt Ltd., And another's ...**RESPONDENTS**

SUMMONS TO THE RESPONDENTS

M/s. JABM One source Pvt Ltd., 2nd Main Road, Nila Investment Layout, Bettadasanapura, Electronic City Phase I, Bengaluru- 560100, represented by its Managing Director Sunil Mora Shivaji Rao and also R/o No.254/195/28, 2nd Main, "Basavan Sannidhi" Achi Ashwad-2, neeladri Layout, Doddathoguru Road, Bangalore-560100, and C/o Flat B-118, Doddathoguru main road, Prim city apartment, Electronic City, Doddathogur, Bangalore.

Take notice/summons that the petitioner have filed the above petition against you, forthwith vacate and hand over vacant possession of the schedule property to the claimant and pay the rent amount and arrears. And such other relief's as this Hon'ble arbitration center in the case.

Hence you are hereby directed to present before this Hon'ble Court on **13/03/2026 at 02.30 PM**, personally or through a pleader duly instructed by you, failing which the matter will be heard in your absence, placing you ex-parte.

Given under my hand and seal of the Court on this 24/02/2026 at Bangalore.

By order of the Court, Section Officer, Arbitration and Conciliation Centre- Bengaluru

Advocate for Claimant: **ADJ PARTNERS**
Office At Ground Floor, Old No-12/2, Surveyor Road New No-38, Mrk Road, Lalbagh West Gate, Basavanagudi, BEGALURU 560 004. Mob.No. 9731797380.
E-mail Id: Abhineeta@gmail.com

PUBLIC NOTICE

TO WHOMSOEVER MAY CONCERN

This is to confirm that, on behalf of our client **Mr. Pathi Ravi Kumar**, R/at Vayu Block Flat No.207, Vayu Block, My Home Nava Dweepa, Near Hitex City, Madhapura Village, Ranga Reddy District, Telangana State-500081 mentioning loss of the following sale deed viz,

1. Deed of Sale dated 08/07/1994, registered as document No.1853/1994-95

In respect of all that piece and parcel of property bearing Sy.No.55/3, measuring 18 Guntas situated at Addevishwanathapura Village, Hesaragatta Hobli, Bangalore North Taluk.

And till today I have not received any claim or objections for the said Public Notice.

SNR ASSOCIATES, Advocates,
Flat No.402, Fourth Floor, "Samaikyaa's K.K.Veni Plaza" B.Narayanapura, White Field Main Road, Bangalore- 560 016.
E-mail: snrassociatesadvocates@gmail.com.
Date: 20/02/2026
Owner Ph:9866699471.
Advocate Mob: 9740951235.

IN THE COURT OF THE PRL CIVIL JUDGE AND JMFC AT ANEKAL
C.Misc. No.2116/2025

BETWEEN : 1. Sri.Narayanappa S/o Late Seekapapaiah Aged about 65 years **2. Sri. Rajappa** S/o Late Seekapapaiah Aged about 60 years **3. Sri.Krishnappa** S/o Late Seekapapaiah Aged about 48 years All are R/at Indlavadi Village, Kasaba Hobli, Anekal Taluk, Bangalore District :**Petitioner**

AND : The Tahasildhar Anekal Taluk. :**Respondent.**

PAPER PUBLICATION

Whereas the petitioners have filed the above petition for seeking the death certificate of petitioners grandfather namely Doddamunidasappa S/o Late Muniswamappa who was died on 06-03-1975 at Indlavadi Village, Kasaba Hobli, Anekal Taluk, Bangalore District before the Prl Civil Judge and JMFC at Anekal, whereas the above petition is fixed for hearing date, **25/03/2026 at 11.00 AM** if anybody interest in this matter regard to appear in this court in pergrandfatherally or by a pleader to file objections to the same of you failing which the petition will be disposed on enquiry.

Given under my hand and seal of the Court on this 24th day of February 2026

By Order of the Court
Sd/- Sharistadar
Civil Judge Junior Division and JMFC Court , Anekal
Advocate for Petitioners
Sri. Jyotheesh. M, Sri. Panduranga. C
Office at STB Complex, Attiebele Main Road, Anekal Town, Anekal Taluk, Bangalore District

IN THE COURT OF 1ST ADDITIONAL JUNIOR CIVIL JUDGE AND J.M.F.C. AT MAGADI
Crl.Mis.No. 2/2026

PETITIONER: Sri. Aklin Ur Rahman, S/o Late Fazlur Rahman Saheb, aged about 53 years, R/at Hosalaya village, Thippasandra hobli, Magadi Taluk, Ramanagara district New Bengaluru South district. -V/s-

RESPONDENTS: 1. The Thasildar, Department of Birth & Death, Magadi Taluk, Magadi, Ramanagara district. **2. Smt.Arshad Unnisa** W/o Late Jameel Ahmed, aged about 75 years, R/at Yallappa Street, Krumbigal road cross, Basavanagudi, Bengaluru- 560 004. **3. Smt. Mohamed Arif Ur Rahaman**, S/o Fazalur Rahaman, aged about 71 years, R/at No.301, 9th Cross, 1st Stage, Pillanna garden Bengaluru-560084. **4. Sri. Athik Ur Rahaman**, S/o Fazalur Rahaman, aged about 71 years, R/at No.3505/A, 3rd Cross, Sahtamyaban Mohalla, Mandya Town & District.

PUBLIC NOTICE

WHEREAS, the petitioner above named has filed the above petition against the Respondents for obtaining the death certificate of petitioner's Paternal Aunt **Smt.Sufiya bi @ Sufiyabiyamma** W/o Gafar Sab who died on 14/08/1983 before the Hon'ble 1st Additional Junior Civil Judge J.M.F.C. at Magadi.

AND WHEREAS the above case is fixed for hearing of **02/04/2026 at 11:00 A.M.** before the 1st Additional Junior Civil Judge and J.M.F.C. at Magadi, you are here by summoned who are interested in this regard to appear in this Court in personally or pleader to file objection the same. If you failing which are petitioner will be disposed on enquiry.

Given under my hand and seal of the Court on this 23/02/2026.

By order of the Court, Sheristadar, Civil Judge & JMFC Court, Magadi

Sri. Lakshmi Prasad.S, Advocate
Near Sri Shanmukhathma temple & Civil Court Complex, Magadi Town, Ramanagara District.

IN THE COURT OF THE IX ADDL DISTRICT AND SESSION JUDGE BANGALORE RURAL DISTRICT AT BANGALORE
R.A No. 48/2024

BETWEEN : **Sri. Chinnagundu** S/o Late Subbiah Aged about 54 years, R/at No.96, Bovi Colony, Sonia Gandhi Layout, Kurimandi Block, Kesare, Mysore, Karnataka - 570007 ...**APPELLANT**
AND : Smt. Jayalakshmi @ Jayamma & Ors. ...**RESPONDENTS**

NOTICES TO RESPONDENTS No.14, 17 to 21:

14. Smt. Jayalakshmi, D/o. Late Murthy, W/o S.V. Mahesh, Aged about 42 years, R/at No.20, 1st Cross, Venkatappa Layout, Sanjayanagar Post, Bangalore 560090 **17. Smt. Ramya**, D/o Late Muniraju, Aged about 33 years, R/at: Kenermangala Village, Nangli Post, Mulbagal Taluk, Kolar District- 563132 **18. Sri. K.N. Govinda Raju**, S/o K.V.Nallaiah, Aged about 65 years, R/at: No.25, 3rd Floor, "Kousthumbha Nilaya", 10th"A" Cross, Virupakshapura, Kodigihalli, Bangalore-560078 **19. Sri V.M. Krishnamurthy**, S/o Late V Muniswamy Naidu, Aged about 57 years, R/at 1st Floor, R.K. Commercial Complex, Behind R.M. Nagar Police Station, Hoysala Nagara, Ramamurthy Nagar, Bangalore 560016. **20. Smt.T.R.Bhanuprabha** W/o V.M. Krishna murthy, Aged about 55 years, R/at 1st Floor, R.K. Commercial Complex, Behind R.M. Nagar Police Station, Hoysala Nagara, Ramamurthy Nagar, Bangalore 560016 **21. Sri. Doddagundu Nagaraj**, S/o Late Subbaiah, Aged about 55 years, R/at: H.No.17 of Angadi Ramaiah Rama Mandini Road, 17th Cross, Hulimavu, Bangalore-560076.

Whereas the Appellant has preferred to file a Regular Appeal against the Judgment and Decree dated 12.03.2024, passed by the II Addl. Senior Civil Judge and JMFC, Bangalore Rural District, passed in O.S. No. 1083/2017 Bangalore East Taluk, Bangalore and bounded on the

SCHEDULE

East by : Gomal Land Presently Road,
West by : Private Land,
North by : Maragondanahalli Road,
South by : Naidu Land.

Notice is hereby given to you to appear before this Hon'ble Court either in person or through counsel duly instructed in the above case on **28.03.2026**, in case you intend to contest the above Regular Appeal. If you fail to appear, the same will be dealt with, heard, and decided in your absence.

Given under my hand and the seal of this Court, this 19th day of February 2026.

By Order of the Court
Chief Administrative Officer
District & Session Court
Bangalore Rural District Bangalore
M/S JOSE SABASTIAN & ASSOCIATES ADVOCATES
Off: #5, Silver Glade, 1st Floor, Wellington Street, Richmond Town, Bangalore-560025 Mob: 9448088020, 9481811215. Email ID: jsa.advocates@gmail.com

IN THE COURT OF THE IV ADDL DISTRICT AND SESSION JUDGE AT DODBALLAPUR
P& S.C. No10038/2025

BETWEEN: Smt. Puspalatha W/o L Nagaraj Aged about 36 years, R/at Thannirahalli Adakavala, Bhaktharahalli Bangalore Rural 561204 ...**PETITIONER**
AND NIL **RESPONDENT**

SERVICE OF SUMMONS IN THE FORM OF PUBLIC NOTICE BY PAPER PUBLICATION:

Whereas the petitioner has preferred the above petition seeking for probate in respect of the last Will dated 22.02.2024 executed by the testator of the same by name Smt Doddakka W/o late Lakkahanumaiah, in respect of property bearing sy no.8 located in chigaranahalli village Doddabelavangala Hobli, Doddaballapura Taluk Bangalore Rurual district.

If any person has got any objection in issuing probate in my name they can file their objection to the same on 2 day of April Month 2026.

Given under my hand and seal of the Court on day of this the 24th day of February 2025.

SCHEDULE PROPERTY

Item No 1:- All the piece and parcel of the land bearing Sy No. 8 located in Chigaranahalli village Doddabelavangala Hobli Doddaballapura Taluk Bangalore Rurual district measuring 30 guntas out of 1 Acre 20 untas bounded as follows :-EAST BY: Land of Hanumanthappa. WEST BY: Nelamangala border. NORTH BY: Govt SOUTH BY land of late lakshmisha

By order of the Court,
Chief Ministerial Officer, District & Session Court District And at Doddaballapura
Address of Counsel for Plaintiff:
V.RAJAIAH, ADVOCATE, No.25, Praveen Mansion, Ist Floor, 5th Main, Gandhinagar, Bengaluru 560009.

IN THE COURT OF THE PRL CIVIL AND JMFC, BENGALURU RURAL DISTRICT, AT HOSKOTE
O.S. No. 436/2024

BETWEEN : Mr. Chand Pasha. ...**Plaintiff**
AND : M/s Total Solutions Building Materials Company Repl. by its partners Sri Aamir Ahmed & another ...**Defendant**

NOTICE TO DEFENDANTS NO.1 & 2 BY WAY OF PAPER PUBLICATION

D1- Sri.Aamir Ahmed S/o Habeeb Ahmed Aged about 55 Years, R/at No.318/5, 3rd Cross, Babu lane Cross, DhargaMohalla, Old Madaras Road, Bengaluru-560016
D2- Sri.MusheerKahan S/o Sattar Khan Aged about 63 Years, R/at No.36, 11th Cross, 20th Main, BTM 1st Stage, Bengaluru-560068

WHEREAS the plaintiff filed the above suit for the Permanent Injuction and other relief in the respect of the Suit Schedule Property and in the above said case the suit summon was sent RPAD and through the court came as person left the address.

You are here by instructed or summoned to appear before this Hon'ble Court in person are by a pleader on the day **9/4/2026 at about 11.00 AM** to answer the same, failing which the matter will be heard Ex-Parate.

SCHEDULE PROPERTY

All that piece and parcel of immovable property being vacant land converted into Non-Agricultural Industrial Purpose vide office Memorandum No. A.L.N. (H.O) S.R. 130/2004-05, Dated: 27-10-2004, measuring 0-20 Guntas in extent in old 116 New Survey No. 116/2 Present GramaPanchayath Vide Serial No. and janjar No. 69 (sixty nine) Survey No. and Property No. 116 (One Hundred and Sixteen) measuring 0-20 (Twenty) Guntas. Situated at Ekarajapura Village, Sulibele, Habli, Hoskote Taluk, Bangalore Rural District and bounded on the:-**East by** : Road,
West by : Belongs to Ramakrishnappa Land,
North by : Remaining Property of this Survey No 116/2. **South by** : Road and Ashwathappa Land,

Given under my hand and the seal of the court this 24th day of February 2026.

By Order of the Court
Sd/- Sharistedar
Civil Judge & JMFC., Hosakote
Address for Service.
VANITHA DEVI V Advocate
No. 1096/4, 20th Cross, 21st Main,
A Block, Sahakarnagar, Bengaluru -560092

IN THE COURT OF THE HON'BLE DEPUTY COMMISSIONER AT TUMAKURU
R.A 242/2025

APPELLANT : Ningamma -V/s-
RESPONDENT : Devaraju and others

ಆಸ್ತಿಯ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ & ಇಎಂಡಿ ಮೊತ್ತ
ಐಟಂ ನಂ.1: ... ಮುನಿಸಿಪಲ್ ಖಾತಾ ನಂ.3303, ನಿವೇಶನ ನಂ.12, ಪಿಐಡಿ ನಂ.83306, ... ಭೂಮಿ ಸರ್ವೆ ನಂ.12/1ಎ, ರಂಗಾಪುರ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿದೆ), ರಂಗಾಪುರ ಎಕ್ಸ್‌ಟೆನ್ಷನ್, ವಾರ್ಡ್ ನಂ.1, ತುಮಕೂರಿನಲ್ಲಿದೆ, ಪೂರ್ವದಿಂದ ಪಶ್ಚಿಮಕ್ಕೆ (31 + 24)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (40 + 40)/2 ಅಡಿ, ಖಾಲಿ ನಿವೇಶನಗಳ ಚಕ್ಕುಬಂದಿ: ಪೂರ್ವಕ್ಕೆ ನಿವೇಶನ ನಂ.10 & 13, ಪಶ್ಚಿಮಕ್ಕೆ ಪಾರ್ಕ್ ಜಾಗ, ಉತ್ತರಕ್ಕೆ 9 ಮೀಟರ್ ಅಗಲದ ರಸ್ತೆ, ದಕ್ಷಿಣಕ್ಕೆ 9 ಮೀಟರ್ ಅಗಲದ ರಸ್ತೆ. ಐಟಂ ನಂ.2: ... ಖಾಲಿ ನಿವೇಶನ ನಂ.70, ಮುನಿಸಿಪಲ್ ಖಾತಾ ನಂ.6135, (ಮೊದಲನೇ ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ದೇವರಾಯಪಟ್ಟಣ ಗ್ರಾಮ ಸರ್ವೆ ನಂ.41/1, 41/2, 41/3, 41/4 ಮತ್ತು 42/4, ಒಟ್ಟು 6-34 ಗುಂಟೆ Alienation ...), ದೇವರಾಯಪಟ್ಟಣ ಎಕ್ಸ್‌ಟೆನ್ಷನ್, ವಾರ್ಡ್ ನಂ.35, ತುಮಕೂರಿನಲ್ಲಿದೆ, ... ಪೂರ್ವದಿಂದ ಪಶ್ಚಿಮಕ್ಕೆ : 50 ಅಡಿ, ಉತ್ತರದಿಂದ ದಕ್ಷಿಣಕ್ಕೆ : 30 ಅಡಿ ... ಪಶ್ಚಿಮಕ್ಕೆ ನಿವೇಶನ ನಂ.79, ಉತ್ತರಕ್ಕೆ ನಿವೇಶನ ನಂ.69, ದಕ್ಷಿಣಕ್ಕೆ ನಿವೇಶನ ನಂ.71. ಐಟಂ ನಂ.3: ... ಖಾಲಿ ನಿವೇಶನ ನಂ.79, ಮುನಿಸಿಪಲ್ ಖಾತಾ ನಂ.6136, ... ಸರ್ವೆ ನಂ.41/1, 41/2, 41/3, 41/4 ಮತ್ತು 42/4, ಒಟ್ಟು 6-34 ಗುಂಟೆ Alienation ... ದೇವರಾಯಪಟ್ಟಣ ಎಕ್ಸ್‌ಟೆನ್ಷನ್, ವಾರ್ಡ್ ನಂ.35, ತುಮಕೂರಿನಲ್ಲಿದೆ, ... ಪೂರ್ವದಿಂದ ಪಶ್ಚಿಮಕ್ಕೆ : 50 ಅಡಿ, ಉತ್ತರದಿಂದ ದಕ್ಷಿಣಕ್ಕೆ : 30 ಅಡಿ ... ಪೂರ್ವಕ್ಕೆ ನಿವೇಶನ ನಂ.70, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನಿವೇಶನ ನಂ.80, ದಕ್ಷಿಣಕ್ಕೆ ನಿವೇಶನ ನಂ.81.	30/03/2026 ಬೆಳಗ್ಗೆ 11.30 ಘಂಟೆಗೆ ತುಮಕೂರು ವೀರಶೈವ ಕೋ-ಆಪರೇಟಿವ್ ಬ್ಯಾಂಕ್ ಲಿ., ಎಸ್ ಎಸ್ ಪುರಂ ಶಾಖೆ, ತುಮಕೂರು	ಮೀಸಲು ಬೆಲೆ ರೂ.1,44,80,000/- (ರೂಪಾಯಿ ಒಂದು ಕೋಟಿ ನಲವತ್ತಾಲ್ಕು ಲಕ್ಷದ ಎಂಭತ್ತು ಸಾವಿರ ಮಾತ್ರ) ಇಎಂಡಿ: ರೂ. 14,48,000/- (ರೂಪಾಯಿ ಹದಿನಾಲ್ಕು ಲಕ್ಷದ ನಲವತ್ತೆಂಟು ಸಾವಿರ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: - (1) ಟೆಂಡರ್ ಫಾರಂಗಳನ್ನು ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ., ಎಸ್ ಎಸ್ ಪುರಂ ಶಾಖೆ, ತುಮಕೂರು (ದೂರವಾಣಿ ಸಂಖ್ಯೆ 0816-2279414/ 9686114754/ 9900066754/ 9686114756) ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ... ತುಮಕೂರು ವೀರಶೈವ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಎಸ್ ಎಸ್ ಪುರಂ ಶಾಖೆ, ತುಮಕೂರು, ದಿನಾಂಕ : 27/03/2026ರೊಳಗೆ ಸಂಜೆ 4.30 ಗಂಟೆಯೊಳಗೆ ಸಲ್ಲಿಸಬೇಕು. ... (7) ... ದಿನಾಂಕ: 30/03/2026 ರಂದು ಬೆಳಗ್ಗೆ 11.30 ಗಂಟೆಗೆ ತೆರೆಯುವರು. ... (9) ... ಶೇ. 25% ... 15 ದಿನಗಳ ಒಳಗೆ ಪಾವತಿಸಬೇಕು. ... (12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (13) ... ಬೆಳಗ್ಗೆ 10.00 ಘಂಟೆಯಿಂದ ಸಂಜೆ 5.00ರವರೆಗೆ ... (14) ಆಸ್ತಿಯನ್ನು 'ಎಲ್ಲಿ ಹೇಗಿದೆಯೋ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ' ಆಧಾರದ ಮೇಲೆ ಮಾರಾಟಮಾಡಲಾಗುವುದು. ... (15) ... (16) ...

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್‌ದಾರರು ಅಧಿಕೃತ ಅಧಿಕಾರಿ, ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ., ತುಮಕೂರು ವೀರಶೈವ ಕೋ-ಆಪ್ ಬ್ಯಾಂಕ್ ಲಿಮಿಟೆಡ್, ಎಸ್ ಎಸ್ ಪುರಂ ಶಾಖೆ, ತುಮಕೂರು, ಡಾ. ಎಸ್ ರಾಧಾಕೃಷ್ಣನ್ ರಸ್ತೆ, ಎಸ್ ಎಸ್ ಪುರಂ, ತುಮಕೂರು-572102. ದೂರವಾಣಿ: 0816-2279414/ 9686114754/ 9900066754/ 9686114756) E-Mail:br.0001m@tvcbltd.com

ದಿನಾಂಕ : 25.02.2026
ಸ್ಥಳ: ತುಮಕೂರು

ಸಹಿ/- ಅಧಿಕೃತ ಅಧಿಕಾರಿ
ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ.,

ನ್ಯಾಯಾಲಯದ ಆಜ್ಞೆಯ ಮೇರೆಗೆ ಶಿರಸ್ತೇದಾರರು,
ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಪಿರಿಯಾಪಟ್ಟಣ.
ಅರ್ಜಿದಾರರ ಪರ ವಕೀಲರು : ಎಸ್.ಎಂ. ಗಿರೀಶ್ ಕುಮಾರ್, ಬಿ.ಎ.ಎಲ್.ಎಲ್.ಬಿ. ವಕೀಲರು, ಕೆಆರ್/511/12, ಎನ್.ಜೆ.ರೋಡ್, ಪಿರಿಯಾಪಟ್ಟಣ. ಮೊ : 7259826606, 8762686904.

By Order of the Court, Sheristedar, Civil Judge (Jr.Dn) and JMFC Court, Anekal

ನ್ಯಾಯಾಲಯದ ಆದೇಶದ ಮೇರೆಗೆ, ಫಿರ್ಯಾದಿಗಳ ಸಹಾಯಕ ನಿರ್ದೇಶಕರ ನ್ಯಾಯಾಲಯ, ತುಮಕೂರು ಜಿಲ್ಲೆ, ತುಮಕೂರು

By Order of the Court, Chief Ministerial Officer, Court of Prl. Civil Judge (JD) & JMFC, Kunigal.

ನಿವೃತ್ತ ಅಧಿಕಾರಿಗಳಿಗೆ ಆರೋಗ್ಯ ಭಾಗ್ಯ ಕಲ್ಪಿಸಲಿ



• **ಬೆಂಗಳೂರು:** ನಿವೃತ್ತ ನೌಕರರಿಗಾಗಿ ನಗದು ರಹಿತ ಆರೋಗ್ಯ ಭಾಗ್ಯ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಬೇಕೆಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಮನವಿ ಮಾಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಆಯೋಜಿಸಿದ್ದ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಹಾಗೂ ಹಿರಿಯ ನಾಗರಿಕರ ಸಮಸ್ಯೆ ಕುರಿತ ವಿಚಾರ ಸಂಕಿರಣ ಹಾಗೂ 75 ವರ್ಷಕ್ಕೂ ವಯೋಮಿತಿ ಮೀರಿದ ನಿವೃತ್ತ ನೌಕರರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ನಿವೃತ್ತಿ ಜೀವನಕ್ಕೆ ಎಲ್ಲದಕ್ಕಿಂತ ಮುಖ್ಯವಾದದ್ದಾಗಿದೆಂದು ತಿಳಿಸಿದರು. ಆರೋಗ್ಯ. ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಮುಂದೆ ಏನಾಗಬಹುದೋ ತಿಳಿದಿಲ್ಲ, ಪಂಜಾಬ್, ಹಿಮಾಚಲ ಪ್ರದೇಶ, ರಾಜಸ್ಥಾನ ಸೇರಿದಂತೆ

ಐಎಎಸ್ ನಿವೃತ್ತ ಅಧಿಕಾರಿ ಚಿರಂಜೀವಿ ಸಿಂಗ್ ಸರಕಾರಕ್ಕೆ ಒತ್ತಾಯ

ಕೆಲ ರಾಜ್ಯಗಳು ಹಳೆ ಪಿಂಚಣಿ ಯೋಜನೆ (ಒಪಿಎಸ್)ಯನ್ನು ಮತ್ತೆ ಅಳವಡಿಸಿಕೊಂಡಿದೆ. ಕರ್ನಾಟಕದಲ್ಲಿ ಇದು ಸಾಧ್ಯವಾಗಿಲ್ಲ, ವೈದ್ಯಕೀಯ ಮರುಪಾವತಿಯನ್ನು ಸರಳಗೊಳಿಸುವ ಜತೆಗೆ, ನಿವೃತ್ತ ನೌಕರರಿಗಾಗಿ ಆರೋಗ್ಯ ಭಾಗ್ಯ ಯೋಜನೆ ಜಾರಿಗೊಳಿಸಬೇಕು ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ, ಶಾಹೀನ್ ಗ್ರೂಪ್ ಆಫ್ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಅಬ್ದುಲ್ ಖದೀರ್, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ರಂಗೇಗೌಡ ಸೇರಿದಂತೆ ಉಪಸ್ಥಿತರಿದ್ದರು.

ಶೇ.10ರಷ್ಟು ಹೆಚ್ಚುವರಿ ಆರ್ಥಿಕ ಸಹಾಯ ನೀಡಬೇಕು

ಸರ್ಕಾರ ನಿವೃತ್ತ ನೌಕರರು ಹಾಗೂ ಕುಟುಂಬ ಪಿಂಚಣಿದಾರರಿಗಾಗಿ ನಗದು ರಹಿತ ಆರೋಗ್ಯ ಭಾಗ್ಯ ಯೋಜನೆ ಜಾರಿಗೊಳಿಸಬೇಕು. 70ರಿಂದ 80 ವರ್ಷದೊಳಗಿನ ಸರ್ಕಾರಿ ನಿವೃತ್ತ ನೌಕರರಿಗೆ ಮೂಲ ಪಿಂಚಣಿಯ ಶೇ.10ರಷ್ಟು ಹೆಚ್ಚುವರಿ ಆರ್ಥಿಕ ಸಹಾಯ ನೀಡಬೇಕು. ಜತೆಗೆ, ಹಿರಿಯ ನಾಗರಿಕರೂ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದು, ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ಸೌಲಭ್ಯವನ್ನು ರಾಜ್ಯದಲ್ಲಿಯೂ ಜಾರಿಗೊಳಿಸಬೇಕು ಎಂದು ಸಂಘದ ರಾಜ್ಯಾಧ್ಯಕ್ಷ ಡಾ. ಎಲ್.ಭೈರಪ್ಪ ಒತ್ತಾಯಿಸಿದರು.

ಮಕ್ಕಳಿಗೆ ಚುಚ್ಚುಮದ್ದು



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಬುಧವಾರ ನೆಹರೂ ತಾರಾಲಯದಲ್ಲಿ ಕುಸುಮ ಸಂಜೀವಿನಿ ಹಿಮೋಫಿಲಿಯಾ ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದು ನೀಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಜಿಎಸ್‌ಟಿ ಅಧಿಕಾರಿಗಳ ಹೆಸರಲ್ಲಿ ಸುಲಿಗೆ: ಇಬ್ಬರ ಬಂಧನ





• **ಬೆಂಗಳೂರು:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಲಾಖೆಯ ಅಧಿಕಾರಿಗಳ ಸೋಗಿನಲ್ಲಿ ಉದ್ಯಮಿಯೊಬ್ಬರನ್ನು ಬೆದರಿಸಿ ಲಕ್ಷಾಂತರ ರೂಪಾಯಿ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬನಶಂಕರಿಯ ಜಿಎಸ್‌ಟಿ ಪ್ರಧಾನ ಆಯುಕ್ತರ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದ ನಾಗರಾಜ್ ಹಾಗೂ ದಾದಾಪೀರ್ ಬಂಧಿತ ಆರೋಪಿಗಳು. ಇಲಾಖೆಯ ಒಳಗಿನ ವ್ಯವಹಾರಗಳ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ಹೊಂದಿದ್ದ ಇವರು, ಸುಲಭವಾಗಿ ಹಣ ಗಳಿಸುವ ಉದ್ದೇಶದಿಂದ ಈ ಸಂಚು ರೂಪಿಸಿದ್ದರು ಎನ್ನಲಾಗಿದೆ. ಆರೋಪಿಗಳು ತಾವೇ ಖುದ್ದಾಗಿ ಸಿಎಲ್‌ಟಿಎಸ್ ಹಾಗೂ ಇಂಟಲಿಜೆನ್ಸ್ ಅಧಿಕಾರಿಗಳ ಹೆಸರಿನಲ್ಲಿ ನಕಲಿ ಗುರುತಿನ ಚೀಟಿಗಳನ್ನು ಸಿದ್ಧಪಡಿಸಿಕೊಂಡಿದ್ದರು. ಜ.10ರಂದು ಪೀಣ್ಯದ ಗುಟ್ಕಾ ವ್ಯಾಪಾರಿಯೊಬ್ಬರ ಬಳಿ ತೆರಳಿದ್ದ ಇವರು, ದಾಳಿಯ ನಾಟಕವಾಡಿ 5 ಲಕ್ಷ ರೂ. ವಸೂಲಿ ಮಾಡಿದ್ದರು. ಇವರ ನಡವಳಿಕೆಯ ಮೇಲೆ ಅನುಮಾನಗೊಂಡ ಇಲಾಖೆಯ ನೈಜ ಅಧಿಕಾರಿಗಳು ಫೆ.17ರಂದು ಇವರು ವಾಸವಿದ್ದ ಕಚೇರಿ ಕೊಠಡಿಯ ಮೇಲೆ ದಾಳಿ ನಡೆಸಿದಾಗ ನಕಲಿ ಐಡಿ ಕಾರ್ಡ್ ಹಾಗೂ ನಕಲಿ ಸರ್ಚ್ ವಾರೆಂಟ್ ಪ್ರತಿಗಳು ಪತ್ತೆಯಾಗಿವೆ. ಕೂಡಲೇ ಎಚ್ಚೆತ್ತ ಜಿಎಸ್‌ಟಿ ಅಧಿಕಾರಿಗಳು ಬನಶಂಕರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರಿನ ಅನ್ವಯ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಸರ್ಕಾರಿ ಕಚೇರಿಯಲ್ಲೇ ಕೆಲಸ ಮಾಡುತ್ತಾ ನಕಲಿ ದಾಖಲೆ ಸೃಷ್ಟಿಸಿ ಸಾರ್ವಜನಿಕರನ್ನು ವಂಚಿಸುತ್ತಿದ್ದ ಇವರ ಜಾಲದ ಬಗ್ಗೆ ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ದ್ವಿಚಕ್ರ ವಾಹನ ಕಳವು: ವ್ಯಕ್ತಿ ಸೆರೆ

• **ಬೆಂಗಳೂರು:** ಪಾರ್ಕಿಂಗ್ ಸ್ಥಳಗಳಲ್ಲಿ ಹಾಗೂ ಮನೆ ಮುಂದೆ ನಿಲ್ಲಿಸಿದ ದ್ವಿಚಕ್ರ ವಾಹನವನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಯಲಹಂಕ ಉಪನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ಸುಮಾರು 6.65 ಲಕ್ಷ ರೂ. ಮೌಲ್ಯದ 8 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಹೆಸರಘಟ್ಟ ಹೋಬಳಿ ದೊಡ್ಡಬ್ಯಾಲಕೆರೆ ನಿವಾಸಿ ಮಂಜುನಾಥ್ (40) ಬಂಧಿತ ಆರೋಪಿ. ಜ.26 ರಂದು ಮಧ್ಯಾಹ್ನ ಮಲ್ಲಸಂದ್ರ ನಿವಾಸಿ ಅಂಜನೇಯ ಎಂಬವರು ಯಲಹಂಕ ಉಪನಗರದ ಮೆಡಿಕಲ್ ಸ್ಟೋರ್ ಮುಂದೆ ತಮ್ಮ ದ್ವಿಚಕ್ರ ವಾಹನ ನಿಲ್ಲಿಸಿ ಹೋಗಿದ್ದರು. ಸಂಜೆ ವಾಪಸ್ ಬಂದು ನೋಡಿದಾಗ ವಾಹನ ಕಳುವಾಗಿತ್ತು. ಈ ಬಗ್ಗೆ ದಾಖಲಾದ ದೂರಿನ ಅನ್ವಯ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದರು. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾವನ್ನು ಪರಿಶೀಲಿಸಿದ ಪೊಲೀಸರು ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಯನ್ನು ಸುದೀರ್ಘ ವಿಚಾರಣೆಗೆ ಒಳಪಡಿಸಿದಾಗ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು ಮಾಡಿದ್ದ ಎಂಟು ವಾಹನಗಳ ಬೆಳಕಿಗೆ ಬಂದಿವೆ. ಆರೋಪಿಯ ಬಂಧನದಿಂದ ಯಲಹಂಕ ಉಪನಗರ ಠಾಣೆಯ 3 ಪ್ರಕರಣಗಳು ಹಾಗೂ ವಿ.ವಿ ಪುರಂ ಠಾಣೆಯ 1 ಪ್ರಕರಣ ಸೇರಿದಂತೆ 4 ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತ್ಯೇಕ ಶೆಲ್ಟರ್ ನಿರ್ಮಾಣಕ್ಕೆ ಜಾಗ ಗುರುತು ಕಾರ್ಯ | ಸುಪ್ರೀಂ ಸೂಚನೆಯಂತೆ ಜಿಬಿಎ ಕ್ರಮ

ಕ್ರೂರ ಸ್ವಭಾವದ 2,500 ನಾಯಿಗಳ ಪತ್ತೆ

▸ ಮಹೇಶ್ ಹೆಗಡೆ

• **ಬೆಂಗಳೂರು:** ಬೀದಿ ನಾಯಿಗಳ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುತ್ತಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ), ಈಗ ಕ್ರೂರ ಸ್ವಭಾವದ ಬೀದಿ ನಾಯಿಗಳ ಸಮಸ್ಯೆ ನಿವಾರಿಸಲು ಮುಂದಾಗಿದೆ. ಇದುವರೆಗೆ ನಗರದಲ್ಲಿ ಕ್ರೂರ ಸ್ವಭಾವದ 2,500ಕ್ಕೂ ಬೀದಿ ನಾಯಿಗಳನ್ನು ಪತ್ತೆ ಹಚ್ಚಿರುವ ಜಿಬಿಎ, ಶೆಲ್ಟರ್ ನಿರ್ಮಾಣಕ್ಕೆ ಜಾಗ ಗುರುತಿಸುವ ಕಾರ್ಯದಲ್ಲಿ ತೊಡಗಿದೆ.

ಬೀದಿ ನಾಯಿಗಳಿಂದ ಸಾರ್ವಜನಿಕರಿಗೆ ಸಾಕಷ್ಟು ತೊಂದರೆ ಆಗುತ್ತಿದೆ. ಹೀಗಾಗಿ ಬೀದಿನಾಯಿಗಳ ನಿಯಂತ್ರಣ ಮಾಡುವಂತೆ ಸುಪ್ರೀಂಕೋರ್ಟ್ ಕೂಡ ಸೂಚನೆ ನೀಡಿತ್ತು. ಅದರಂತೆ ಜಿಬಿಎ ಕ್ರೂರ ಸ್ವಭಾವವುಳ್ಳ ನಾಯಿಗಳ ಪತ್ತೆ ಮತ್ತು ಅವುಗಳಿಗೆ ಶೆಲ್ಟರ್ ನಿರ್ಮಾಣ ಮಾಡಲು ಕೆಲವು ಜಾಗವನ್ನು ಗುರುತಿಸಿದ್ದು, ಇನ್ನೂ ಕೆಲವು ಜಾಗದ ಹುಡುಕಾಟ ನಡೆಸುತ್ತಿದೆ.

ಬೆಂಗಳೂರಿನಲ್ಲಿ ಸುಮಾರು 2.30ಲಕ್ಷಕ್ಕೂ ಅಧಿಕ ಬೀದಿನಾಯಿಗಳಿರುವ ಅಂದಾಜಿದ್ದು, ಅದರಲ್ಲಿ 2,500ಕ್ಕೂ ಹೆಚ್ಚು ಕ್ರೂರಸ್ವಭಾವವುಳ್ಳ ಬೀದಿನಾಯಿಗಳನ್ನ ಜಿಬಿಎ ಗುರುತು ಮಾಡಿದೆ. ಇವುಗಳನ್ನು ರಕ್ಷಣೆ ಮಾಡಿ ಸಾಕುವ ಉದ್ದೇಶಕ್ಕಾಗಿ ಶೆಲ್ಟರ್ ನಿರ್ಮಾಣಕ್ಕೆ 5 ಪಾಲಿಕೆ ವ್ಯಾಪ್ತಿಯಲ್ಲೂ ಜಾಗ ಹುಡುಕಾಟ ನಡೆಸುತ್ತಿದೆ. ಈಗಾಗಲೇ ನಗರದ ಭಂಗೀಪುರ, ಬೆಟ್ಟಹಳ್ಳಿ ಹಾಗೂ ಮಹದೇವಪುರ ಹೊರವಲಯದಲ್ಲಿ ಜಾಗ ಗುರುತು ಮಾಡಲಾಗಿದ್ದು, ಬೇರೆಡೆಯೂ ಸ್ಥಳದ ಹುಡುಕಾಟವನ್ನು ಜಿಬಿಎ ನಡೆಸುತ್ತಿದೆ.

> ಬೀದಿ ನಾಯಿಗಳನ್ನು ದತ್ತು ಪಡೆಯುವ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.ಎಬಿಸಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.ಬೆಂಗಳೂರಿನ ಹೊರವಲಯದ ಬಿಂಗಿಪುರ, ದಾಸರಹಳ್ಳಿ, ಯಲಹಂಕ ಮತ್ತು ದಕ್ಷಿಣ ಭಾಗದ ಕೆಲವು ಪ್ರದೇಶಗಳಲ್ಲಿ ಇದಕ್ಕಾಗಿ ಜಾಗ ಗುರುತಿಸಲಾಗಿದೆ.
> ■ ಮಹೇಶ್ವರ್ ರಾವ್, ಜಿಬಿಎ ಮುಖ್ಯ ಆಯುಕ್ತ

ಏಳು ಕೋಟಿ ರೂ.ವೆಚ್ಚದಲ್ಲಿ ಶೆಲ್ಟರ್ ನಿರ್ಮಾಣ

ಸುಮಾರು 7 ಕೋಟಿ ರೂ. ವೆಚ್ಚದಲ್ಲಿ ಶೆಲ್ಟರ್ ನಿರ್ಮಾಣಕ್ಕೆ ಜಿಬಿಎ ಮುಂದಾಗಿದೆ. ಪ್ರತಿ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಲಾಗುವ ಶೆಲ್ಟರ್‌ಗಳಲ್ಲಿ ಸರಿಸುಮಾರು 500 ರಿಂದ 600 ಕ್ರೂರ ಬೀದಿನಾಯಿಗಳ ಸಂರಕ್ಷಣೆ ಮಾಡಲು ಜಿಬಿಎ ಚಿಂತನೆ ನಡೆಸಿದೆ. ಈ ಕ್ರೂರ ಸ್ವಭಾವವುಳ್ಳ ನಾಯಿಗಳ ಉಪಚಾರವನ್ನು ಸಂಪೂರ್ಣವಾಗಿ ಜಿಬಿಎ ನೋಡಿಕೊಳ್ಳಲಿದೆ. ಅವುಗಳಿಗೆ ಬೇಕಾದ ಆಹಾರ, ರೇಬಿಸ್ ಇಂಜೆಕ್ಷನ್, ಸಂತಾನಹರಣ ಚಿಕಿತ್ಸೆ ಸೇರಿದಂತೆ ಪ್ರತಿಯೊಂದನ್ನು ಜಿಬಿಎ ನಿರ್ವಹಿಸಲಿದೆ.



ಉತ್ತರ ಪಾಲಿಕೆಯಲ್ಲಿ ಉತ್ತಮ ನಿರ್ವಹಣೆ

ಬೀದಿ ನಾಯಿಗಳಿಗೆ ಸಂಬಂಧಿಸಿದಂತೆ ನಿರ್ವಹಣೆ ಕಾರ್ಯದಲ್ಲಿ ಉಳಿದೆಲ್ಲ ಪಾಲಿಕೆಗಳಿಗಿಂತ ಬೆಂಗಳೂರು ಉತ್ತರ ನಗರ ಪಾಲಿಕೆ ಉತ್ತಮ ಕೆಲಸ ಮಾಡುತ್ತಿದ್ದು, ಬೀದಿನಾಯಿಗಳಿಗೆ ಆಹಾರ ನೀಡಲು 70 ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿ ಸೂಚನಾ ಫಲಕಗಳ ಅಳವಡಿಕೆ ಮಾಡುತ್ತಿದೆ. ಜೊತೆಗೆ ಅನಿಮಲ್ ಬರ್ತ್ ಕಂಟ್ರೋಲ್(ಎಬಿಸಿ) ಕಾಯ್ದೆ 2023 ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಬೀದಿ ನಾಯಿಗಳನ್ನು ಮಾನವೀಯ ರೀತಿಯಲ್ಲಿ ಹಿಡಿದು ಅರ್ಹ ಪಶುವೈದ್ಯರಿಂದ ಶಸ್ತ್ರಚಿಕಿತ್ಸೆ ಹಾಗೂ ರೇಬೀಸ್ ಲಸಿಕೆ ನೀಡಲಾಗುತ್ತಿದೆ. ಶಸ್ತ್ರಚಿಕಿತ್ಸೆಯ ನಂತರ ಅಗತ್ಯವಾದ ಆರೈಕೆ ಮಾಡಿ ಹಿಡಿದ ಮೂಲ ಸ್ಥಳದಲ್ಲಿಯೇ ಮರುಬಿಡುಗಡೆ ಮಾಡಲಾಗುತ್ತಿದೆ ಎಂದು ಉತ್ತರ ಪಾಲಿಕೆ ತಿಳಿಸಿದೆ.

ಬೀದಿ ನಾಯಿಗಳಿಗೆ ಆಹಾರ ನೀಡಲು ಮಾರ್ಗಸೂಚಿ

- ಆಹಾರವನ್ನು ಗುರುತಿಸಿದ ಸ್ಥಳದಲ್ಲೇ ನೀಡಬೇಕು
- ಮುಖ್ಯ ರಸ್ತೆ, ಆಸ್ಪತ್ರೆ, ಶಾಲೆ ಹಾಗೂ ಜನಸಂದಣಿ ಪ್ರದೇಶದಲ್ಲಿ ನೀಡಬಾರದು
- ಆಹಾರ ನೀಡಿದ ನಂತರ ಸ್ಥಳವನ್ನು ಸ್ವಚ್ಛವಾಗಿಡುವುದು ಆಹಾರ ನೀಡುವವರ ಜವಾಬ್ದಾರಿ
- ನಾಯಿಗಳಿಗೆ ಹಾನಿ ಮಾಡುವುದು ಅಥವಾ ಕಿರುಕುಳ ನೀಡುವುದು ಕಾನೂನುಬಾಹಿರ
- ಸಾರ್ವಜನಿಕ ಸುರಕ್ಷತೆ ಕಾಪಾಡುವಂತೆ ಶಿಸ್ತಿನಿಂದ ಆಹಾರ ನೀಡಬೇಕು



> ಶಸ್ತ್ರಚಿಕಿತ್ಸೆಯಾಗಿ ಕಿವಿಯಲ್ಲಿ ಗುರುತು ಹೊಂದಿರುವ ಬೀದಿ ನಾಯಿಗಳನ್ನು ಯಾವುದೇ ಕಾರಣಕ್ಕೂ ಸ್ಥಳಾಂತರ ಮಾಡಬಾರದು. ಇಂತಹ ನಾಯಿಗಳಿಗೆ ಹಾನಿ ಮಾಡುವುದು ಅಥವಾ ಬೇರೆ ಸ್ಥಳಕ್ಕೆ ಕೊಂಡೊಯ್ಯುವುದು ಕಾನೂನುಬಾಹಿರವಾಗಿದೆ. ನಾಗರಿಕರು ಸಹಕರಿಸಬೇಕು.
> ■ ಪಿ.ಸುನೀಲ್ ಕುಮಾರ್, ಉತ್ತರ ಪಾಲಿಕೆ ಆಯುಕ್ತ

ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್‌ಗೆ ಬೆಂಬಲ

• **ಬೆಂಗಳೂರು:** ಯುವಕರಿಗೆ ಉದ್ಯೋಗಾವಕಾಶ ಮತ್ತು ಡಿಜಿಟಲ್ ಕೌಶಲಗಳೊಂದಿಗೆ ಸಜ್ಜುಗೊಳಿಸಲು, ಸ್ಪರ್ಧಾತ್ಮಕ ಮತ್ತು ಹೆಚ್ಚುತ್ತಿರುವ ಡಿಜಿಟಲ್ ಆರ್ಥಿಕತೆಯಲ್ಲಿ ಯಶಸ್ವಿಯಾಗಲು ಸಹಾಯ ಮಾಡಲು ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್‌ಗೆ ಭಾರತದಲ್ಲಿ ಅಮೇರಿಕನ್ ಎಕ್ಸ್‌ಪ್ರೆಸ್ ಬೆಂಬಲ ನೀಡಿದೆ.

2024-25ರ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲಾದ ಮೂರು ವರ್ಷಗಳ ಪಾಲುದಾರಿಕೆಯ ಮೂಲಕ, ಬೆಂಗಳೂರು ಮತ್ತು ದೆಹಲಿ ಎನ್‌ಸಿಆರ್ ಸೇರಿದಂತೆ ಸುಮಾರು 3,000 ಯುವಕರನ್ನು ಉದ್ಯಮ-ಸಂಬಂಧಿತ ತಾಂತ್ರಿಕ ಸಾಮರ್ಥ್ಯಗಳು ಮತ್ತು ಅಗತ್ಯ ಜೀವನ ಕೌಶಲಗಳೊಂದಿಗೆ ಸಬಲೀಕರಣಗೊಳಿಸುವ ಗುರಿಯನ್ನು ಈ ಉಪಕ್ರಮ ಹೊಂದಿದೆ. ಪಾಲುದಾರಿಕೆಯ ಮೊದಲ ವರ್ಷದ ಕಾರ್ಯಕ್ರಮದಲ್ಲಿ ಬಲಿಷ್ಠ ತರಬೇತಿ ಪೂರ್ಣಗೊಳಿಸುವಿಕೆ ದರಗಳು, ಉದ್ಯೋಗ ನಿಯೋಜನೆಗಳು ಮತ್ತು ಉದ್ಯೋಗ ಧಾರಣ ಸೇರಿದಂತೆ ಪ್ರೋತ್ಸಾಹದಾಯಕ ಫಲಿತಾಂಶಗಳನ್ನು ಪ್ರದರ್ಶಿಸಿದೆ.



ಮಾತಿನ ಮನೆ 124ನೇ ಕಾರ್ಯಕ್ರಮದಲ್ಲಿ ವಾಗ್ಮಿ, ನಿರ್ದೇಶಕ ಎಸ್.ಎನ್.ಸೇತುರಾಂ ಭಾಗಿಯಾಗಿ ವ್ಯಕ್ತಿ-ವ್ಯಕ್ತಿತ್ವದ ಕುರಿತಾಗಿ ಮಾತನಾಡಿದರು. ಮಾತಿನ ಮನೆಯ ರಾ.ಸು.ವೆಂಕಟೇಶ್, ರಾಧಾ ಕೇಶವ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಗರ ಪಾಲಿಕೆ ವಶಕ್ಕೆ ಆರ್.ಡಿ ಸ್ವತ್ತು

• **ಬೆಂಗಳೂರು:** ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಐಟಿಪಿಎಲ್ ಮುಖ್ಯರಸ್ತೆಯನ್ನು ಪರಿಷ್ಕೃತ ಮಹಾಯೋಜನೆ-2015 ರಂತೆ 150 ಅಡಿ ಅಗಲದ ರಸ್ತೆ ಅಗಲೀಕರಣಕ್ಕಾಗಿ ಮೀಸಲಿರಿಸಿದ್ದ ಆರ್.ಡಿ ಸ್ವತ್ತನ್ನು ನಗರ ಪಾಲಿಕೆ ವಶಕ್ಕೆ ಪಡೆಯಲಾಯಿತೆಂದು ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ವಶಕ್ಕೆ ಪಡೆಯಲಾದ ಸ್ವತ್ತುಗಳ ವಿವರ: ರೆಗುಲಾಸ್ ಡೆವೆಲಪರ್(ಎಚ್.ಎಸ್.ಬಿ.ಸಿ ಬ್ಯಾಂಕ್) ಐಟಿಪಿಎಲ್ ಮುಖ್ಯರಸ್ತೆ, ಸುಮಾರು 500.28 ಚದರ ಮೀಟರ್ ಸ್ವತ್ತು. ಎಲಿಗಂಟ್ ಪ್ರಾಪರ್ಟೀಸ್ (ಓಝೋನ್ ಐಕಾನ್) ಐಟಿಪಿಎಲ್ ಮುಖ್ಯರಸ್ತೆ, ಸುಮಾರು 606.23 ಚದರ ಮೀಟರ್ ಸ್ವತ್ತು.ಟ್ರೆಫೆಕ್ಸ್ ಡೆವೆಲಪರ್ ಐಟಿಪಿಎಲ್ ಮುಖ್ಯರಸ್ತೆ, ಸುಮಾರು 601.00 ಚದರ ಮೀಟರ್ ಸ್ವತ್ತು ಸೇರಿದಂತೆ ಒಟ್ಟಾರೆ 1707.51 ಚದರ ಮೀಟರ್ ಆರ್.ಡಿ.ಸ್ವತ್ತುಗಳನ್ನು ನಗರ ಪಾಲಿಕೆ ವಶಕ್ಕೆ ಪಡೆಯಲಾಗಿದೆ. ವಶಕ್ಕೆ ಪಡೆದ ಸ್ವತ್ತುಗಳನ್ನು ರಸ್ತೆ ಅಗಲೀಕರಣಕ್ಕೆ ಕಾಯ್ದಿರಿಸಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಜಾಗತಿಕ ಎಂಜಿನಿಯರಿಂಗ್ ಸೊಸೈಟಿ



• **ಬೆಂಗಳೂರು:** ಎಎಸ್‌ಎಂಇ ಲಾಭರಹಿತ, ಸದಸ್ಯರಿಂದ ನಡೆಯುವ ಜಾಗತಿಕ ಎಂಜಿನಿಯರಿಂಗ್ ಸೊಸೈಟಿಯಾಗಿದೆ. ಕೈಗಾರಿಕೆಗೆ ಪ್ರಸ್ತುತವಾದ ಕಲಿಕೆ ಮತ್ತು ಜವಾಬ್ದಾರಿಯುತ ಆವಿಷ್ಕಾರ ಉತ್ತೇಜಿಸಲು ಬದ್ಧವಾಗಿದೆ ಎಂದು ಎಎಸ್‌ಎಂಇ ಇಂಡಿಯಾ ಪ್ರೈವೇಟ್ ಲಿ. ಅಧ್ಯಕ್ಷ ಮಧುಕರ್ ಶರ್ಮಾ ಅಭಿಪ್ರಾಯಪಟ್ಟರು.ಮೆಕ್ಯಾನಿಕಲ್ ಎಂಜಿನಿಯರಿಂಗ್ ಸಮಿಟ್ ಭಾಗವಾಗಿ ರೇವಾ ಯೂನಿವರ್ಸಿಟಿಯಲ್ಲಿ ಆಯೋಜಿಸಲಾಗಿದ್ದ, ಡ್ರೋನ್ ತಂತ್ರಜ್ಞಾನದ ಎಎಸ್‌ಎಂಇ ಎಂಜಿನಿಯರಿಂಗ್ ಶಿಕ್ಷಣ ವಿಚಾರ ಸಂಕಿರಣ ಮತ್ತು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಎಂಇಇಡಿಯಂತಹ ಉಪಕ್ರಮಗಳು ಮತ್ತು ಐಎಂಇಸಿಇ ರೀತಿಯ ಜಾಗತಿಕ ಪ್ಲಾಟ್‌ಫಾರಂಗಳು ಶಿಕ್ಷಣ ಸಂಸ್ಥೆಗಳು, ಸೆಪ್ಟೆಂಬರ್‌ನಲ್ಲಿ ಚೆನ್ನೈನಲ್ಲಿ ನಡೆಯಲಿರುವ ಎಎಸ್‌ಎಂಇ , ಐಎಂಇಸಿಇ ಇಂಡಿಯಾದ ಮುಂದಿನ ಆವೃತ್ತಿಗಾಗಿ ಎದುರು ನೋಡುತ್ತಿದ್ದೇವೆ ಎಂದರು.

ನ್ಯಾಯ ಅನ್ಯಾಯ ಆಲ್ಬಂ ಬಿಡುಗಡೆ

• **ಬೆಂಗಳೂರು:** ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ನ್ಯಾಯಾಂಗ ವ್ಯವಸ್ಥೆಯ ಪಾತ್ರ ದೊಡ್ಡದು. ಆ ವ್ಯವಸ್ಥೆಯ ಬೆನ್ನೆಲುಬಾಗಿ ನಿಂತು, ಸತ್ಯ ಮತ್ತು ನ್ಯಾಯಕ್ಕಾಗಿ ಹಗಲಿರುಳು ಶ್ರಮಿಸುವ ವಕೀಲರ ವೃತ್ತಿ ಬದುಕನ್ನು ಆಧರಿಸಿದ ವಿಶೇಷ ಹಾಡು ನ್ಯಾಯ ಅನ್ಯಾಯ ಬಿಡುಗಡೆಯಾಗಿದೆ.

ಈ ಕುರಿತು ಹಿರಿಯ ವಕೀಲರಾದ ನಾರಾಯಣಸ್ವಾಮಿ. ಜಿ ಅವರು ಮಾತನಾಡಿ, ವಕೀಲ ಎಂದರೆ ಕೇವಲ ಕಪ್ಪುಕೋಟು ಧರಿಸಿ ವಾದ ಮಾಡುವವರಲ್ಲ, ತನ್ನಮೇಲೆ ನಂಬಿಕೆ ಇಟ್ಟು ಬರುವ ಕಕ್ಷಿದಾರರಿಗೆ, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಕೊಡಿಸಲು ತನ್ನ ವೈಯಕ್ತಿಕ ಬದುಕನ್ನು ಮರೆತು, ಅಹೋರಾತ್ರಿ, ಹೋರಾಡುತ್ತಾನೆ. ವಕೀಲರ ನಿಸ್ವಾರ್ಥಸೇವೆ, ಧೈರ್ಯ ಮತ್ತು ತ್ಯಾಗವನ್ನು ಈ ಹಾಡಿನ ಮೂಲಕ ಸಮಾಜಕ್ಕೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ ಎಂದಿದ್ದಾರೆ.



ಮಹಿಳಾ ಸಂಗೀತ ಸಂಯೋಜಕಿ ಮಾನಸ ಹೊಳ್ಳ ಈ ಹಾಡಿಗೆ ಸಾಹಿತ್ಯ ಬರೆದು ಸಂಗೀತದ ಶಕ್ತಿ ತುಂಬಿದ್ದಾರೆ. ನ್ಯಾಯದ ಗಾಂಭೀರ್ಯ ಮತ್ತು ಹೋರಾಟದ ಕೆಚ್ಚು ಎರಡನ್ನೂ ಇಟ್ಟುಕೊಂಡು ರಾಗಸಂಯೋಜನೆ ಮಾಡಿದ್ದಾರೆ, ಹಾಡಿನ ಸಾಹಿತ್ಯ ಬರೆಯುವುದರ ಜತೆಗೆ ತಾವೇ ದನಿಯಾಗಿದ್ದಾರೆ. ನಿರ್ದೇಶಕರಾದ ಕರಿಬಸವ ತಡಕಲ್ ಹಾಗೂ ಜೀವನ್ ಹಳ್ಳಿಕಾರ್, ವಕೀಲರ ವೃತ್ತಿಬದುಕಿನ ಸವಾಲುಗಳನ್ನು ದೃಶ್ಯರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ.

ಏಪ್ರಿಲ್ 6ರಂದು ಅಂತಿಮ ಮತದಾರರ ಪಟ್ಟಿ ಪ್ರಕಟ

ಮತಪಟ್ಟಿ ತಯಾರಿಕೆಗೆ ಅವಧಿ ವಿಸ್ತರಣೆ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸುವ ಅವಧಿಯನ್ನು ವಿಸ್ತರಣೆ ಮಾಡಿ ರಾಜ್ಯ ಚುನಾವಣಾ ಆಯೋಗ ಆದೇಶ ಹೊರಡಿಸಿದೆ. ಏಪ್ರಿಲ್ 6ರಂದು ಅಂತಿಮ ಮತದಾರ ಪಟ್ಟಿ ಪ್ರಕಟಿಸುವುದಾಗಿ ತಿಳಿಸಿದೆ.

ಜ. 1ರಂದು ಪ್ರಕಟಿಸಲಾದ ಕರಡು ಮತದಾರರ ಪಟ್ಟಿಯ ಕುರಿತು ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರಿಂದ ಹಲವಾರು ದೂರುಗಳು ಬಂದ ಹಿನ್ನೆಲೆಯಲ್ಲಿ ನಿಯಮಾನುಸಾರ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಅಲ್ಲದೆ, ಕರಡು ಮತದಾರರ ಪಟ್ಟಿಯನುಸಾರ ವಾರ್ಡ್‌ವಾರು ವಿಂಗಡಣೆಗೊಂಡಿರುವ ವಿಧಾನಸಭಾಕ್ಷೇತ್ರದ ಮತಗಟ್ಟೆಗಳ ಪ್ರದೇಶ ಮತ್ತು ಮತದಾರರನ್ನು ಭೌತಿಕವಾಗಿ ಪರಿಶೀಲನೆ ಮಾಡಿದಾಗ ಕೆಲವು ಪ್ರದೇಶಗಳಲ್ಲಿ ಮತದಾರರ ವಿವರಗಳು ಅದಲು-ಬದಲು ಆಗಿದ್ದು, ಭೌಗೋಳಿಕವಾಗಿ ಒಂದು ವಾರ್ಡಿನಲ್ಲಿ ವಾಸವಾಗಿರುವ ಮತದಾರರು ಮತ್ತೊಂದು ವಾರ್ಡಿನ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದು ಹಾಗೂ ಮತಗಟ್ಟೆಗಳ ಕೊಠಡಿ ಸಂಖ್ಯೆಗಳು ನಮೂದಿಸುವಲ್ಲಿ ತಪ್ಪುಗಳಾಗಿದ್ದು, ಸದರಿ ಲೋಪದೋಷಗಳನ್ನು ಸರಿಪಡಿಸಲು ಅವಕಾಶ ನೀಡಲಾಗಿದೆ.



ಮತಪಟ್ಟಿ ಪರಿಷ್ಕರಣೆ ದಿನಾಂಕ

- ಫೆ.25 ರಿಂದ ಮಾ.1- ಮುದ್ರಕರು ಮ್ಯಾಟ್ರಿಕ್ಸ್ ನಂತೆ ಇ-ರೋಲ್ ಜನರೇಟ್ ಮಾಡುವುದು
- ಮಾ.2 ರಿಂದ ಮಾ.8- ವಾರ್ಡ್‌ವಾರು ಪರಿಷ್ಕೃತ ಕರಡು ಮತದಾರರ ಪಟ್ಟಿಯ ಮುದ್ರಣ
- ಮಾ.9- ಪರಿಷ್ಕೃತ ಕರಡು ಮತದಾರರ ಪಟ್ಟಿ ಪ್ರಕಟಿಸುವುದು
- ಮಾ.10 ರಿಂದ ಮಾ.16 ರವರೆಗೆ ಆಕ್ಷೇಪಣೆ ಮತ್ತು ದೂರು ಸಲ್ಲಿಸಲು ಅವಕಾಶ
- ★ ಮಾ. 17 ರಿಂದ ಮಾ.18 ವರೆಗೆ ತಿದ್ದುಪಡಿ ಇದ್ದಲ್ಲಿ ಸೇರಿಸಲು ಅವಕಾಶ
- ಮಾ.20 ರಿಂದ ಮಾ.22 ವರೆಗೆ ಬದಲಾವಣೆ ಇದ್ದಲ್ಲಿ ಮ್ಯಾಟ್ರಿಕ್ಸ್ ಸಾಫ್ಟ್‌ವೇರ್‌ನಲ್ಲಿ ಕಾಲೋಚಿತಗೊಳಿಸುವುದು
- ಮಾ.23 ರಿಂದ ಮಾ.27 ವರೆಗೆ ಮುದ್ರಕರು ಅಂತಿಮ ಮತದಾರರ ಪಟ್ಟಿಯ ಇ-ರೋಲ ಜನರೇಟ್ ಮಾಡುವುದು
- ಮಾ.28 ರಿಂದ ಏ.4 ರ ವರೆಗೆ ವಾರ್ಡ್‌ವಾರು ಅಂತಿಮ ಮತದಾರರ ಪಟ್ಟಿಯ ಮುದ್ರಣ
- ಏ.6-ಅಂತಿಮ ಮತದಾರರ ಪಟ್ಟಿಯ ಪ್ರಕಟಣೆ

ಕಸಾಪದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಪ್ರಕರಣ

ವಿಚಾರಣೆವರೆಗೆ ಕ್ರಮ ಬೇಡ

• **ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ (ಕಸಾಪ) ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಕಸಾಪ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ಅವರ ವಿರುದ್ಧ ತಳೆಯುವ ಯಾವುದೇ ನಿಲುವನ್ನು ಮುಂದಿನ ವಿಚಾರಣೆವರೆಗೆ ಜಾರಿಗೊಳಿಸಬಾರದು ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಬುಧವಾರ ನಿರ್ದೇಶಿಸಿದೆ.

ಕಸಾಪದಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿ ಜಾರಿ ಮಾಡಿರುವ ಶೋಕಾಸ್ ನೋಟಿಸ್ ಪ್ರಶ್ನಿಸಿ ಕಸಾಪ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ಅರ್ಜಿಯನ್ನು ನ್ಯಾ.ಬಿ.ಎಂ.ಶ್ಯಾಮ್ ಪ್ರಸಾದ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು ಎಲ್ಲಾ ವಿಚಾರಗಳನ್ನು ಪರಿಗಣಿಸಲಾಗಿದ್ದು, ಮುಂದಿನ ವಿಚಾರಣೆಯವರೆಗೆ ಜೋಶಿ ವಿರುದ್ಧ ಕೈಗೊಳ್ಳುವ ಕ್ರಮವನ್ನು ಜಾರಿಗೊಳಿಸಕೂಡದು ಎಂದು ಸರ್ಕಾರಕ್ಕೆ ನಿರ್ದೇಶಿಸಿತು. ಮೇಲ್ನೋಟಕ್ಕೆ ಆಡಳಿತಾಧಿಕಾರಿಯು ಶೋಕಾಸ್ ನೋಟಿಸ್ ನೀಡುವ ಅಧಿಕಾರ ವ್ಯಾಪ್ತಿ ಹೊಂದಿರುವುದನ್ನು ಸಮರ್ಥಿಸಿದ್ದಾರೆಯೇ ಎಂಬ ಪ್ರಶ್ನೆ ಇದೆ. ಪಕ್ಷಕಾರರ ವಾದ ಆಲಿಸಿ ಇದನ್ನು ನಿರ್ಧರಿಸಲಾಗುವುದು ಎಂದೂ ನ್ಯಾಯಾಲಯ ಆದೇಶಿಸಿದೆ.

ಮಹೇಶ್ ಜೋಶಿ ಅವರು ಆಡಳಿತಾಧಿಕಾರಿಯ ಶೋಕಾಸ್ ನೋಟಿಸ್‌ಗೆ ಉತ್ತರಿಸಬೇಕಿದೆ. ಈಗಾಗಲೇ ಪ್ರತಿಕ್ರಿಯೆ ಸಲ್ಲಿಸುವ ಕಾಲಾವಧಿಯೂ ಮುಗಿದಿದ್ದರೂ ಸಕಾರಣವಾದ ಸಮಯವನ್ನು ಜೋಶಿ ಅವರಿಗೆ ಪ್ರತಿಕ್ರಿಯೆ ಸಲ್ಲಿಸಲು ನೀಡಬೇಕಿದ್ದು, ಮಾ.2ರ ಒಳಗೆ ಜೋಶಿ ಅವರು ಶೋಕಾಸ್ ನೋಟಿಸ್‌ಗೆ ಉತ್ತರಿಸಬೇಕು ಎಂದು ನಿರ್ದೇಶಿಸಿದೆ.

ಜೋಶಿ ಪರ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್ ಅವರು ಆಡಳಿತಾಧಿಕಾರಿಯು ಪರಿಷತ್‌ನ ಪದಾಧಿಕಾರಿಗಳ ವಿರುದ್ಧ ದಂಡನೀಯ ಕ್ರಮಕೈಗೊಳ್ಳುವ ಅಧಿಕಾರ ಹೊಂದಿಲ್ಲ ಎಂದರು. ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಅವರು ಸಹಕಾರ ಸಂಘಗಳ ನಿಬಂಧಕರನ್ನು ಪ್ರತಿವಾದಿ ಮಾಡಿಲ್ಲವಾದ್ದರಿಂದ ಅರ್ಜಿಯು ಊರ್ಜಿತವಾಗುವುದಿಲ್ಲ, ಆಡಳಿತಾಧಿಕಾರಿಯ ಅವಧಿಯು 2025ರ ಡಿ.29 ಅಥವಾ ವರದಿ ಆಧರಿಸಿ ಕ್ರಮಕೈಗೊಳ್ಳುವವರೆಗೆ ಇದೆ.

ಇಂದು ನಗರದಲ್ಲಿ...

- ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಮಾರಂಭ
- ಸ್ಥಳ: ಜವಾಹರ್‌ಲಾಲ್ ನೆಹರು ತಾರಾಲಯ
- ಬೆಳಗ್ಗೆ 11.00

- ಬಾಲಯೋಗಿ ಸಾಯಿ ಮಂಜುನಾಥ್ ಮಹಾರಾಜ್ ಶ್ರೀಗಳ 27ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ
- ಸ್ಥಳ: ಬನಶಂಕರಿ ದೇವಸ್ಥಾನ ಆವರಣ, ಕನಕಪುರ ರಸ್ತೆ
- ಬೆಳಗ್ಗೆ 11.23

- ರಾಷ್ಟ್ರಕವಿ ಕುವೆಂಪು ನಾಟಕೋತ್ಸವ
- ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ
- ಸಂಜೆ 6

- ಹೊನ್ನಾರು ರಂಗೋತ್ಸವ: ಜೋಕುಮಾರಸ್ವಾಮಿ ನಾಟಕ ಪ್ರದರ್ಶನ
- ಸ್ಥಳ: ರವೀಂದ್ರ ಕಲಾಕ್ಷೇತ್ರ
- ಸಂಜೆ 6.30

ವಿಂಡೀಸ್ vs ಆಫ್ರಿಕಾ | ಎರಡನೇ ಪಂದ್ಯದಲ್ಲಿ ಭಾರತ–ಜಿಂಬಾಬ್ವೆ ಪಂದ್ಯಾಟ

ಭಾರತ ಸೆಮಿ ನಿರ್ಧಾರ ಇಂದು

• **ಚೆನ್ನೈ:** ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಸೆಮಿಫೈನಲ್‌ಗೇರುವುದನ್ನು ನಿರ್ಧರಿಸುವ ಎರಡು ಪ್ರಮುಖ ವಿಂಡೀಸ್-ದ.ಆಫ್ರಿಕಾ, ಭಾರತ-ಜಿಂಬಾಬ್ವೆ ಪಂದ್ಯಗಳು ಗುರುವಾರದಂದು ನಡೆಯಲಿವೆ.

ಸೂಪರ್-8ರ ಪಂದ್ಯಗಳು ಭಾರೀ ಸಂಚಲನ ಮೂಡಿಸುತ್ತಿವೆ. ಎರಡನೇ ಗುಂಪಿನಲ್ಲಿ ಇಂಗ್ಲೆಂಡ್ ಈಗಾಗಲೇ ಸೆಮಿಗೇರಿದೆ. ಇನ್ನು ಮೊದಲನೇ ಗುಂಪಿನಲ್ಲಿ ದ.ಆಫ್ರಿಕಾ ಮತ್ತು ವಿಂಡೀಸ್ ತಂಡಗಳು ತಲಾ ಒಂದು ಗೆಲುವಿನೊಂದಿಗೆ ಉತ್ತಮ ರನ್‌ರೇಟ್ ಕೂಡ ಹೊಂದಿದ್ದು ಮೊದಲೆರಡು ಸ್ಥಾನಗಳಲ್ಲಿ ಕಾಣಿಸಿಕೊಂಡಿವೆ. ಹೀಗಾಗಿ ಭಾರತಕ್ಕೆ ತನ್ನ ಪಂದ್ಯಕ್ಕಿಂತ ದ.ಆಫ್ರಿಕಾ–ವಿಂಡೀಸ್ ಪಂದ್ಯವೇ ಪ್ರಮುಖ. ಅಷ್ಟಾಗ್ಯೂ ಯಾವುದೋ ಒಂದು ಗೆಲುವು ಸೆಮಿ ಹಾದಿ ತೋರಿಸುವುದಿಲ್ಲ, ಭಾರತಕ್ಕೆ ಲಕ್ ಜತೆಗೆ ಪರಿಶ್ರಮದ ಅಗತ್ಯವಿದೆ.

ಭಾರತಕ್ಕಿದು ಕೊನೆಯ ಅವಕಾಶ: ಲೀಗ್ ಹಂತದ ಪಂದ್ಯಗಳಲ್ಲಿ ಅಜೇಯ ಓಟ ಮುಂದುವರಿಸಿದ್ದ ಭಾರತ ಟಾಪ್ ತಂಡವಾಗಿ ಬಂದಿತ್ತು. ನಾಲ್ಕು ಗೆಲುವುಗಳನ್ನು ಜೇಬಿನಲ್ಲಿಟ್ಟುಕೊಂಡು ಬಂದಿದ್ದ ಭಾರತಕ್ಕೆ ದ.ಆಫ್ರಿಕಾ ಹೀನಾಯವಾಗಿ ಸೋಲಿಸಿದೆ. ಪರಿಣಾಮ ಭಾರತಕ್ಕೆ ಇದು ಕೊನೆಯ ಅವಕಾಶವಾಗಿದೆ. ಸೂಪರ್–8ರ ಮೊದಲೆರಡು ತಂಡಗಳು ಮಾತ್ರ ಮುನ್ನಡೆ ಸಾಧಿಸುತ್ತವೆ. ಪರಿಣಾಮ ಭಾರತ ಒಂದು ವೇಳೆ ಈ ಪಂದ್ಯದಲ್ಲಿ ಸೋತರೆ ಹೊರಬೀಳಲಿದೆ. ಗೆದ್ದರೂ ಅದು ಸಾಕಾಗೊಲ್ಲ.

ಲೆಕ್ಕಾಚಾರ ಹೇಗಿದೆ?: ವಿಂಡೀಸ್ ಹಾಗೂ ದ.ಆಫ್ರಿಕಾ ಪಂದ್ಯದಲ್ಲಿ ವಿಜೇತರು ಭಾರತದ ಸೆಮಿ ಹಾದಿಯನ್ನು ನಿರ್ಧರಿಸಲಿದ್ದಾರೆ. ವಿಂಡೀಸ್ ಗೆಲುವು ಸಾಧಿಸಿದರೆ, ಭಾರತದ ಅವಕಾಶ ತೀರಾ ಕುಗ್ಗಲಿದೆ. ದ.ಆಫ್ರಿಕಾ ಗೆದ್ದರೆ ಭಾರತದ ಹಾದಿ ಸರಳಗೊಳ್ಳಲಿದೆ. ಎರಡನೇ ಪಂದ್ಯದಲ್ಲಿ ಭಾರತಕ್ಕೆ ಸಾಮಾನ್ಯ ಗೆಲುವು ದಕ್ಕಿದರೆ ಅದು ಸಾಕಾಗುವುದಿಲ್ಲ, ರನ್‌ರೇಟ್ ಹೆಚ್ಚಿಸಿಕೊಳ್ಳಬೇಕಾದ ಅನಿವಾರ್ಯತೆ ಭಾರತಕ್ಕಿದೆ.



ಬ್ಯಾಟರ್ಸ್ ಲಯದ ಚಿಂತೆ

ಒತ್ತಡದ ಮಧ್ಯೆ ಭಾರತದ ಬ್ಯಾಟಿಗರು ಲಯದ ಚಿಂತೆಯಲ್ಲಿದ್ದಾರೆ. ಆರಂಭಿಕ ಆಟಗಾರ ಅಭಿಷೇಕ್ ಶರ್ಮ ಅವರ ಲಯ ದೊಡ್ಡ ಹಿನ್ನಡೆ ತಂದಿದೆ. ಮೂರನೇ ಕ್ರಮಾಂಕದಲ್ಲಿ ತಿಲಕ್ ವರ್ಮಾ ಹಲವು ಪಂದ್ಯಗಳಿಂದ ಹಿನ್ನಡೆ ಅನುಭವಿಸಿದ್ದಾರೆ. ಸೂರ್ಯ ಕೂಡ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿಲ್ಲ. ಶಿವಂ ದುಬೆ ಅವರ ಲಯ ಭಾರತಕ್ಕೆ ಶಕ್ತಿಯಾಗಿದೆ. ಹಾಂಡ್ಯ ಕೂಡ ನಿರೀಕ್ಷಿತ ಫಲಿತಾಂಶ ನೀಡಲಿಲ್ಲ. ಇನ್ನು ಬೌಲಿಂಗ್‌ನಲ್ಲಿ ಬೂಮ್ರಾ ಮತ್ತು ವರುಣ್ ಚಕ್ರವರ್ತಿ ಹೊರತುಪಡಿಸಿ ಇನ್ನುಳಿದ ಆಟಗಾರರು ಹಿನ್ನಡೆ ಅನುಭವಿಸಿದ್ದಾರೆ.

(ಭಾರತ ತಂಡದ ಲೆಕ್ಕಾಚಾರ)

ಜಿಂಬಾಬ್ವೆ ವಿರುದ್ಧ	ವಿಂಡೀಸ್ ವಿರುದ್ಧ	ಅಂತಿಮ ರನ್‌ರೇಟ್
75 ರನ್‌ಗಳಿಂದ	75 ರನ್‌ಗಳಿಂದ	+1.23
120 ರನ್‌ಗಳಿಂದ	120 ರನ್‌ಗಳಿಂದ	+2.73
ಚೇಸಿಂಗ್ 15 ಓವರ್‌ಗಳಲ್ಲಿ 175	ಚೇಸಿಂಗ್ 15 ಓವರ್‌ಗಳಲ್ಲಿ 175	+0.31
ಚೇಸಿಂಗ್ 10 ಓವರ್‌ಗಳಲ್ಲಿ 175	ಚೇಸಿಂಗ್ 10 ಓವರ್‌ಗಳಲ್ಲಿ 175	+2.63
75 ರನ್‌ಗಳ ಗೆಲುವು	ಚೇಸಿಂಗ್ 12 ಓವರ್‌ಗಳಲ್ಲಿ 175	1.33

ರನ್‌ರೇಟ್ ಲೆಕ್ಕಾಚಾರ

ಭಾರತದ ರನ್‌ರೇಟ್ ತೀರಾ ಕಮ್ಮಿಯಾಗಿದೆ, –3.8. ಹೀಗಿದ್ದಾಗ ತನಗಿಂತ ಮೇಲಿರುವ ತಂಡವನ್ನು ದಾಟಬೇಕಾದರೆ, ಭಾರತ ದೊಡ್ಡ ಗೆಲುವುಗಳನ್ನು ಸಾಧಿಸಬೇಕು. ಎರಡೂ ಪಂದ್ಯದ ಗೆಲುವುಗಳೂ ಅಷ್ಟೇ ಮುಖ್ಯವಾಗುತ್ತದೆ. ಹಾಗಿದ್ದರೆ ರನ್‌ರೇಟ್ ಭಾರತದ ರನ್ ರೇಟ್ ಏರುವುದು ಹೇಗೆ? ಯಾವ ಪಂದ್ಯವನ್ನು ಎಷ್ಟು ರನ್‌ಗಳಿಂದ ಗೆಲ್ಲಬೇಕು? ಗೆದ್ದರೆ ಅಂತಿಮದಲ್ಲಿರುವ ರನ್ ರೇಟ್ ಏನಾಗಿರುತ್ತದೆ?

ಏನಾದರೆ ಏನಾಗುತ್ತೆ?

ಮಧ್ಯಾಹ್ನ ನಡೆಯಲಿರುವ ದ.ಆಫ್ರಿಕಾ-ವಿಂಡೀಸ್ ಪಂದ್ಯದಲ್ಲಿ ದ.ಆಫ್ರಿಕಾ ಗೆದ್ದುಬಿಟ್ಟರೆ ಭಾರತಕ್ಕೆ ಅದೇ ದೊಡ್ಡ ಗೆಲುವು. ಏಕೆಂದರೆ ಇಲ್ಲಿ ಸೋತ ವಿಂಡೀಸ್, ಮುಂದೆ ಭಾರತ ವಿರುದ್ಧವೂ ಸೋತರೆ ಸೆಮಿಗೇರುವ ಅವಕಾಶ ಕೈಚೆಲ್ಲಲಿದೆ. ಅಂದರೆ, ಸೆಮಿಗೇರುವುದಕ್ಕೆ ಬೇಕಾದ 2 ಗೆಲುವುಗಳಿಲ್ಲದೆ ಹೊರಬೀಳುತ್ತೆ. ಹಾಗಾಗಬೇಕಾದರೂ ಭಾರತ ಜಿಂಬಾಬ್ವೆ ವಿರುದ್ಧ ಗೆಲ್ಲಲೇಬೇಕು. ಆಗ ಜಿಂಬಾಬ್ವೆ ಕೂಡ ಎರಡು ಸೋಲುಗಳೊಂದಿಗೆ ಹೊರನಡೆಯುತ್ತದೆ.

ವಿಂಡೀಸ್ ಗೆದ್ದರೆ?

ಒಂದು ವೇಳೆ ದ.ಆಫ್ರಿಕಾ ಸೋತುಬಿಟ್ಟರೆ, ಭಾರತ ಬಹುತೇಕ ಹೊರಬೀಳಲಿದೆ. ಏಕೆಂದರೆ ಮೊದಲೆರಡು ಸ್ಥಾನದಲ್ಲಿರುವ ತಂಡಗಳು ಭಾರೀ ರನ್‌ರೇಟ್‌ಗಳನ್ನು ಹೊಂದಿವೆ. ವಿಂಡೀಸ್ ಗೆಲುವು ಸಾಧಿಸಿದರೆ, 5ಕ್ಕಿರುವ ರನ್‌ರೇಟ್ ಹೆಚ್ಚಾಗುತ್ತದೆ. ದ.ಆಫ್ರಿಕಾ ರನ್‌ರೇಟ್ ಕಮ್ಮಿಯಾಗುತ್ತದೆ. ಹೀಗಾದರೆ ಭಾರತ ದ.ಆಫ್ರಿಕಾ ತಂಡವನ್ನು ರನ್ ರೇಟ್‌ನಲ್ಲಿ ಸೋಲಿಸುವುದಕ್ಕೆ ದೊಡ್ಡ ಗೆಲುವುಗಳನ್ನು ದಾಖಲಿಸಬೇಕಾಗುತ್ತದೆ.

ಪಿಚ್

ಚೆನ್ನೈನ ಚಿದಂಬರಂ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೌಲರ್‌ಗಳು ದೊಡ್ಡ ಪಾತ್ರ ವಹಿಸಲಿದ್ದಾರೆ. ಸಾಮಾನ್ಯವಾಗಿ ಸ್ಪಿನ್ನರ್‌ಗಳು ಉತ್ತಮವಾಗಿ ಕಾಣಿಸಿಕೊಳ್ಳುತ್ತಾರೆ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ ಇಬ್ಬನಿ ದೊಡ್ಡ ಪಾತ್ರ ವಹಿಸಲಿದೆ.

ಸೂಪರ್-8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ವಿಂಡೀಸ್	1	1	0	0	2	+5.350
ದ.ಆಫ್ರಿಕಾ	1	1	0	0	2	+3.80
ಭಾರತ	1	0	1	0	0	-3.80
ಜಿಂಬಾಬ್ವೆ	1	0	1	0	0	-5.350

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	2	2	0	0	4	+1.491
ಕಿವೀಸ್	2	1	0	1	3	+3.050
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಇಂದಿನ ಪಂದ್ಯಗಳು

ವಿಂಡೀಸ್ VS ಆಫ್ರಿಕಾ
ಮಧ್ಯಾಹ್ನ 3 (ಅಹಮದಾಬಾದ್)

ಭಾರತ VS ಜಿಂಬಾಬ್ವೆ
ಸಂಜೆ 7 (ಚೆನ್ನೈ)

ರಣಜಿ ಫೈನಲ್ | ಬೃಹತ್ ಮೊತ್ತದತ್ತ ಜಮ್ಮು–ಕಾಶ್ಮೀರ

ಕರ್ನಾಟಕ ಬೌಲರ್ಸ್ ಪರದಾಟ



• ಚಿತ್ರ : ಮಂಜುನಾಥ ಜರತಾರಘರ

ಸಂಕ್ಷಿಪ್ತ ಸ್ಕೋರ್

ಜಮ್ಮು-ಕಾಶ್ಮೀರ : 527/6 (156)
ಶುಭಂ ಸಿಂಗ್ ಪುಂಡಿರ 121 (247ಎ, 12 ಬೌ, 2 ಸಿಕ್ಸ್) ಅಬ್ದುಲ್ ಸಮದ್ 61(104 ಎ, 6 ಬೌ 1 ಸಿ), ಕನ್ನಯ್ಯ ವಾಧ್ವಾನ್ 70(109 ಎ, 9 ಬೌ), ಪಾರಸ್ ಡೋಗ್ರಾ, 70(166 ಎ, 8 ಬೌ), ಸಾಹಿಲ್ ಲೋತ್ರಾ, 57(93 ಎ, 7 ಬೌ), ಅಬಿದ್ ಮುಷ್ತಾಕ್ 20(31 ಎ, 2 ಬೌ)

ಕರ್ನಾಟಕ ಬೌಲಿಂಗ್:
ಪ್ರಸಿದ್ಧ ಕೃಷ್ಣ; 3 ವಿಕೆಟ್, 29 ಓ, 90 ರನ್)
ವಿದ್ಯಾಧರ ಪಾಟೀಲ ; 1ವಿ, 29 ಓ, 104 ರನ್) ಶ್ರೇಯಸ್ ಗೋಪಾಲ; 1 ವಿ, 30 ಓ, 130 ರನ್) ಶಿಖರ ಶೆಟ್ಟಿ; 1 ವಿ, 32 ಓ, 112 ರನ್).

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** 9ನೇ ಬಾರಿಗೆ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಕರ್ನಾಟಕ ತಂಡಕ್ಕೆ ಇದೇ ಮೊದಲ ಬಾರಿಗೆ ರಣಜಿ ಫೈನಲ್ ಪ್ರವೇಶಿಸಿರುವ ಜಮ್ಮು ಮತ್ತು ಕಾಶ್ಮೀರ ತಂಡ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದೆ.

ಎರಡನೇ ದಿನವೂ ಬ್ಯಾಟರ್ ಸ್ನೇಹಿಯಾಗಿದ್ದ ಪಿಚ್‌ನಲ್ಲಿ ಕಾಶ್ಮೀರದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕರ್ನಾಟಕದ ಕರಾರುವಾಕ್ ಬೌಲಿಂಗ್ ದಾಳಿಯನ್ನು ಲೀಲಾಜಾಲವಾಗಿ ಎದುರಿಸಿ ಬೃಹತ್ ಮೊತ್ತ ಪೇರಿಸಿದ್ದು, ಆತ್ಮವಿಶ್ವಾಸದ ಅಲೆಯಲ್ಲಿ ತೇಲುತ್ತಿದ್ದಾರೆ.

ಪಂದ್ಯದ ಎರಡನೇ ದಿನವೂ ಎದುರಾಳಿ ತಂಡದ ವಿಕೆಟ್ ಪಡೆಯಲು ಪರದಾಡಿದರು. ಆರು ವಿಕೆಟ್ ಪತನಗೊಂಡಿದ್ದರೂ ಕಾಶ್ಮೀರದ ಬಾಲಂಗೋಚಿಗಳು ಪಾರಮ್ಯ ಮೆರೆದರು.

ಮೊದಲ ದಿನದಾಟದ ಅಂತ್ಯಕ್ಕೆ 87 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 284 ರನ್ ಗಳಿಸಿದ್ದ ಅತಿಥಿ ಪಡೆ, ಎರಡನೇ ದಿನ ಇನ್ನೂ 23 ಓವರ್ ಬಾಕಿ ಇದ್ದಾಗ ಮಂದ ಬೆಳಕಿನಿಂದಾಗಿ ಆಟ ಸ್ಥಗಿತಗೊಂಡಾಗ 156 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 527 ರನ್ ಕಲೆ ಹಾಕಿದೆ. ಸಾಹಿಲ್ ಲೋತ್ರಾ, 93 ಎಸೆತಗಳಲ್ಲಿ 57, ಅಬಿದ್ ಮುಷ್ತಾಕ್ 31 ಎಸೆತಗಳಲ್ಲಿ 20 ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಎರಡನೇ ದಿನದಾಟ: ಶುಭಂ ಸಿಂಗ್ ಪುಂಡಿರ 247 ಎಸೆತಗಳಲ್ಲಿ 121ರನ್ ಗಳಿಸಿ ಔಟಾದರು. ಅವರೊಂದಿಗೆ ಕ್ರೀಸ್ ಅಜೇಯವಾಗಿ ಉಳಿದಿದ್ದ ಅಬ್ದುಲ್ ಸಮದ್ ಹಾಗೂ ಶುಭಂ ಸಿಂಗ್ ನಡುವಿನ 124 ರನ್‌ಗಳ ಜೊತೆಯಾಟ ಈ ಮೂಲಕ ಮುರಿದು ಬಿತ್ತು.

ಪ್ರಸಿದ್ಧ ಕೃಷ್ಣ ಎಸೆತದಲ್ಲಿ ಅಬ್ದುಲ್ ಸಮದ್ (61 ರನ್, 104 ಎಸೆತ) ಅವರು ವಿಕೆಟ್ ಕೀಪರ್ ಕೃತಿಕ್ ಕೃಷ್ಣ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದಾಗ ಕರ್ನಾಟಕ ಎದುರಾಳಿಗಳ ಮೊತ್ತ ಉಬ್ಬದಂತೆ ತಡೆಯಬಹುದು ಎಂಬ ಆಶಾಭಾವ ವ್ಯಕ್ತವಾಗಿತ್ತಾದರೂ, ಮೊದಲ ದಿನ ಗಾಯಗೊಂಡು ನಿವೃತ್ತರಾಗಿದ್ದ ನಾಯಕ ಪಾರಸ್ ಡೋಗ್ರಾ, (70 ರನ್ 166 ಎಸೆತ, 8 ಬೌಂಡರಿ) ಇನ್ನಿಂಗ್ಸ್ ಕಟ್ಟಿದರು. ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿರುವ ವಿಕೆಟ್ ಕೀಪರ್ ಕನ್ನಯ್ಯ ವಾಧ್ವಾನ್ (70 ರನ್, 109 ಎಸೆತ, 9 ಬೌಂಡರಿ) ನಾಯಕನಿಗೆ ಸಾಥ್ ನೀಡುವ ಮೂಲಕ ಅರ್ಧ ಶತಕ ಪೂರೈಸಿದರು.ನಂತರ ಬಂದ ಸಾಹಿಲ್ ಲೋತ್ರಾ, ಅರ್ಧ ಶತಕ ಗಳಿಸಿ ಕ್ರೀಸ್ ಉಳಿಸಿಕೊಂಡಿದ್ದಾರೆ. ಕರ್ನಾಟಕದ ಬೌಲರ್‌ಗಳು ಎರಡನೇ ದಿನ 4 ವಿಕೆಟ್ ಪಡೆದರಾದರೂ, ರನ್ ಗಳಿಕೆಯ ಅವಕಾಶವನ್ನು ನಿರಾಕರಿಸುವಲ್ಲಿ ವಿಫಲರಾದರು. ವಿಕೆಟ್ ಬೇಟೆಯಲ್ಲಿದ್ದ ನಾಯಕ ದೇವದತ್ತ ಪಡಿಕಲ್ ಪ್ರಮುಖ ಬ್ಯಾಟರ್ ಕರುಣ್ ನಾಯರ್ ಅವರಿಗೂ ಬೌಲಿಂಗ್ ಅವಕಾಶ ನೀಡಿದರಾದರೂ ಬಾಲಂಗೋಚಿಗಳನ್ನು ನಿಯಂತ್ರಿಸಲು ಆಗಲಿಲ್ಲ.

ಆಟಗಾರರ ನಡುವೆ ವಾಗ್ವಾದ

ಪಂದ್ಯದ ವೇಳೆ ಉಭಯ ತಂಡದ ಆಟಗಾರರ ನಡುವೆ ವಾಗ್ವಾದ ನಡೆದ ಪ್ರಸಂಗವೂ ಜರುಗಿದೆ. ಪ್ರಸಿದ್ಧ ಕೃಷ್ಣ ಮಾಡಿದ 101ನೇ ಓವರನಲ್ಲಿ ಜಮ್ಮು ಕಾಶ್ಮೀರ ನಾಯಕ ಡೋಗ್ರಾ, ಅವರು ಬ್ಯಾಟ್‌ಗೆ ಬಾಲ್ ಎಡ್ಜ್ ಆಗಿ ಬೌಂಡರಿ ಗೆರೆ ದಾಟುತ್ತದೆ. ಚೆಂಡು ಬೌಂಡರಿಗೆ ತಲುಪುತ್ತಿದ್ದಂತೆ, ಡೋಗ್ರಾ, ಮತ್ತು ಫಾರ್ವಡ್ ಶಾರ್ಟ್ ಲೆಗ್‌ನಲ್ಲಿ ಕ್ಷೇತ್ರರಕ್ಷಣೆ ಮಾಡುತ್ತಿದ್ದ ಬದಲಿ ಆಟಗಾರ ಅನೀಶ್ ನಡುವೆ ಮಾತಿನ ಚಕಮಕಿ ನಡೆಯುತ್ತದೆ. ಆಗ ಅನೀಶ್ ಮೇಲೆ ಡೋಗ್ರಾ, ಕೋಪಗೊಂಡು ತಲೆಗೆ ಪಂಚ್ ಮಾಡಿದರು. ಆಗ ಹಿರಿಯ ಆಟಗಾರ ಮಯಂಕ್ ಅಗರವಾಲ್ ಮಧ್ಯಪ್ರವೇಶಿಸಿ ಡೋಗ್ರಾ, ಮೇಲೆ ಏರಿ ಹೋಗುತ್ತಾರೆ. ತಕ್ಷಣ ಅಂಪೈರ್‌ಗಳು ಮಧ್ಯ ಪ್ರವೇಶಿಸಿ ನಿಯಂತ್ರಿಸುತ್ತಾರೆ.



ಕಿರುಸುದ್ದಿ

ಜರ್ಮನ್ ಓಪನ್: ಆಕರ್ಷಿ ಮುಖ್ಯ ಡ್ರಾಗೆ

• **ಹೊಸದಿಲ್ಲಿ:** ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಶಟ್ಲರ್ ಆಕರ್ಷಿ ಕಶ್ಯಪ್ ಅವರು ಚೈನೀಸ್ ತೈಪೆಯ ಲೀ ಯು ಅವರನ್ನು ಸೋಲಿಸಿ ಮಹಿಳಾ ಸಿಂಗಲ್ಸ್ ಮುಖ್ಯ ಡ್ರಾಕ್ಕೆ ಪ್ರವೇಶಿಸಿದ್ದಾರೆ. ಮಂಗಳವಾರ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 62ನೇ ಸ್ಥಾನದಲ್ಲಿರುವ ಆಕರ್ಷಿ, ಲೀ ವಿರುದ್ಧ 21–10, 21–15 ಅಂತರದಿಂದ ಸುಲಭ ಜಯ ಸಾಧಿಸಿದರು.



ಈಗ ಅವರು ಮುಖ್ಯ ಡ್ರಾದ ಮೊದಲ ಸುತ್ತಿನಲ್ಲಿ, ಮತ್ತೊಬ್ಬ ಚೈನೀಸ್ ತೈಪೆ ಆಟಗಾರ್ತಿ ಹುವಾಮಗ್ ಯು ಅವರನ್ನು ಎದುರಿಸಲಿದ್ದಾರೆ. ಮಂಗಳವಾರದ ಪಂದ್ಯದಲ್ಲಿ ಪಂದ್ಯದ ಮೊದಲ ಗೇಮ್‌ನಲ್ಲಿ ಲೀ ಉತ್ತಮ ಆರಂಭ ಮಾಡಿದರೂ 4–4 ಸಮಬಲದ ಬಳಿಕ ಆಕರ್ಷಿ ವೇಗ ಹೆಚ್ಚಿಸಿದರು. 9–4 ಹಾಗೂ 16–8ಕ್ಕೆ ಮುನ್ನಡೆ ಸಾಧಿಸಿದ ಅವರು ಮೊದಲ ಗೇಮ್ ಅನ್ನು ಸುಲಭವಾಗಿ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಲೀ 8–14 ಹಿನ್ನಡೆಯಿಂದ 12–14ಕ್ಕೆ ಹಿಂತಿರುಗಿ ಸ್ವಲ್ಪ ಪ್ರತಿರೋಧ ತೋರಿದರೂ, ಆಕರ್ಷಿ ಅವರಿಗೆ ಅವಕಾಶ ನೀಡದೇ ಪಂದ್ಯವನ್ನು ಸಮರ್ಥವಾಗಿ ಮುಕ್ತಾಯಗೊಳಿಸಿದರು. 250,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಅನುಭವಿ ಶಟ್ಲರ್ ಕಿಡಂಬಿ ಶ್ರೀಕಾಂತ್ ಹಾಗೂ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್ ಬೆಳ್ಳಿ ಪದಕ ವಿಜೇತೆ ತನ್ವಿ ಶರ್ಮ ಕೂಡ ಭಾರತದ ಪರ ಸ್ಪರ್ಧಿಸುತ್ತಿದ್ದಾರೆ.

ಜಿಂಬಾಬ್ವೆ ಪಂದ್ಯಕ್ಕೆ ತಂಡದಲ್ಲಿ ಬದಲಾವಣೆ?

• **ಚೆನ್ನೈ:** ಗೆಲ್ಲಲೇಬೇಕಾಗಿರುವ ಪಂದ್ಯದಲ್ಲಿ ಭಾರತ ತಂಡದಲ್ಲಿ ಬದಲಾವಣೆಗಳಾಗಬಹುದು ಎಂದು ಭಾರತ ತಂಡದ ಬ್ಯಾಟಿಂಗ್ ಕೋಚ್ ಸಿತಾಂಶು ಕೋಟಕ್ ಸುಳಿವು ನೀಡಿದ್ದಾರೆ. ದ.ಆಫ್ರಿಕಾ ವಿರುದ್ಧ ಭಾರೀ ಸೋಲು ಕಂಡಿರುವ ಭಾರತ ವಿಶ್ವಕಪ್‌ನಿಂದಲೇ ಹೊರಬೀಳುವ ಆತಂಕದಲ್ಲಿದೆ. ಹೀಗಿರುವಾಗ ಜಿಂಬಾಬ್ವೆ ತಂಡವನ್ನು ಎದುರಿಸಲಿದೆ. ಇದಕ್ಕೂ ಮುನ್ನ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ಅವರು, ತಂಡದ 3 ಆರಂಭಿಕರು ಎಡಗೈ ಆಟಗಾರರೇ ಆಗಿರುವುದು ದೊಡ್ಡ ವಿಷಯವೇನಲ್ಲ, ಆದಾಗ್ಯೂ ಮುಂದಿನ ಪಂದ್ಯದಲ್ಲಿ ಬದಲಾವಣೆಗಳಾಗಬಹುದು ಎಂದಿದ್ದಾರೆ. ಎಲ್ಲಾ ಪಂದ್ಯಗಳನ್ನು ನಾವು ಗೆಲ್ಲಲೇಬೇಕಾದ ಸ್ಥಿತಿಯಲ್ಲಿದ್ದೇವೆ. ಹೀಗಿರುವಾಗ ಎಲ್ಲ ವಿಭಾಗಗಳಲ್ಲೂ ನಾವು ಉತ್ತಮ ಪ್ರದರ್ಶನ ನೀಡಬೇಕು. ಟಿ20 ಕ್ರಿಕೆಟ್ ಅಂದರೆ ಹಾಗೆ, ನಾವು ಇಲ್ಲಿ ಎಲ್ಲ ಓವರ್‌ಗಳಲ್ಲೂ ಸ್ಫೋಟಕ ಬ್ಯಾಟಿಂಗ್ ಮಾಡುವ ಆಯ್ಕೆ ಮಾಡಲಾಗದು. ವಿಕೆಟ್ ಬಿದ್ದ ತಕ್ಷಣ ನಾವು ನಿಯಂತ್ರಿಸಲು ರನ್ ವೇಗ ಕುಗ್ಗಿಸಬೇಕಾಗುತ್ತದೆ ಎಂದರು.

ಕಿವೀಸ್‌ಗೆ ಗೆಲುವು, ಲಂಕಾ ಹೊರಕ್ಕೆ

• **ಕೊಲಂಬೋ:** ಸ್ಯಾಂಟ್ನರ್ ಅವರ ಸೋಲರಿಯದ ಮನಸ್ಥಿತಿ ಮತ್ತು ರಚಿನ್ ರವೀಂದ್ರ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಶ್ರೀಲಂಕಾ ತಂಡವು ವಿಶ್ವಕಪ್ ಪಂದ್ಯಾವಳಿಯ ಸೂಪರ್–8ರ ಪಂದ್ಯದಲ್ಲಿ ಸತತ ಎರಡನೇ ಸೋಲನುಭವಿಸಿ ಪಂದ್ಯಾವಳಿಯಿಂದ ಹೊರನಡೆಯಿತು.

ಮೊದಲ ಪಂದ್ಯ ರದ್ದಾದ ನಂತರ ಎರಡನೇ ಪಂದ್ಯದಲ್ಲಿ ಲಂಕಾ ತಂಡವನ್ನು ಎದುರಿಸಿದ್ದ ಕಿವೀಸ್ ಬ್ಯಾಟಿಂಗ್‌ಗಿಳಿದು ಆಘಾತ ಎದುರಿಸಿತು. ಆದಾಗ್ಯೂ ಸ್ಯಾಂಟ್ನರ್ ಸೇರಿದಂತೆ ಮಧ್ಯಮ ಕ್ರಮಾಂಕಿತ ಬ್ಯಾಟರ್‌ಗಳು ಉತ್ತಮ ಪ್ರದರ್ಶನ ನೀಡಿದ ನಂತರ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 168 ರನ್ ಗಳಿಸಿತು. ಗುರಿ ಬೆನ್ನತ್ತಿದ ಶ್ರೀಲಂಕಾ 8 ವಿಕೆಟ್ ಕಳೆದುಕೊಂಡು 107 ರನ್ ಗಳಿಸಿತು. ಸ್ಯಾಂಟ್ನರ್ ಗೆಲುವಿನ ರೂವಾರಿ ಎನಿಸಿಕೊಂಡರು. ರಚಿನ್ ರವೀಂದ್ರ, ಪಂದ್ಯದ ಹೀರೋ ಎನಿಸಿದ್ದಲ್ಲದೆ ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಈ ಗೆಲುವಿನೊಂದಿಗೆ 3 ಅಂಕ ಗಳಿಸಿರುವ ಕಿವೀಸ್ ಸೆಮಿಗೆ ಬಹುತೇಕ ತಲುಪಿದಂತಿದೆ. ಶ್ರೀಲಂಕಾ ಹೊರಬಿದ್ದಿದೆ. ಪಾಕ್‌ಗೆ ಸೆಮಿ ಅವಕಾಶ ಪಡೆಯಲು ಶ್ರೀಲಂಕಾದೊಂದಿಗೆ ಅಸಾಮಾನ್ಯ ಗೆಲುವು ಸಾಧಿಸಬೇಕಿದೆ.

ರಚಿನ್ ದಾಳಿಗೆ ತತ್ತರಿಸಿದ ಲಂಕಾ: ಗುರಿ ಬೆನ್ನತ್ತುವಾಗ ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ರಚಿನ್ ರವೀಂದ್ರ, ಮಾರಕ ಬೌಲಿಂಗ್ ದಾಳಿಯೊಂದಿಗೆ ಲಂಕಾ ಪಡೆಯ ಹೆಡೆಮುರಿ ಕಟ್ಟಿದರು. ಕಮಿಂದು ಮೆಂಡೀಸ್, ದುನಿತ್ ಬಿಟ್ಟರೆ ಬೇರ್‍ಯಾವ ಆಟಗಾರರೂ 10ರ ಗಡಿ ದಾಟಲಾಗಲಿಲ್ಲ, ರವೀಂದ್ರ 4 ಓವರ್‌ಗಳಲ್ಲಿ 27 ರನ್ ನೀಡಿ 4 ವಿಕೆಟ್ ಕಿತ್ತರು.

ಸ್ಯಾಂಟ್ನರ್ ಆಸರೆ: ಫಿನ್ ಅಲೆನ್ ಆಟದೊಂದಿಗೆ ಸ್ಫೋಟಕ ಆರಂಭ ಪಡೆದರೂ ನ್ಯೂಜಿಲೆಂಡ್ ಆರಂಭಿಕ ಸೀಫರ್ಟ್ ವಿಕೆಟ್ ಕಳೆದುಕೊಂಡು ಹಿನ್ನಡೆ ಅನುಭವಿಸಿತ್ತು. ಮೂರನೇ ಕ್ರಮಾಂಕದಲ್ಲಿ ರಚಿನ್ ಕೊಂಚ ಹೊತ್ತು ಆಸರೆಯಾದರು.

ಅಲೆನ್ 23 ರನ್‌ಗೆ ವಿಕೆಟ್ ಒಪ್ಪಿಸಿದರು. ಫಿಲಿಪ್ಸ್ ಹೆಚ್ಚಿನ ಕೊಡುಗೆ ನೀಡಲಿಲ್ಲ. ಮಿಚೆಲ್ ಮತ್ತು ಚಾಂಪಮನ್ ಜವಾಬ್ದಾರಿ ಮರೆತರು. ಇಷ್ಟೊಂದು ಆಘಾತ ಎದುರಿಸಿ ಹಿನ್ನಡೆ ಅನುಭವಿಸಿದ್ದ ನ್ಯೂಜಿಲೆಂಡ್‌ಗೆ ನಾಯಕ ಸ್ಯಾಂಟ್ನರ್ ಆಸರೆಯಾದರು. ಕೋಲ್ ಅವರೊಂದಿಗೆ ಜೊತೆಗೂಡಿ ಉತ್ತಮ ಬ್ಯಾಟಿಂಗ್ ಮಾಡಿದ ಅವರು, 26 ಬಾಲ್‌ಗಳಲ್ಲಿ 4 ಸಿಕ್ಸರ್ ಹಾಗೂ 2 ಬೌಂಡರಿಗಳೊಂದಿಗೆ 47 ರನ್ ಚಚ್ಚಿದರು. ಅವರಿಗೆ ಸಾಥ್ ನೀಡಿದ ಕೋಲ್ 23 ಬಾಲ್‌ಗಳಲ್ಲಿ ಔಟಾಗದೆ 31 ರನ್‌ಗಳಿಸಿದರು. ಶ್ರೀಲಂಕಾ ಪರ ತೀಕ್ಷಣ ಮತ್ತು ಚಮೀರಾ ತಲಾ 3 ವಿಕೆಟ್ ಪಡೆದರು.

ಎಫ್‌ಐಎಚ್ ಹಾಕಿ: ಕೊನೆಗೂ ಗೆದ್ದ ಭಾರತ

• **ಹೊಸದಿಲ್ಲಿ:** ಎಫ್‌ಐಎಚ್ ಪ್ರೋ ಲೀಗ್ ಹಾಕಿ ಪಂದ್ಯಾವಳಿಯಲ್ಲಿ ಭಾರತ ಕೊನೆಗೂ ಗೆಲುವು ಸಾಧಿಸಿದೆ. ಸತತ ಆರು ಸೋಲುಗಳ ನಂತರ ಭಾರೀ ಹಿನ್ನಡೆ ಅನುಭವಿಸಿರುವ ಭಾರತ ಆಸ್ಟ್ರೇಲಿಯಾ ತಂಡದೊಂದಿಗಿನ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ವರ್ಷದ ಮೊದಲನೇ ಸುತ್ತಿನಲ್ಲಿ ತೀರಾ ಹಿನ್ನಡೆ ಅನುಭವಿಸಿದ್ದ ಭಾರತ ಮೊದಲಿನಿಂದಲೂ ಸೋಲುತ್ತಲೇ ಬಂದಿತ್ತು. ಇದೀಗ ಮೊದಲ ಬಾರಿಗೆ ಗೆದ್ದಿದೆ. ಬುಧವಾರ ನಡೆದ ರೋಚಕ ಪಂದ್ಯದಲ್ಲಿ ಮೊದಲಿಗೆ ಟೈ ಮಾಡಿಕೊಂಡ ಭಾರತ ಶೂಟೌಟ್‌ನಲ್ಲಿ ಗೆಲುವು ಸಾಧಿಸಿತು. ಪ್ರತಿ ಪಂದ್ಯಗಳಿಗಿಂತಲೂ ಭಾರತ ಈ ಪಂದ್ಯದಲ್ಲು ಉತ್ತಮ ಪೈಪೋಟಿ ನೀಡಿತು. ರಕ್ಷಣಾ ವಿಭಾಗ ಉತ್ತಮ ಪ್ರದರ್ಶನ ನೀಡಿದ ಬೆನ್ನಲ್ಲೇ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಗೋಲೇ ದಾಖಲಾಗಲಿಲ್ಲ, ಆಸ್ಟ್ರೇಲಿಯಾದವರೆ 49ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ಸಾಧಿಸಿದರು. 49ನೇ ನಿಮಿಷದಲ್ಲಿ ಹೇವರ್ಡ್ ಗೋಲು ತಂದುಕೊಟ್ಟರು. ಎರಡು ನಿಮಿಷದ ನಂತರವೇ ಭಾರತದ ಶಿಲಾನಂದ ಲಕ್ರಾ, ಗೋಲು ಗಳಿಸಿ ಸಮಬಲ ಸಾಧಿಸಿದರು. ಮುಂದಿನ ಪಂದ್ಯದಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ, ಶೂಟೌಟ್‌ನಲ್ಲಿ ಭಾರತ 3–1ರಿಂದ ಗೆಲುವು ಸಾಧಿಸಿತು.

ಕಬಡ್ಡಿ: ಆಂಧ್ರ ಪ್ರದೇಶ ಸೇರಿ ವಿವಿಧ ತಂಡಗಳಿಗೆ ಗೆಲುವು

• **ವಡೋದರ:** 72ನೇ ಸೀನಿಯರ್ ರಾಷ್ಟ್ರೀಯ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್‌ನ ಮೊದಲನೇ ಪೂಲ್ ಪಂದ್ಯವು ದಿನದ ಅತ್ಯಂತ ರೋಚಕ ಪಂದ್ಯ ಕಂಡಿತು.

ಆಂಧ್ರಪ್ರದೇಶವು ತೆಲಂಗಾಣವನ್ನು 47–45 ಅಂತರದಲ್ಲಿ ಸೋಲಿಸಿತು. ಪೋಟ್ಲಾ ಗೋಪಿಚಂದ್ 17 ಪಾಯಿಂಟ್‌ಗಳನ್ನು ಗಳಿಸಿದರು, ಗಾಳಿ ಲಕ್ಷ್ಮಾ ರೆಡ್ಡಿ 10 ಪಾಯಿಂಟ್‌ಗಳನ್ನು ಸೇರಿಸಿದರು. ತೆಲಂಗಾಣದ ಜೆ.ರಾಜು 20 ಪಾಯಿಂಟ್‌ಗಳನ್ನು ಗಳಿಸಿದರೂ ತಂಡಕ್ಕೆ ಜಯ ತಂದುಕೊಡಲು ಸಾಧ್ಯವಾಗಲಿಲ್ಲ.

ಅದೇ ಪೂಲ್‌ನ ಮತ್ತೊಂದು ಪಂದ್ಯದಲ್ಲಿ ಹರಿಯಾಣವು ತೆಲಂಗಾಣವನ್ನು 49–18 ಅಂತರದಲ್ಲಿ ಮಣಿಸಿತು. ನೀರಜ್ ನಾರ್ವಾಲ್ 11 ಪಾಯಿಂಟ್‌ಗಳೊಂದಿಗೆ ಮುನ್ನಡೆಸಿದರು.

ಪೂಲ್ ಬಿನಲ್ಲಿ ಮಧ್ಯಪ್ರದೇಶವು ಗೋವಾವನ್ನು 35–34 ಅಂತರದಲ್ಲಿ ಸೋಲಿಸಿ ಜಯ ಸಾಧಿಸಿತು. ಭವಾನಿ ರಾಜಪುತ್ 14 ಪಾಯಿಂಟ್‌ಗಳನ್ನು ಗಳಿಸಿದರು. ಪೂಲ್ ಸಿದಲ್ಲಿ ತಮಿಳುನಾಡು ತನ್ನ ಪ್ರಭಾವಿ ಅಭಿಯಾನವನ್ನು ಮುಂದುವರಿಸಿ ವಿದರ್ಭವನ್ನು 40–21 ಅಂತರದಲ್ಲಿ ಸೋಲಿಸಿತು. ಸತೀಶ್ ಕನ್ನನ್ 8 ಪಾಯಿಂಟ್‌ಗಳನ್ನು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಹಿಮಾಚಲ ಪ್ರದೇಶವು ಗುಜರಾತ್‌ನ್ನು 51–34 ಅಂತರದಲ್ಲಿ ಮಣಿಸಿತು. ಯುವ ಮುಂಬಾದ ಅನಿಲ್ 14 ಪಾಯಿಂಟ್‌ಗಳನ್ನು ಗಳಿಸಿದರು. ಪಪ್ಪು ಕಮಲ್ ಕುಮಾರ್ ಮತ್ತು ಮಯಂಕ್ ಸೈನಿ ಸಹಕಾರ ನೀಡಿದರು. ಗುಜರಾತ್‌ನ ಮಿತೇಶ್ ಪ್ರಜಾಪತಿ 13 ಪಾಯಿಂಟ್‌ಗಳನ್ನು ಗಳಿಸಿದರೂ ಹಿಮಾಚಲದ ನಾಲ್ಕು ಆಲ್–ಔಟ್‌ಗಳು ಹಾಗೂ ಬಲಿಷ್ಠ ಟ್ಯಾಕಲ್‌ಗಳು ಗೆಲುವಿಗೆ ಕಾರಣವಾದವು.



ಪೂಲ್ ಡಿನಲ್ಲಿ ಉತ್ತರ ಪ್ರದೇಶವು ಮಣಿಪುರವನ್ನು 70–33 ಅಂತರದಲ್ಲಿ ಮಣಿಸಿ ಟೂರ್ನಿಯ ಅತ್ಯಂತ ದೊಡ್ಡ ಗೆಲುವುಗಳಲ್ಲಿ ಒಂದನ್ನು ದಾಖಲಿಸಿತು. ಉದಯ್ ದಾಬಾಸ್ ಭರ್ಜರಿ 25 ಪಾಯಿಂಟ್‌ಗಳನ್ನು ಗಳಿಸಿದರು. ಸೌರಭ್ 12 ಪಾಯಿಂಟ್‌ಗಳನ್ನು ಸೇರಿಸಿದರು. ಉತ್ತರ ಪ್ರದೇಶವು 53 ರೇಡ್ ಪಾಯಿಂಟ್‌ಗಳನ್ನು ಗಳಿಸಿ 8 ಆಲ್–ಔಟ್‌ಗಳನ್ನು ಸಾಧಿಸಿತು. ಮಣಿಪುರದ ಮಯೆಂಗ್‌ಬಂ ಮೆನ್ಸನ್ 18 ಪಾಯಿಂಟ್‌ಗಳನ್ನು ಗಳಿಸಿದರೂ ತಂಡವು ಯುಪಿ ದಾಳಿಯನ್ನು ತಡೆಯಲು ವಿಫಲವಾಯಿತು.

ಕೇರಳವು ಛತ್ತೀಸ್‌ಗಢವನ್ನು 45–30 ಅಂತರದಲ್ಲಿ ಸೋಲಿಸಿತು. ನಂದು ಟಿ 11 ಪಾಯಿಂಟ್‌ಗಳನ್ನು, ಆದಿತ್ಯನ್ 10 ಪಾಯಿಂಟ್‌ಗಳನ್ನು ಸೇರಿಸಿದರು. ದಿಲ್ಲಿ ತ್ರಿಪುರವನ್ನು 64–42 ಅಂತರದಲ್ಲಿ ಮಣಿಸಿತು. ಆಶಿಷ್ 18 ಪಾಯಿಂಟ್‌ಗಳನ್ನು ಗಳಿಸಿದರು. ಹಿಮಾಂಶು ಸಿಂಗ್ 14 ಪಾಯಿಂಟ್‌ಗಳನ್ನು ಸೇರಿಸಿದರು.

ಮಾ.1ರಿಂದ ಐಟಿಎಫ್ ಟೆನಿಸ್

• **ಬೆಂಗಳೂರು:** ಮಹಿಳಾ ಟೆನಿಸ್‌ನ ಅತಿ ದೊಡ್ಡ ಟೆನಿಸ್ ಪಂದ್ಯಾವಳಿ ಎನಿಸುವ ಐಟಿಎಫ್–35 ಕೂಟವು ಕಲಬುರ್ಗಿಯಲ್ಲಿ ನಡೆಯಲಿದೆ ಎಂದು ಆಯೋಜಕರು ದೃಢಪಡಿಸಿದ್ದಾರೆ. ಅಲ್ಲಿನ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣವು ಯುಎಸ್‌ಡಿ 30 ಸಾವಿರ ಡಾಲರ್ ಮೊತ್ತದ ಪಂದ್ಯಾವಳಿ ಮಾರ್ಚ್ 1–8ರವರೆಗೆ ನಡೆಯಲಿದೆ.


ಪಂದ್ಯಾವಳಿಯು ಐಟಿಎಫ್ ಆಶ್ರಯದ ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆಯು ಐಟಿಎಫ್ ಡಬ್ಲ್ಯು35 ಪಂದ್ಯಾವಳಿಯನ್ನು ನಡೆಸುವುದಕ್ಕೆ ಸಿದ್ಧವಾಗಿದೆ. ಕೂಟವು 32 ಸಿಂಗಲ್ ಆಟಗಾರರನ್ನು ಒಳಗೊಳ್ಳಲಿದೆ. ಮುಖ್ಯ ಡ್ರಾ ಕೇವಲ ನಾಕೌಟ್ ಮಾದರಿಯಾಗಿರುತ್ತದೆ. ಮಾರ್ಚ್ 1ಕ್ಕೆ ಅರ್ಹತಾ ಸುತ್ತಿನ ಪಂದ್ಯಗಳು ನಡೆಯುತ್ತವೆ. 3ರಿಂದ ಮುಖ್ಯ ಡ್ರಾ ಪಂದ್ಯಗಳು ನಡೆಯಲಿವೆ. 16 ಜೋಡಿಗಳು ಡಬಲ್ಸ್ ಪಂದ್ಯಗಳಲ್ಲಿ ಮಿಂಚಲಿದ್ದಾರೆ. 11 ದೇಶಗಳಿಂದ ಪ್ರಮುಖ ಆಟಗಾರರು ಕಣಕ್ಕಿಳಿಯುತ್ತಿರುವುದು ಇನ್ನೊಂದು ವಿಶೇಷ. ಮುಖ್ಯವಾಗಿ ಥೈಲ್ಯಾಂಡ್‌ನ ಅಚಿಲಿಸಾ ಚಾಂತಾ, ಜಾಸ್ಮಿನ್ ಗಿಂಬ್ರೆರೆ ಅವರು ಭಾಗವಹಿಸುತ್ತಿರುವುದು ಕುತೂಹಲ ಮೂಡಿಸಿದೆ.



ಭಾರತದಿಂದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್ ಶ್ರೀವಲ್ಲಿ ರಶ್ಮಿಕಾ, ಅಂಕಿತಾ ರೈನಾ, ಝೀಲ್ ದೇಸಾಯಿ, ಆಕಾಂಕ್ಷಾ, ಶೃತಿ ಮತ್ತು ಸೋನಲ್ ಪಾಟೀಲ್ ಭಾಗವಹಿಸಲಿದ್ದಾರೆ.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5907

ಎಡದಿಂದ ಬಲಕ್ಕೆ
1.ಪರ್ವತವನ್ನು ಹೊತ್ತು ನಿಂತವನು (4)
3.ಜ್ಞಾನ-ವಸ್ತು-ಆಲೋಚನೆ ಹಂಚುವವನು (4)
5.ಸಂಗೀತಕ್ಕೆ ತಕ್ಕಂತೆ ದೇಹ ಚಲಿಸುವ ಕ್ರಿಯೆ (3)
6.ಬೇರೆಯ, ದೀರ್ಘವಾದ ಕಾಲ (4)
8.ಇದು ಸೂರ್ಯನ ದಿನ (4)
10.ಅನುಮಾನದಿಂದ ಜನರೆಡೆಗೆ ಬಂದ ತಮ್ಮ (3)
11. ಗೌರವ ಸೂಚಿಸುವ ಕ್ರಿಯೆ (3)
13. ದೇವತೆ-ಸೃಷ್ಟಿಯ ಇತಿಹಾಸವಿದು (3)
15.ಉತ್ಸವದ ಒಂಬತ್ತು ಇರುಳು (4)
16. ಗಲ್ಲಿಯಲ್ಲಿ ದಿಕ್ಕು ತೋಚದಂತಾಗು (4)

ಮೇಲಿನಿಂದ ಕೆಳಕ್ಕೆ
1.ತೆಂಗಿನ ಕಾಯಿ ಒಣಗಿ ಒಣಕೊಬ್ಬರಿಯಾಗು (5)
2.ಮಣಿ-ಅಮೂಲ್ಯರತ್ನವಿದು (3)
3.ಸಾಮಾನ್ಯಕ್ಕಿಂತ ಉನ್ನತವಾದ ಅರಿವು (3)
4.ಇದು ಮೋಸದಿಂದ ಕೂಡಿದ ವ್ಯವಹಾರ (5)
7.ಮಗನನ್ನು ಹೀಗೂ ಕರೆಯುತ್ತೇವೆ (3)
9.ಆಕಾಶದಲ್ಲಿ ಚಲಿಸುವ ವಾಹನ (3)
10.ಕೃಷ್ಣನಿಂದ ಗೀತೋಪದೇಶ ಪಡೆದವನು (3)
12.ನಿಜವಲ್ಲದ, ಕೃತಕ ವಸ್ತು (3)
13.ಹೆಣ್ಣು ಮಗಳು (2)
14.ಗುಂಪು ಇಲ್ಲಿ ತಲೆಕೆಳಗಾಗಿದೆ (2)

5906 ಉತ್ತರ

ಎಡದಿಂದ ಬಲಕ್ಕೆ:
2.ವಿರಹ 5.ಸುಭಾಷಿತ
6.ವಿಕರಾಳ 7.ಕರುಣೆ
8.ಗಡಿಗೆ 10.ಕಪ್ತಾನ
12.ಅಪಾಯ 15.ವನವಾಸ
16.ರಾಮಾಯಣ
17.ಧಡೂತಿ

ಮೇಲಿನಿಂದ ಕೆಳಕ್ಕೆ :
1.ಮುಸುಕು 2.ವಿತರಣೆ
3.ಹವಿರ್ಭಾಗ 4.ಪುಳಕ
7.ಕಲಂಕ 9.ಗೆಳೆಯ
11.ನವಸತಿ 12.ಅಪರಾಧ
13.ಕವಲು 14.ಆಣತಿ



ರಶ್ಮಿಕಾ ದೇವರ ಕಡೆ ಒಲಿದಿದ್ದು ಹೇಗೆ?

ಕೆ.ಜಿ. ಕುಮಾರ್

ರಶ್ಮಿಕಾ ಮಂದಣ್ಣ ಹಾಗೂ ತೆಲುಗು ನಟ ವಿಜಯ್ ದೇವರಕೊಂಡ ವಿವಾಹ ವೈಭವೋಪೇತವಾಗಿ ನಡೆಯಲು ಸಿದ್ಧತೆ ನಡೆದಿದೆ. ಈ ತಾರಾ ಮದುವೆಗೆ ಆಪ್ತರಿಗೆ ಮಾತ್ರ ಆಹ್ವಾನ ಇದ್ದು, ಮಾರ್ಚ್ ನಾಲ್ಕರಂದು ನಡೆಯುವ ರಿಸೆಪ್ಷನ್‌ಗೆ ಕನ್ನಡ ಚಿತ್ರರಂಗದ ಒಂದಷ್ಟು ಮಂದಿಯನ್ನು ಆಹ್ವಾನಿಸಲಾಗಿದೆ. ಇದರಲ್ಲಿ ರಕ್ಷಿತ್ ಶೆಟ್ಟಿ ನಟಿನ ಯಾರನ್ನೂ ಆಹ್ವಾನಿಸಿಲ್ಲ, ಈ ಆಹ್ವಾನಿತರು ಹಿಂದಿನ ಎಂಗೇಜ್‌ಮೆಂಟಿಗೆ ಬಂದವರೂ ಅಲ್ಲ, ಇದಕ್ಕೆ ಕಾರಣಗಳನ್ನು ವಿವರಿಸುವ ಅಗತ್ಯವೂ ಇಲ್ಲ.

ರಶ್ಮಿಕಾ ಕೊಡಗು ಮೂಲದವಳು. ರಕ್ಷಿತ್ ಶೆಟ್ಟಿ ಅಭಿನಯದ ಕಿರಿಕ್ ಪಾರ್ಟಿ ಚಿತ್ರಕ್ಕೆ ಸಂದರ್ಶನಕ್ಕೆ ಬಂದು ಆಯ್ಕೆ ಆಗಿದ್ದಳು. ಚಿತ್ರ ನಿರೀಕ್ಷೆಗೂ ಮೀರಿದ ಯಶ ಪಡೆಯಿತು. ಈ ಚಿತ್ರದಿಂದ ರಿಷಭ್ ಶೆಟ್ಟಿ, ಪ್ರಮೋದ್ ಶೆಟ್ಟಿ, ಹೀಗೆ ಕೆಲವರು ಬೆಳಕಿಗೆ ಬಂದಿದ್ದೂ ಉಂಟು. ಚಿತ್ರ ಕಲೆಕ್ಷನ್‌ನಲ್ಲಿ ದಾಖಲೆ ಮಾಡುತ್ತಿರುವಂತೆ, ಉಡುಪಿ ಮೂಲದ ರಕ್ಷಿತ್ ಶೆಟ್ಟಿ ನಟನಾಗಿ ಪ್ರತಿಭಾವಂತಿಕೆಯೊಂದಿಗೆ ಸ್ಟಾರ್ ಕೆಟಗರಿಗೆ ಸೇರಿದ್ದಲ್ಲದೆ, ಶ್ರೀಮಂತನೂ ಆದರು. ಇದೇವೇಳೆ ರಕ್ಷಿತ್ ಹಾಗೂ ರಶ್ಮಿಕಾ ನಡುವೆ ಪ್ರೇಮ ಆರಂಭವಾಯಿತು. ಮದುವೆಗೆ ಇಬ್ಬರ ಮನೆಯವರೂ ಒಪ್ಪಿಗೆ ಕೊಟ್ಟರು. ಇವರ ಮದುವೆ ಮತ್ತು ದಿನಾಂಕವನ್ನು ಮೊದಲು ಪ್ರಕಟಿಸಿದ್ದು ಹೊಸದಿಗಂತ. ಅದು ಎಷ್ಟರಮಟ್ಟಿಗೆ ಸುದ್ದಿ ಆಗಿಹೋಯಿತು ಎಂದರೆ, ಒಂದಷ್ಟು ಮಂದಿ ಇದು ಆಧಾರವಿಲ್ಲದ್ದು ಎಂದು ರಕ್ಷಿತ್ ಆಪ್ತರೇ ಟೀಕಿಸಲು ಶುರು ಮಾಡಿದರು. ಕೆಲದಿನಗಳ ನಂತರ ರಕ್ಷಿತ್ ಹಾಗೂ ರಶ್ಮಿಕಾ ಮಂದಣ್ಣ ಎಂಗೇಜ್‌ಮೆಂಟ್ ಇಂತಹ ದಿನ, ಇಂತಹ ಕಡೆ ಎಂದು ಮತ್ತೆ ಅಧಿಕೃತವಾಗಿ ಸುದ್ದಿ ಮಾಡಲಾಯಿತು. ಈ ಜೋಡಿ ನಮಗೂ ಆಹ್ವಾನ ಪತ್ರಿಕೆಯನ್ನು ಖುದ್ದು ಕೊಟ್ಟರು. ವಿರಾಜಪೇಟೆಯಲ್ಲಿ ನಡೆದ ಈ ಎಂಗೇಜ್‌ಮೆಂಟಿಗೆ ಇಡೀ ಚಿತ್ರರಂಗ ಜಮಾಯಿಸಿತ್ತು. ವೇದಿಕೆ ಮೇಲೆ ಅಭಿನಂದಿಸಲು ಬಂದಾಗ ಒಂದು ಸಂತಸದ ನಗೆ ಕೊಟ್ಟ ರಶ್ಮಿಕಾ, ಹಾಗೇ ಒಂದು ಬದಿಗೆ ಸರಿದುಬಂದು, ನಿಮಗೆ ನನ್ನ ಅಭಿನಂದನೆಗಳು, ನೀವು ಬರೆದ ಸುದ್ದಿಯಿಂದ ಈ ಎಂಗೇಜ್‌ಮೆಂಟಿಗೆ ಪ್ರೇರಣೆ ಆಗಿದೆ ಎಂದು ಕೈಕುಲುಕಿದರು. ಇದು ಎಂಗೇಜ್‌ಮೆಂಟ್ ಅಧ್ಯಾಯ.

ಎಂಗೇಜ್‌ಮೆಂಟ್ ಪೂರ್ವದಲ್ಲಿ ರಶ್ಮಿಕಾ ತೆಲುಗಿನಲ್ಲಿ ಗೀತಾಗೋವಿಂದ ಚಿತ್ರದಲ್ಲಿ ಅಭಿಯಿಸಲು ಒಪ್ಪಂದ ಮಾಡಿಕೊಂಡಿದ್ದಳು. ಹಾಗೇ ರಕ್ಷಿತ್ ಒಪ್ಪಿಗೆಯಲ್ಲಿ ಹೈದರಾಬಾದ್‌ಗೂ ಬಂದಳು. ಈ ಸಮಯದಲ್ಲಿ ಆಕೆಯ ಅನುಭವಕ್ಕೆ ಬಂದಿದ್ದು ಏನೆಂದರೆ, ತೆಲುಗು ಚಿತ್ರೋದ್ಯಮಕ್ಕೆ ಹೋಲಿಸಿದರೆ ಕನ್ನಡ ಚಿತ್ರರಂಗ ಪೂರಾ ಚಿಕ್ಕದು, ಇನ್ನೊಂದೆಡೆ ರಕ್ಷಿತ್‌ಗೆ ಹೋಲಿಸಿದರೆ ವಿಜಯ್ ದೇವರಕೊಂಡ ಬಿಗ್‌ಸ್ಟಾರ್ ಎನ್ನುವುದು ಕೂಡಾ ಆಕೆಗೆ ಮನವರಿಕೆ ಆಗಿಹೋಯಿತು. ಒಂದಷ್ಟು ಅನುಭವದಲ್ಲಿ ಚಿತ್ರೀಕರಣ ಸಮಯದಲ್ಲೇ ರಶ್ಮಿಕಾ, ದೇವರಕೊಂಡ ಕಡೆ ವಾಲಿ ಆಗಿತ್ತು. ಇದಕ್ಕೆ ಗೀತಾ ಗೋವಿಂದ ಚಿತ್ರದ ಒಂದಷ್ಟು ಸ್ಟಿಲ್‌ಗಳು ಸಾಕ್ಷಿ ಆಗಿದ್ದವು. ಈ ಹಂತದಲ್ಲಿ ಒದ್ದಾಡುತ್ತಿದ್ದುದು ರಕ್ಷಿತ್‌ಶೆಟ್ಟಿ; ಅಷ್ಟೊತ್ತಿಗೆ ರಶ್ಮಿಕಾ, ರಕ್ಷಿತ್‌ನನ್ನು ದೂರ ಮಾಡಿಕೊಂಡಾಗಿತ್ತು. ಕರೆ ಮಾಡಲಿಲ್ಲ, ಕರೆ ಸ್ವೀಕರಿಸಲಿಲ್ಲ, ಅದಕ್ಕೆ ರಶ್ಮಿಕಾ ತಾಯಿ ಪೂರಾ ಬೆಂಬಲ ಕೊಟ್ಟರು.

ಮತ್ತೆ ನಮ್ಮಿಂದ ಸುದ್ದಿ; ರಕ್ಷಿತ್-ರಶ್ಮಿಕಾ ಮದುವೆ ಕ್ಯಾನ್ಸಲ್;

ಇದನ್ನೂ ಕೆಲವರು ರಾಂಗ್ ಸುದ್ದಿ ಎಂದರು, ಹೆಚ್ಚಿನವರು ಇದು ಹೇಗೆ ಸಾಧ್ಯ ? ಎಂದು ಪ್ರಶ್ನಿಸಿದರು. ಆದರೆ ರಶ್ಮಿಕಾ, ರಕ್ಷಿತ್ ಸಂಪರ್ಕವನ್ನು ಯಾವ ಸನ್ನಿವೇಶದಲ್ಲೂ ಇಟ್ಟುಕೊಳ್ಳಲಿಲ್ಲ, ಹುಟ್ಟುಹಬ್ಬಕ್ಕೂ ಇಬ್ಬರ ನಡುವೆ ಅಭಿನಂದನೆ ವಿನಿಮಯ ಆಗಲಿಲ್ಲ, ಇನ್ನೊಂದೆಡೆ ತೆಲುಗು ಮೀಡಿಯಾದಲ್ಲಿ ದೇವರಕೊಂಡ ರಶ್ಮಿಕಾ ಜತೆ ಪ್ರೇಮದಲ್ಲಿದ್ದಾನೆ ಎನ್ನುವ ಸುದ್ದಿ ಹರಿದಾಡತೊಡಗಿತು. ಈ ಜೋಡಿಯ ಗೀತಾಗೋವಿಂದ ಚಿತ್ರ ಸೂಪರ್‌ಹಿಟ್ ಆಯಿತು. ಇದು ಕೂಡಾ ದೇವರಕೊಂಡ-ರಶ್ಮಿಕಾ ಜೋಡಿಯನ್ನು ಹತ್ತಿರ ತರಲು ಉತ್ತೇಜನ ಕೊಟ್ಟಿತು. ಈ ಹಂತದಲ್ಲಿ ರಶ್ಮಿಕಾ ಪ್ರತಿಕ್ರಿಯಿಸದಿದ್ದರೂ, ಆಕೆಯ ತಾಯಿ ಹೌದು, ರಶ್ಮಿಕಾ ಮದುವೆ ಆಗುವುದಿಲ್ಲ ಎನ್ನುವ ಸ್ಪಷ್ಟನೆ ಕೊಟ್ಟು, ಮದುವೆ ನಿಂತುಹೋದುದಕ್ಕೆ ಷರಾ ಬರೆದರು. ತನ್ನ ಮದುವೆಯ ವಿಷಯದಲ್ಲಿ ಇಷ್ಟೆಲ್ಲಾ ರಾದ್ಧಾಂತ ಆಗಿದ್ದರೂ, ರಕ್ಷಿತ್ ಮಾತ್ರ ರಶ್ಮಿಕಾ ವಿರುದ್ಧ ಯಾವ ಕೆಟ್ಟ ಪದಗಳನ್ನೂ ಬಳಸಲಿಲ್ಲ. ಈಗ ಚಿತ್ರರಂಗದ ಬದುಕಿನಲ್ಲಿ ಕೊಂಚ ಹಿನ್ನಡೆ ಅನುಭವಿಸಿರುವ ರಕ್ಷಿತ್, ತನ್ನ ವಿವಾಹದ ವಿಷಯದಲ್ಲಿ ಯಾವ ಒತ್ತಡಕ್ಕೂ ಮಣಿಯದೆ, ಒಂಟಿ ಆಗಿದ್ದಾರೆ.

ಬೆಂಗಳೂರು ರಾಜರಾಜೇಶ್ವರಿ ನಗರದಲ್ಲಿ ಮದುವೆ ನಂತರದ ಬದುಕಿಗೆ ಶೃಂಗಾರಗೊಂಡಿದ್ದ ರಕ್ಷಿತ್ ಮನೆ ಒಂಟಿ ಆಗಿದೆ. ಇನ್ನೊಂದೆಡೆ, ಜೈಪುರ ಅರಮನೆಯಲ್ಲಿ ರಶ್ಮಿಕಾ ಮದುವೆ ಸಂಭ್ರಮದಿಂದ ನಡೆದಿದೆ.


ಪ್ರಧಾನಿ ನರೇಂದ್ರ ಮೋದಿ ಶುಭಾಶಯ



ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರ ಮದುವೆಯ ಸಂಭ್ರಮ ಈಗ ಕೇವಲ ಚಿತ್ರರಂಗಕ್ಕೆ ಮಾತ್ರ ಸೀಮಿತವಾಗಿಲ್ಲ, ಇಡೀ ದೇಶವೇ ಕುತೂಹಲದಿಂದ ಕಾಯುತ್ತಿರುವ ಈ ವಿರೋಶ್ ವಿವಾಹ ಮಹೋತ್ಸವಕ್ಕೆ ಈಗ ದೇಶದ ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರೇ ಶುಭ ಹಾರೈಸಿದ್ದಾರೆ. ಹೌದು, ಇಂದು ನಡೆಯಲಿರುವ ಈ ಅದ್ದೂರಿ ಮದುವೆಗೆ ಪ್ರಧಾನಿ ಮೋದಿ ಅವರು ಪತ್ರದ ಮುಖೇನ ತಮ್ಮ ಸಂದೇಶ ಕಳುಹಿಸಿದ್ದಾರೆ.

ವಿಜಯ್ ದೇವರಕೊಂಡ ಅವರ ಪೋಷಕರಿಗೆ ಬರೆದ ಪತ್ರದಲ್ಲಿ ಪ್ರಧಾನಿ ಮೋದಿ ಅವರು ಹೀಗೆ ಬರೆದಿದ್ದಾರೆ: ಫೆಬ್ರವರಿ 26ರಂದು ನಡೆಯಲಿರುವ ವಿಜಯ್ ಮತ್ತು ರಶ್ಮಿಕಾ ಅವರ ವಿವಾಹಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಸಂತೋಷವಾಗಿದೆ. ಈ ಅತ್ಯಂತ ಹರ್ಷದಾಯಕ ಮತ್ತು ಮಂಗಳಕರ ಸಂದರ್ಭದಲ್ಲಿ, ದೇವರಕೊಂಡ ಮತ್ತು ಮಂದಣ್ಣ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.ಕೇವಲ ಔಪಚಾರಿಕವಾಗಿ ಅಭಿನಂದಿಸುವುದಷ್ಟೇ ಅಲ್ಲದೆ, ಈ ಜೋಡಿಯ ಬಗ್ಗೆ ಮೋದಿ ಅವರು ಆಡಿರುವ ಮಾತುಗಳು ಎಲ್ಲರ ಮನ ಗೆದ್ದಿವೆ. ಸಿನಿಮೀಯ ಶೈಲಿಯಲ್ಲಿಯೇ ವಿವರಿಸಿರುವ ಪ್ರಧಾನಿ, ವಿಜಯ್ ಅಥವಾ ರಶ್ಮಿಕಾ ಇಬ್ಬರಿಗೂ ಸಿನಿಮಾದ ಸ್ಕ್ರಿಪ್ಟ್‌ಗಳು ಹೊಸದೇನಲ್ಲ, ಆದರೆ ಪ್ರೀತಿ ಮತ್ತು ಅನುರಾಗದಿಂದ ಕೂಡಿದ ಈ 'ದೈವಿಕವಾಗಿ ಬರೆಯಲ್ಪಟ್ಟ ಅಧ್ಯಾಯ', ಅವರಿಬ್ಬರೂ ಬೆಳ್ಳಿತೆರೆಯ ಮೇಲೆ ಸೃಷ್ಟಿಸಿದ ಮ್ಯಾಜಿಕ್‌ಗಿಂತಲೂ ಹೆಚ್ಚು ಪ್ರಕಾಶಮಾನವಾಗಿರಲಿದೆ ಎಂದು ವರ್ಣಿಸಿದ್ದಾರೆ. ಮದುವೆ ಎಂಬ ಪವಿತ್ರ ಬಂಧನದ ಬಗ್ಗೆ ಬರೆಯುತ್ತಾ, ಸಪ್ತಪದಿ ತುಳಿಯುವ ಮೂಲಕ ಜೀವನಪರ್ಯಂತ ಸ್ನೇಹಿತರಾಗಲಿರುವ ಈ ಜೋಡಿಯ ಕನಸುಗಳು ನನಸಾಗಲಿ. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು, ಒಬ್ಬರ ಬಲದಿಂದ ಮತ್ತೊಬ್ಬರು ಕಲಿಯುತ್ತಾ, ಜೀವನದ ಪಠಿಳಿತಗಳಲ್ಲಿ ಸೃಜನಾತ್ಮಕ ಪಾಲುದಾರರಾಗಿ ಸಾಗಲಿ ಎಂದು ಮೋದಿ ಶುಭ ಹಾರೈಸಿದ್ದಾರೆ.





ಫಾದರ್ ಒಟಿಟಿಗೆ ಫುಲ್ ಡಿಮ್ಯಾಂಡ್!

ಸದ್ಯದಲ್ಲೇ ಟೀಸರ್ ಬಿಡುಗಡೆ

ಕನ್ನಡ ಚಿತ್ರರಂಗದ ಲಕ್ಕಿ ನಿರ್ದೇಶಕ ಎಂದೇ ಗುರುತಿಸಿಕೊಂಡಿರುವ ಆರ್.ಚಂದ್ರು ಅವರು ಏನೇ ಮಾಡಿದರೂ ಅದರಲ್ಲಿ ಒಂದು ಹೊಸತನವಿರುತ್ತೆ, ಆ ಛಾರ್ಮನ್ನು ಅವರು ತಮ್ಮ ಮೊದಲ ಚಿತ್ರದಿಂದಲೇ ಬೆಳೆಸಿಕೊಂಡು ಬಂದಿದ್ದಾರೆ, ಉತ್ತಮ ಕಂಟೆಂಟ್ ಹಾಗೂ ಮೇಕಿಂಗ್ ಚಿತ್ರಗಳನ್ನು ನಿರ್ಮಾಣ ಮಾಡುವ ಮೂಲಕ ಕನ್ನಡ ಚಿತ್ರರಂಗದತ್ತ ಇಡೀ ದೇಶವೇ ತಿರುಗಿ ನೋಡುವಂತೆ ಮಾಡಿದ ಮೊದಲಿಗರು ಆರ್. ಚಂದ್ರು. ಇದೀಗ ಅವರ ನೇತೃತ್ವದ ಆರ್‌ಸಿ ಸ್ಟುಡಿಯೋಸ್ ಸಂಸ್ಥೆಯ ಮೊದಲ ಕೊಡುಗೆಯಾಗಿ ಫಾದರ್ ಚಿತ್ರ ಮೂಡಿಬರುತ್ತಿದೆ, ಈಗಾಗಲೇ ತನ್ನೆಲ್ಲ ಕೆಲಸಗಳನ್ನು ಮುಗಿಸಿಕೊಂಡು ಬಿಡುಗಡೆಯ ಹಂತದಲ್ಲಿದೆ, ತಂದೆ - ಮಗನ ನಡುವಿನ ಅವಿನಾಭಾವ ಸಂಬಂಧದ ಸುತ್ತ ನಡೆಯುವ ಕಥಾಹಂದರ ಹೊತ್ತು ಬರುತ್ತಿರುವ ಫಾದರ್ ಚಿತ್ರದಲ್ಲಿ ತಂದೆಯಾಗಿ ಹಿರಿಯನಟ ಪ್ರಕಾಶ್ ರೈ ಹಾಗೂ ಮಗನ ಪಾತ್ರದಲ್ಲಿ ಡಾರ್ಲಿಂಗ್ ಕೃಷ್ಣ ಅವರುಗಳು ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ರಾಜ್‌ಮೋಹನ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಕಂಟೆಂಟ್ ಚಿತ್ರಗಳು ಕನ್ನಡ ಪ್ರೇಕ್ಷಕರನ್ನು ಬಹು ಬೇಗನೇ ಸೆಳೆಯುತ್ತವೆ, ಉತ್ತಮ ಕಂಟೆಂಟ್ ಹಾಗೂ ಮೇಕಿಂಗ್ ಸಿನಿಮಾ ಆಗಿರುವ ಫಾದರ್ ಚಿತ್ರ ತುಂಬಾನೇ ಚೆನ್ನಾಗಿ ಮೂಡಿಬಂದಿದೆ ಎಂಬ ಅಭಿಪ್ರಾಯ ಗಾಂಧಿನಗರದ ಗಲ್ಲಿಗಳಲ್ಲಿ ಕೇಳಿ ಬರುತ್ತಿದೆ, ಇದೇ ಕಾರಣದಿಂದ ಫಾದರ್ ಚಿತ್ರದ ಹೆಸರು ಎಲ್ಲಾ ಕಡೆ ಓಡಾಡುತ್ತಿದೆ, ಇದರ ಜತೆಗೆ ಈ ಚಿತ್ರಕ್ಕೆ ಬಿಡುಗಡೆಗೂ ಮುನ್ನವೇ ಓಟಿಟಿ ಪ್ಲಾಟ್ ಫಾರಂಗಳಲ್ಲಿ ಫುಲ್ ಡಿಮ್ಯಾಂಡ್ ಕ್ರಿಯೇಟ್ ಆಗಿದೆ, ಫಾದರ್ ಚಿತ್ರದ ಬಗ್ಗೆ ಕೇಳಿಕೊಂಡು ಸಾಕಷ್ಟು ಕರೆಗಳು ನಿರ್ಮಾಪಕರಿಗೆ ಬರುತ್ತಿವೆ, ಆದರೆ ನಿರ್ಮಾಪಕ ಆರ್.ಚಂದ್ರು ಅವರು ಚಿತ್ರವನ್ನು ಬಿಗ್ ಸ್ಕ್ರೀನ್ ಮೇಲೆ ಪ್ರೇಕ್ಷಕ ಮಹಾಪ್ರಭುಗಳಿಗೆ ತೋರಿಸುವ ಸಿದ್ದತೆಯಲ್ಲಿದ್ದು, ಅನಂತರವಷ್ಟೇ ಬೇರೆ ಯೋಚನೆ ಮಾಡುವ ಪ್ರಯತ್ನದಲ್ಲಿದ್ದಾರೆ ಎಂದು ಅವರನ್ನು ಹತ್ತಿರದಿಂದ ಬಲ್ಲ ಆತ್ಮೀಯಬಳಗ ಹೇಳುತ್ತಿದೆ, ಸಾಮಾನ್ಯವಾಗಿ ಗಾಂಧಿ ನಗರದಲ್ಲಿ ಒಂದು ಚಿತ್ರದ ಬಗ್ಗೆ ಪಾಸಿಟಿವ್ ಸುದ್ದಿ ದೊಡ್ಡ ಮಟ್ಟದಲ್ಲಿ ತಿರುಗಾಡುತ್ತಿದೆ ಎಂದರೆ ಅದರಲ್ಲಿ ಸಾಕಷ್ಟು ವಿಶೇಷತೆಗಳಿವೆ ಎಂದೇ ಅರ್ಥ. ಏಕೆಂದರೆ ಇಲ್ಲಿ ನೆಗೆಟಿವ್ ಹರಡುವವರೇ ಹೆಚ್ಚು, ಅಥಾದ್ದರಲ್ಲಿ ಚಂದ್ರು ಸಿನಿಮಾಗೆ ಈ ಮಟ್ಟದ ರೆಸ್ಪಾನ್ಸ್ ಸಿಗುತ್ತಿರವುದಕ್ಕೆ ಕಾರಣ ಆ ಚಿತ್ರಕ್ಕಿರುವ ಶಕ್ತಿ.

ಚಿತ್ರರಂಗದಲ್ಲಿ ಏನಾದರೂ ಸಾಧನೆ ಮಾಡಬೇಕೆಂಬ ಹುಚ್ಚಿನಿಂದ 22 ವರ್ಷಗಳ ಹಿಂದೆ ಕೇವಲ 100ರೂ. ಜೇಬಲ್ಲಿಟ್ಟುಕೊಂಡು ಬೆಂಗಳೂರಿನ ಬಸ್ ಹತ್ತಿದ್ದವರು ಆರ್.ಚಂದ್ರು. ಇದೀಗ ಹಂತ ಹಂತವಾಗಿ ಬೆಳೆದಿದ್ದಾರೆ. ಮೂರು ವರ್ಷಗಳ ಹಿಂದೆಯೇ ನೂರಾರು ಕೋಟಿಯ ಬಜೆಟ್‌ನಲ್ಲಿ ಸಿನಿಮಾ ಮಾಡಿ ಸೈ ಅನಿಸಿಕೊಂಡಿದ್ದಾರೆ, ಈ ಹಿಂದೆ ಸಿದ್ದೇಶ್ವರ ಎಂಟರ್ ಪ್ರೈಸಸ್ ಬ್ಯಾನರ್‌ನಲ್ಲಿ 12 ಚಿತ್ರಗಳನ್ನು ನಿರ್ಮಿಸಿದ್ದ ಅವರು ಇದೀಗ ಆರ್.ಸಿ. ಸ್ಟುಡಿಯೋಸ್ ಎಂಬ ಬೃಹತ್ ನಿರ್ಮಾಣ ಸಂಸ್ಥೆಯನ್ನು ಹುಟ್ಟು ಹಾಕಿದ್ದು, ಆ ಮೂಲಕ ಅತ್ಯುತ್ತಮ ಚಿತ್ರಗಳನ್ನು ನಿರ್ಮಿಸುವ ಉದ್ದೇಶ ಹೊಂದಿದ್ದಾರೆ, ಕನ್ನಡ ಚಿತ್ರಗಳನ್ನು ವಿಶ್ವಮಟ್ಟದಲ್ಲಿ ವಿಜೃಂಭಿಸುವಂತೆ ಮಾಡಬೇಕೆಂಬ ಮಹದಾಸೆಯಿಂದಲೇ ಆರ್.ಸಿ. ಸ್ಟುಡಿಯೋಸ್ ಆರಂಭಿಸಿದ್ದಾರೆ, ಮೊದಲ ಪ್ರಯತ್ನವಾಗಿ ಫಾದರ್ ಚಿತ್ರವನ್ನು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಮಾಡುತ್ತಿದ್ದಾರೆ.

ಫಾದರ್ ಚಿತ್ರದಲ್ಲಿ ಅಪ್ಪ - ಮಗನ ಬಾಂಧವ್ಯದ ಕುರಿತಾದ ಮನಮಿಡಿಯುವ ಕಥಾಹಂದರವಿದೆ, ಯುವಪ್ರತಿಭೆ ರಾಜ್ ಮೋಹನ್ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ, ಫಾದರ್ ಚಿತ್ರದಲ್ಲಿ ತಂದೆಯ ಪಾತ್ರದಲ್ಲಿ ಹಿರಿಯ ನಟ ಪ್ರಕಾಶ್ ರೈ ಹಾಗೂ ಮಗನ ಪಾತ್ರದಲ್ಲಿ ನಟ ಡಾರ್ಲಿಂಗ್ ಕೃಷ್ಣ ಅವರುಗಳು ಮನೋಜ್ಞವಾಗಿ ಅಭಿನಯಿಸಿದ್ದಾರೆ. ನಾಯಕಿಯಾಗಿ ಅಮೃತ ಅಯ್ಯಂಗಾರ್ ಅವರು ಕಾಣಿಸಿಕೊಂಡಿದ್ದಾರೆ. ನಟ ನಾಗಭೂಷಣ್ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ, ಮಂಜು ಮಾಂಡವ್ಯ ಅವರ ಸಂಭಾಷಣೆ, ಸುಜ್ಞಾನ್ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ,



ಲಾರಿ ಚಾಲಕನ ಜೀವನಗಾಥೆ ದೇವನೊಬ್ಬ ಜಾದೂಗರ







ಕ್ರೈಂ, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ, ದೇವನೊಬ್ಬ ಜಾದೂಗಾರ. ಮನುಷ್ಯನು ಜೀವನದಲ್ಲಿ ತಾನು ಏನೇನೋ ಆಗಬೇಕು ಎಂದು ಬಯಸುತ್ತಾನೆ, ಆದರೆ ಆ ದೇವರ ನಿರ್ಧಾರವೇ ಬೇರೆ ಇರುತ್ತದೆ, ಆತ ಆಡಿಸಿದಂತಷ್ಟೇ ನಾವು ಆಡಬೇಕು ಎಂಬ ಕಾನ್ಸೆಪ್ಟ್ ಮೇಲೆ ನಿರ್ಮಾಣವಾಗಿರುವ ಚಿತ್ರ, ದೇವನೊಬ್ಬ ಜಾದೂಗಾರ. ಖಟ್ವಾಂಗ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಬಾಲಕೃಷ್ಣ ಶೆಟ್ಟಿ ಅವರು ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ, ಇನ್ನು ಈ ಚಿತ್ರಕ್ಕೆ ವರುಣ್ ಎಸ್. ವಸಿಷ್ಠ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಸೌದಿಯಲ್ಲಿ ಉದ್ಯಮಿಯಾಗಿರುವ ಬಾಲಕೃಷ್ಣ ಶೆಟ್ಟಿ ಅವರ ಮಗ ಸಚಿನ್ ಶೆಟ್ಟಿ ಅವರೇ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಈ ಚಿತ್ರದ ಮೂಲಕ ಮೊದಲಬಾರಿಗೆ ಸಚಿನ್ ಬೆಳ್ಳಿತೆರೆಗೆ ಎಂಟ್ರಿ ಕೊಡುತ್ತಿದ್ದಾರೆ, ಈಗಾಗಲೇ ಬಿಡುಗಡೆಗೆ ಸಿದ್ದವಾಗಿರುವ ಈ ಚಿತ್ರದ ಟೀಸರ್ ಕಳೆದ ತಿಂಗಳಷ್ಟೇ ಬಿಡುಗಡೆಯಾಗಿದ್ದು ಅತಿ ಹೆಚ್ಚು ವೀಕ್ಷಣೆಯಾಗುವ ಮೂಲಕ ವೈರಲ್ ಆಗಿದೆ,


ದೇವನೊಬ್ಬ ಜಾದೂಗಾರ ಚಿತ್ರದ ನಿರ್ಮಾಪಕ ಬಾಲಕೃಷ್ಣ ಶೆಟ್ಟಿ ಮೊದಲಬಾರಿಗೆ ಚಿತ್ರ ನಿರ್ಮಾಣಕ್ಕಿಳಿದಿರುವ ಕುರಿತಂತೆ ಮಾತನಾಡುತ್ತ ನಾನು ಹಲವಾರು ವರ್ಷಗಳಿಂದ ವಿದೇಶದಲ್ಲಿ ನೆಲೆಸಿದ್ದರೂ, ಕನ್ನಡ ಭಾಷೆಯ ಮೇಲೆ ಬಹಳ ಅಭಿಮಾನ. ನನ್ನ ಮಗ ಸಚಿನ್‌ಗೆ ಬಾಲ್ಯದಿಂದಲೂ ತಾನೊಬ್ಬ ನಟನಾಗಬೇಕೆಂದು ಆಸೆ ಇತ್ತು. ಆತನೇ ನಿರ್ದೇಶಕ ವರುಣ್ ಅವರನ್ನು ಕರೆತಂದ. ಹೀಗೆ ನಿರ್ದೇಶಕ ವರುಣ್ ವಸಿಷ್ಠ ಅವರು ನನಗೆ ಪರಿಚಯವಾದರು. ಅನಂತರ ವರುಣ್ ನನ್ನ ಮಗನಿಗಾಗಿ ಮಾಡಿದ ಕಥೆ ಹೇಳಿದರು, ಅವರು ಹೇಳಿದ ಕಥೆ ನಮಗೂ ತುಂಬಾ ಇಷ್ಟವಾಯಿತು, ಅನಂತರ ಚಿತ್ರನಿರ್ಮಾಣಕ್ಕೆ ಮುಂದಾದೆ ಎಂದು ವಿವರಿಸಿದರು.

ನಿರ್ದೇಶಕ ವರುಣ್ ವಸಿಷ್ಠ ಮಾತನಾಡುತ್ತ ನಾನು ನನ್ನ ಕಾಲೇಜು ದಿನಗಳಿಂದಲೂ ಹಲವಾರು ಕಿರುಚಿತ್ರಗಳನ್ನು ಮಾಡಿಕೊಂಡು ಬಂದಿದ್ದೇನೆ. ನನಗೆ ಫೇಸ್‌ಬುಕ್‌ನಲ್ಲಿ ಸಚಿನ್ ಅವರು ಪರಿಚಯವಾದರು. ಉಡುಪಿಗೆ ಹೋದಾಗ ಅವರನ್ನು ಭೇಟಿ ಮಾಡಿದಾಗ ಅವರಲ್ಲೊಬ್ಬ ಅತ್ಯುತ್ತಮ ಕಲಾವಿದ ಇದ್ದಾನೆಂದು ಗೊತ್ತಿರಲಿಲ್ಲ, ಅವರು ಮೊದಲ ಚಿತ್ರ ಎಂಬ ಭಾವನೆ ಬರದ ಹಾಗೆ ಅಭಿನಯಿಸಿ ಪಾತ್ರಕ್ಕೆ ಜೀವ ತುಂಬಿದ್ದಾರೆ, ಮುಖ್ಯವಾಗಿ ಹಿರಿಯನಟಿ ಸುಧಾ ಬೆಳವಾಡಿ ಅವರು ಸಿಎಂ ಪಾತ್ರವನ್ನು ನಿರ್ವಹಿಸಿದ್ದಾರೆ. ನಮ್ಮ ಚಿತ್ರದಲ್ಲಿ ನಟಿಸಿರುವ ಪ್ರತಿಯೊಬ್ಬ ಕಲಾವಿದರೂ ಸ್ಪರ್ಧೆಗೆ ಬಿದ್ದವರಂತೆ ಅಭಿನಯಿಸಿದ್ದಾರೆ. ಕಾಶಿಪುರ ಎಂಬ ಊರಲ್ಲಿ ನಡೆಯುವ ಕಥೆಯನ್ನು ಈ ಚಿತ್ರದಲ್ಲಿ ಹೇಳಿದ್ದೇನೆ, ಲಾರಿ ಚಾಲಕ ದೇವನ ಜೀವನ ಕಥೆಯನ್ನು ಈ ಚಿತ್ರದಲ್ಲಿ ಹೇಳಿದ್ದೇವೆ, ಅವನ ಜೀವನದಲ್ಲಿ ನಡೆಯುವ ಕಲ್ಪನಾತೀತ ಘಟನೆಗಳು, ಅದಕ್ಕೆಲ್ಲ ಕಾರಣವೇನು ಇದೆಲ್ಲವನ್ನೂ ನಮ್ಮ ಚಿತ್ರ ಹೇಳಲಿದೆ, ಜೊತೆಗೆ ಓರ್ವ ಮಂಗಳಮುಖಿಯ ಪಾತ್ರವೂ ಸಹ ಚಿತ್ರಕಥೆಯಲ್ಲಿ ಪ್ರಮುಖವಾಗಿ ಬರಲಿದೆ, ಕಾಶಿಪುರದ ಇಬ್ಬರು ವ್ಯಕ್ತಿಗಳು ದೇವನ ಮೇಲೆ ಬೀರಿದ ಪ್ರಭಾವ, ಅದರಿಂದ ದೇವನ ಜೀವನ ಬದಲಾಗುವ ರೀತಿ, ಅಂತಿಮವಾಗಿ ದೇವ ಏನಾಗುತ್ತಾನೆ ಇದೆಲ್ಲವನ್ನೂ ಎಳೆ ಎಳೆಯಾಗಿ ಚಿತ್ರದಲ್ಲಿ ತೆರೆದಿಟ್ಟಿದ್ದೇನೆ. ಈಗಾಗಲೇ ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಮುಗಿದು ಚಿತ್ರವೀಗ ಬಿಡುಗಡೆಯ ಹಂತದಲ್ಲಿದೆ. ಬೆಂಗಳೂರು, ತುಮಕೂರು ಸುತ್ತಮುತ್ತ ಚಿತ್ರೀಕರಣ ನಡೆದಿದೆ ಎಂದು ಹೇಳಿದರು.

ನಾಯಕ ಸಚಿನ್ ಮಾತನಾಡಿ ನನಗೆ ಅಭಿನಯಿಸುವ ಆಸೆ ಇದ್ದರೂ ಸರಿಯಾದ ಅವಕಾಶ ಸಿಕ್ಕಿರಲಿಲ್ಲ, ವರುಣ್ ಮಾಡಿದ್ದ ಕಥೆ ಚೆನ್ನಾಗಿತ್ತು, ಹಾಗಾಗಿ ಚಿತ್ರ ಪ್ರಾರಂಭಿಸಿದೆವು ಎಂದು ಹೇಳಿದರು. ಚಿತ್ರದ ನಾಯಕಿಯಾಗಿ ಪ್ರಿಯಾ ಜೆ. ಆಚಾರ್ ನಟಿಸಿದ್ದಾರೆ,

ಈ ಚಿತ್ರಕ್ಕೆ ಋತ್ವಿಕ್ ಮುರಳೀಧರ ಅವರ ಹಿನ್ನೆಲೆ ಸಂಗೀತ, ಶ್ಯಾಮ್‌ರಾವ್ ನಗರಗದ್ದೆ ಅವರ ಕ್ಯಾಮೆರಾ ವರ್ಕ್, ವಿಜೇತ್‌ಚಂದ್ರ ಅವರ ಸಂಕಲನವಿದೆ.

2016ರ ನೈಜಘಟನೆ ಆಧಾರಿತ ಬಿಂಗೋ



2016ರಲ್ಲಿ ನಡೆದಂಥ ಒಂದು ನೈಜ ಘಟನೆಯನ್ನಾಧರಿಸಿ ನಿರ್ಮಾಣವಾದ ಚಿತ್ರ ಬಿಂಗೋ. ಈ ಹಿಂದೆ ಶಂಭೋ ಶಿವಶಂಕರ ಚಿತ್ರ ನಿರ್ದೇಶಿಸಿದ್ದ ಶಂಕರ ಕೋನಮಾನಹಳ್ಳಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಮತ್ತೊಂದು ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ ಇದಾಗಿದೆ, ಈಗಾಗಲೇ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನೆಲ್ಲ ಮುಗಿಸಿಕೊಂಡು ಸೆನ್ಸಾರ್ ಹಂತದಲ್ಲಿರುವ ಈ ಚಿತ್ರದ ಟೀಸರ್, ಸಾಂಗ್ಸ್ ಸದ್ಯದಲ್ಲೇ ಬಿಡುಗಡೆ ಮಾಡಲಿರುವುದಾಗಿ ನಿರ್ದೇಶಕರು ಹೇಳಿದ್ದಾರೆ, ಈ ಚಿತ್ರದ ವಿಶೇಷ ಪಾತ್ರವೊಂದರಲ್ಲಿ ನಟಿ ರಾಗಿಣಿ ದ್ವಿವೇದಿ ಅವರು ಅಭಿನಯಿಸಿದ್ದು, ಅವರ ಪಾತ್ರವು ಎರಡು ಶೇಡ್‌ಗಳಲ್ಲಿ ಮೂಡಿಬರಲಿದೆ. ರಾಗಿಣಿ ಅವರ ಪಾತ್ರ ಚಿತ್ರಕಥೆಗೆ ಟರ್ನಿಂಗ್ ಪಾಯಿಂಟ್ ಆಗಿ ಮೂಡಿಬರಲಿದೆ, ರಾಜೇಶ್ ನಟರಂಗ, ಆರ್. ಕೆ. ಚಂದನ್ ಹಾಗೂ ರಕ್ಷಾ ನಿಂಬರ್ಗಿ ಇತರ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ರಾಗಿಣಿ ದ್ವಿವೇದಿ ಅವರ ಪಾತ್ರವನ್ನು ತೆರೆಯಮೇಲೆ ನೋಡಿದರೇ ಚೆನ್ನಾಗಿರುತ್ತೆ ಎಂದು ನಿರ್ದೇಶಕ ಶಂಕರ್ ಕೋನಮಾನಹಳ್ಳಿ ಅವರು ಹೊಸದಿಗಂತದೊಂದಿಗೆ ಮಾತನಾಡುತ್ತ ತಿಳಿಸಿದ್ದಾರೆ.

2016ರಲ್ಲಿ ಪ್ರಧಾನಿ ಮೋದಿ ಅವರು ನೋಟ್ ಬ್ಯಾನ್ ಮಾಡಿದ ಸಂದರ್ಭದಲ್ಲಿ ದೇಶಾದ್ಯಂತ ಸಾಕಷ್ಟು ಸ್ಕ್ಯಾಮ್‌ಗಳು ನಡೆದವು, ಆದರೆ ಈ ಚಿತ್ರದಲ್ಲಿ ಅದೆಲ್ಲಕ್ಕಿಂತ ಅಚ್ಚರಿದಾಯಕ ಹಾಗೂ ಯಾರೊಬ್ಬರೂ ಊಹಿಸದಂಥ ಬಿಗ್ ಸ್ಕ್ಯಾಮ್ ವೊಂದು ನಡೆದಿರುವ ಬಗ್ಗೆ ಖಚಿತ ಮಾಹಿತಿ ತಿಳಿದುಕೊಂಡ ನಿರ್ದೇಶಕ ಶಂಕರ್ ಕೋನಮಾನಹಳ್ಳಿ ಅವರು ಆ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ ಚಿತ್ರಕಥೆಯಲ್ಲಿ ತಂದಿದ್ದಾರೆ, ಮುಂದಿನ ದಿನಗಳಲ್ಲಿ ಬಿಂಗೋ ಚಿತ್ರದ ಹಾಡುಗಳು ಹಾಗೂ ಟೀಸರ್, ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಅಲ್ಲದೆ ಚಿತ್ರವನ್ನು ಏಪ್ರಿಲ್ ವೇಳೆಗೆ ರಿಲೀಸ್ ಮಾಡುವ ಯೋಜನೆಯಿದೆ ಎಂದು ನಿರ್ದೇಶಕ ಶಂಕರ್ ಕೋನಮಾನಹಳ್ಳಿ ಹೇಳಿದ್ದಾರೆ.

ಬಿಂಗೋ ಚಿತ್ರಕ್ಕೆ ಸುಮಾರು 42 ದಿನಗಳ ಕಾಲ ಮೂರು ಹಂತಗಳ ಚಿತ್ರೀಕರಣವನ್ನು ಬೆಂಗಳೂರಿನ ಸುತ್ತಮುತ್ತಲ ಪ್ರದೇಶಗಳಲ್ಲೇ ನಡೆಸಲಾಗಿದೆ. ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಆರ್.ಕೆ, ಸ್ಟುಡಿಯೋಸ್ ಮತ್ತು ಮುತರಾ ವೆಂಚರ್ಸ್ ಲಾಂಛನದಲ್ಲಿ ಲಲಿತಾಸ್ವಾಮಿ ಮತ್ತು ಆರ್. ಪರಾಂಕುಶ ಅವರು ನಿರ್ಮಾಣ ಮಾಡುತ್ತಿದ್ದಾರೆ. ಹಿತನ್‌ಹಾಸನ್ ಅವರು ಸಂಗೀತ ನೀಡಿರುವ ಮೂರು ವಿಭಿನ್ನ ಶೈಲಿಯ ಹಾಡುಗಳು ಈ ಚಿತ್ರದಲ್ಲಿದೆ. ಅಲ್ಲದೆ ನಟರಾಜ್ ಮುದ್ದಾಲ್ ಅವರು ಚಿತ್ರದ ಛಾಯಾಗ್ರಹಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇನ್ನು ಈ ಚಿತ್ರದಲ್ಲಿ ಮೈನವಿರೇಳಿಸುವ ಸಾಹಸ ಸನ್ನಿವೇಶಗಳಿದ್ದು, ನರಸಿಂಹ ಅವರು ಸಾಹಸ ಸಂಯೋಜನೆ ಮಾಡಿದ್ದಾರೆ. ಕಂಬಿ ರಾಜು ಅವರ ನೃತ್ಯ ನಿರ್ದೇಶನ ಹಾಗೂ ವೆಂಕಿ ಯುವಿಡಿ ಅವರ ಸಂಕಲನ ಬಿಂಗೊ ಚಿತ್ರಕ್ಕಿದೆ. ರಾಗಿಣಿ ದ್ವಿವೇದಿ, ಆರ್.ಕೆ. ಚಂದನ್, ರಾಜೇಶ್ ನಟರಂಗ, ಪವನ್(ಮಜಾ ಟಾಕೀಸ್), ಆಶಾ ಸುಜಯ್, ಶ್ರವಣ್, ಮುರಳಿ ಪೂರ್ವಿಕ್, ಅಪೂರ್ವ ಮುಂತಾದವರು ಬಿಂಗೋ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.





ಕೃಷ್ಣ ವಂಶಿಯ ಪ್ರೇಮ ಕಥೆಗೆ ಸುಬ್ರಮಣ್ಯ ಪ್ರಸಾದ್ ನಿರ್ದೇಶನ

ನಾಚಿಕೆ ಸ್ವಭಾವದ ಕೃಷ್ಣ ಹಾಗೂ ಮಾತಿನ ಮಲ್ಲಿ ವಂಶಿಯ ಮಧ್ಯೆ ಅರಳುವ ಪ್ರೇಮಕಥೆಯನ್ನು ಕೃಷ್ಣವಂಶಿಯ ಮೂಲಕ ಹೇಳಹೊರಟಿದ್ದಾರೆ ನಿರ್ದೇಶಕ ಸುಬ್ರಮಣ್ಯ ಪ್ರಸಾದ್. ಹೊಸ ಥರದ ಕೌಟುಂಬಿಕ ಕಥೆಗಳನ್ನು ನೀಡುತ್ತಿರುವ ಉದಯ ವಾಹಿನಿ ಕೃಷ್ಣವಂಶಿ ಎಂಬ ಹೊಸ ಸೀರಿಯಲ್‌ನ್ನು ಮಾ.2ರಿಂದ ಬಿತ್ತರಿಸಲಿದೆ, ಅಪ್ಪಟ ಮಾತಿನ ಮಲ್ಲಿ ವಂಶಿ, ನಾಚಿಕೆ ಸ್ವಭಾವದ ಹುಡುಗ ಕೃಷ್ಣ ಇವರಿಬ್ಬರ ನಡುವಿನ ಪ್ರೇಮಕಥೆ ಇದರಲ್ಲಿದೆ. ಅಣ್ಣನ ಹೋಟೆಲ್ ನಡೆಸುತ್ತಿರುವ ಕೃಷ್ಣನಿಗೆ ತುಂಬಾ ನಾಚಿಕೆ ಸ್ವಭಾವ. ವಂಶಿಗೆ ಕೃಷ್ಣನ ಈ ನಾಚಿಕೆ ಸ್ವಭಾವವೇ ಇಷ್ಟವಾಗುತ್ತದೆ. ಇವರಿಬ್ಬರ ನಡುವೆ ಪ್ರೀತಿ ಅರಳುತ್ತದೆ. ಇಬ್ಬರ ಪ್ರೀತಿಗೆ ಅನೇಕ ಅಗ್ನಿಪರೀಕ್ಷೆಗಳು ಎದುರಾಗುತ್ತದೆ. ತಂದೆ ದೊರೆಸ್ವಾಮಿಗೆ ತನ್ನ ಮಗಳು ವಂಶಿ ಎಂದರೆ ಜೀವ. ಮಗಳು ಮದುವೆಯಾಗಿ ಗಂಡನ ಮನೆಗೆ ಹೋಗುವ ಕಲ್ಪನೆಯೇ ಅವರಿಗೆ ಸಹಿಸಲಾಗದು. ಮನೆ ಅಳಿಯನಾಗಲು ಒಪ್ಪುವಂಥ ಹುಡುಗನನ್ನೇ ಮಗಳು ಮದುವೆಯಾಗಲಿ ಎಂಬ ಆಸೆ ಅವರದು. ಆದರೆ ವಂಶಿಯ ಕನಸು ಬೇರೆ ದಿಕ್ಕಿನಲ್ಲಿರುತ್ತದೆ. ಅವಿಭಕ್ತ ಕುಟುಂಬದಲ್ಲಿ ಅಪ್ಪನ ಜೊತೆ ಗಂಡನ ಮನೆಯಲ್ಲಿ ಒಟ್ಟಿಗೇ ಬದುಕುವ ಕನಸು ಆಕೆಯದು. ವಂಶಿಯ ಕನಸು ನನಸಾಗುತ್ತಾ? ಕೃಷ್ಣ ಮತ್ತು ವಂಶಿಯ ಪ್ರೀತಿ ಯಶಸ್ವಿಯಾಗುತ್ತಾ ಎನ್ನುವುದೇ ಕಥೆ. ಕೃಷ್ಣನಾಗಿ ರೋಹನ್, ವಂಶಿಯಾಗಿ ಶಾರದಾ ಪೂಂಡಿ ಅಭಿನಯಿಸುತ್ತಿದ್ದು, ಗಿರಿಜಾ ಲೋಕೇಶ್, ಹನುಮಂತೇಗೌಡ, ಹಂಸ, ವಿಜಯ್, ರಜನಿ ಉಳಿದ ಪಾತ್ರಗಳಲ್ಲಿದ್ದಾರೆ, ತೇಜಸ್ವಿನಿ ಭಾಸ್ಕರ್ ಮಂಗಾಡಹಳ್ಳಿ ಇದರ ನಿರ್ಮಾಪಕರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26